# ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಜನ ಚಳುವಳಿಯ
ಬದ್ಧ ಹಿತೈಷಿ
**ಪಿ.ಹರಿಶ್ಚಂದ್ರರಾವ್**



ಸಂಪುಟ 13 | ಸಂಚಿಕೆ 9 | ಫೆಬ್ರವರಿ 25–ಮಾರ್ಚ್ 3, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



## ಸರ್ಕಾರ ಆದಿವಾಸಿಗಳ ಪರ ಏಕಿಲ್ಲ?



## ಮಹಾರಾಷ್ಟ್ರ

## ವಚನ ಭ್ರಷ್ಟತೆಯ ವಿರುದ್ಧ ರೈತರ 'ಲಾಂಗ್ ಮಾರ್ಚ್'



## ಪುಲ್ವಾಮದ ನಂತರ....

## ಕಲ್ಯಾಣ ವೆಚ್ಚಗಳಿಗೆ ಇಲ್ಲವಾದ ಸಂಪನ್ಮೂಲ





## ಕಾಶ್ಮೀರ 370ನೇ ವಿಧಿ ರದ್ದಾಗಬಾರದೇಕೆ?

# ಸಾಕಷ್ಟು ಸುಗ್ರೀವಾಜ್ಞೆಗಳನ್ನು ಹೊರಡಿಸಿದ್ದೀರ, ಈಗ ಆದಿವಾಸಿಗಳ ಪರವಾಗಿ ಏಕಿಲ್ಲ?

## –ಪ್ರಧಾನ ಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ



ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಅವರು ಒಂದು ಪತ್ರವನ್ನು ಬರೆದು, ಬೇರೆ ಹಲವು ವಿಷಯಗಳ ಮೇಲೆ ಸುಗ್ರೀವಾಜ್ಞೆಗಳ ವಿಧಾನವನ್ನು ಅಂಗೀಕರಿಸಿರುವ ಸರಕಾರ ಆದಿವಾಸಿಗಳು ಮತ್ತು ಪಾರಂಪರಿಕ ಅರಣ್ಯವಾಸಿಗಳಿಗೆ ಒಕ್ಕಲೆಬ್ಬಿಸುವುದರಿಂದ ರಕ್ಷಣ ಕೊಡಲು ತಕ್ಷಣವೇ ಸುಗ್ರೀವಾಜ್ಞೆ ಹೊರಡಿಸದಿದ್ದರೆ ಅದೊಂದು ಅವರಿಗೆ ಮಾಡುವ ದೊಡ್ಡ ಅನ್ಯಾಯವಾಗುತ್ತದೆ ಎಂದು ಹೇಳಿದ್ದಾರೆ.

ವೈಲ್ಡ್ ಲೈಫ್ ಫಸ್ಟ್ ವರ್ಸಸ್ ಅರಣ್ಯ ಮತ್ತು ಪರಿಸರ ಮಂತ್ರಾಲಯ ರಿಟ್ ಅರ್ಜಿ ಅರಣ್ಯ ಹಕ್ಕು ಕಾಯ್ದೆಯನ್ನೇ ಪ್ರಶ್ನಿಸಿತ್ತು. ಈ ಕುರಿತಂತೆ ಸುಪ್ರಿಂ ಕೋರ್ಟ್ ಫೆಬ್ರುವರಿ 13ರಂದು ನೀಡಿರುವ ಆದೇಶ ಯಾರ್‍ಯಾರ ದಾವೆಗಳನ್ನು ಸ್ವೀಕರಿಸಲಾಗಿಲ್ಲವೋ ಆ ಎಲ್ಲ ಆದಿವಾಸಿಗಳು ಮತ್ತು ಪಾರಂಪರಿಕ ಅರಣ್ಯವಾಸಿಗಳನ್ನು ಅವರು ಈಗಿರುವ ನೆಲದಿಮದ ಒಕ್ಕಲೆಬ್ಬಿಸಬೇಕು ಎಂದಿದೆ ಎಂಬ ಸಂಗತಿಯನ್ನು ಪ್ರಧಾನ ಮಂತ್ರಿಗಳ ಗಮನಕ್ಕೆ ತರುತ್ತ , 42.19 ಲಕ್ಷ ದಾವೆಗಳಲ್ಲಿ 18.89 ಲಕ್ಷ ದಾವೆಗಳನ್ನು ಮಾತ್ರ ಸ್ವೀಕರಿಸಿರುವ ಅರ್ಥವೆಂದರೆ 23.30ಲಕ್ಷ ಮಂದಿ ಈ ಆದೇಶದ ಪ್ರಕಾರ ಒಕ್ಕಲೆಬ್ಬಿಸುವ ಕ್ರಿಯೆಗೆ ತುತ್ತಾಗುತ್ತಾರೆ ಎಂದು ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ. ಇದನ್ನು ತಡೆಯಲು ಸುಗ್ರೀವಾಜ್ಞೆ ತರದಿದ್ದರೆ ಅದು ಆದಿವಾಸಿಗಳ ಮೇಲೆ ಸಮರ ಸಾರಿದಂತೆಯೇ ಎಂಬುದನ್ನು ಪ್ರಧಾನಿಗಳ ಗಮನಕ್ಕೆ ತಂದಿದ್ದಾರೆ.

ವಿಚಾರಣೆಯ ಸಮಯದಲ್ಲಿ ಬಹಳ ಮಹತ್ವದ ದಿನದಂದು ಕೇಂದ್ರ ಸರಕಾರದ ಪರವಾಗಿ ವಾದಿಸಬೇಕಾಗಿದ್ದ ವಕೀಲರು ಗೈರು ಹಾಜರಾಗಿದ್ದುದು ಅತ್ಯಂತ ಖೇದಕರ ಸಂಗತಿ. ಆದಿವಾಸಿಗಳ ಹಕ್ಕುಗಳನ್ನು ಕುರಿತಂತೆ ಈ ವಿಶ್ವಾಸಘಾತ ಅರ್ಜಿದಾರರೊಂದಿಗೆ ಮಂತ್ರಾಲಯದ ಶಾಮೀಲಿನ ಅಂತಿಮ ಫಲಿತಾಂಶ . ಈ ಕೇಸಿನಲ್ಲಿ ಬಹಳಷ್ಟು ಅರ್ಜಿದಾರರು ಅರಣ್ಯ ಇಲಾಖೆಯ ನಿವೃತ್ತ ಅಧಿಕಾರಿಗಳು. "ನಿಮ್ಮ ಸರಕಾರದ ಕಾನೂನು ಪ್ರತಿನಿಧಿಗಳು ಯಾವ ಹಂತದಲ್ಲಿ ಆದಿವಾಸಿಗಳು ಮತ್ತು ಪಾರಂಪರಿಕ ಅರಣ್ಯವಾಸಿಗಳ ಹಕ್ಕುಗಳ ರಕ್ಷಣೆಯಲ್ಲಿ ಒಂದು ಬಲವಾದ ನಿಲುವನ್ನು ತಳೆಯಲೇ ಇಲ್ಲ" ಎಂದು ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಪ್ರಧಾನಿಗಳಿಗೆ ಹೇಳಿದ್ದಾರೆ.

ಅರಣ್ಯ ಹಕ್ಕುಗಳ ಕಾಯ್ದೆಯ ಜಾರಿಯ ಕೇಂದ್ರ ಸಂಸ್ಥೆ ಬುಡಕಟ್ಟು ವಯಹಾರಗಳ ಮಂತ್ರಾಲಯ. ಆದ್ದರಿಂದ ಈ ಕೇಸಿನ ಜವಾಬ್ದಾರಿಯನ್ನು ಆ ಮಂತ್ರಾಲಯಕ್ಕೆ ಕೊಡುವ ಬದಲು " ನಿಮ್ಮ ಸರಕಾರ ಉದ್ದೇಶಪೂರ್ವಕವಾಗಿಯೇ ಆರಂಭದಿಂದಲೇ ಈ ಕಾಯ್ದೆಗೆ ಸಂಪೂರ್ಣವಾಗಿ ವಿರುದ್ಧವಾಗಿರುವ ಮಂತ್ರಾಲಯಕ್ಕೆ ಅದನ್ನು ಬಿಟ್ಟು ಕೊಟ್ಟಿದೆ" ಎಂದೂ ಬೃಂದಾ ಅವರು ಪ್ರಧಾನಿಗಳಿಗೆ ನೆನಪಿಸಿದ್ದಾರೆ.

ಸೂಕ್ತ ವಿಧಾನ ಅನುಸರಿಸದೆ ಯಾರನ್ನೂ ಒಕ್ಕಲೆಬ್ಬಿಸುವಂತಿಲ್ಲ ಎಂದು ಈ ಕಾಯ್ದೆಯ ಸೆಕ್ಷನ್4(5) ಹೇಳುತ್ತದೆ. ಆದರೆ ಇದನ್ನು ಅನುಸರಿಸಬೇಕಾದ ಅಧಿಕಾರಿಗಳೇ ಇದನ್ನು ಉಲ್ಲಂಘಿಸಿ ದಾವೆಗಳನ್ನು ಬೇಕಾಬಿಟ್ಟಿಯಾಗಿ ತಿರಸ್ಕರಿಸಿದ್ದಾರೆ, ಗ್ರಾಮಸಭೆಗಳು ಶಿಫಾರಸು ಮಾಡಿರುವ ದಾವೆಗಳನ್ನೂ ತಿರಸ್ಕರಿಸಿದ್ದಾರೆ.

ಸಮುದಾಯಿಕ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುತ್ತಿಲ್ಲ. ಆದಿವಾಸಿಗಳ ಸ್ವಾಧೀನದಲ್ಲಿ ಇರುವ ಭೂಮಿಯನ್ನು " ಸುಗಮ ವ್ಯಾಪಾರ'ದ ಕಾರ್ಯಕ್ರಮದ ಅಡಿಯಲ್ಲಿ ದೊಡ್ಡ ಕಂಪನಿಗಳಿಗೆ ವಿವಿಧ ಪ್ರಾಜೆಕ್ಟ್ ಗಳಿಗಾಗಿ ಮತ್ತು ಗಣಿಗಾರಿಕೆಗೆ ವಹಿಸಿಕೊಡಲಾಗುತ್ತಿದೆ. ಆದ್ದರಿಂದ ತಿರಸ್ಕರಿಸಲ್ಪಟ್ಟ ಆದಿವಾಸಿಗಳ ದಾವೆಗಳ ಪರಿಶೀಲನೆಗೆ ಒಂದು ನಿಷ್ಪಕ್ಷಪಾತೀ ಸಂಸ್ಥೆಯನ್ನು ರಚಿಸುವುದು ಅಗತ್ಯವಾಗಿದೆ, ಅವನ್ನು ಮಂತ್ರಾಲಯಗಳಿಗೇ ಬಿಡಬಾರದು ಎಂದು ಬೃಂದಾ ಕಾರಟ್ ಈ ಪತ್ರದಲ್ಲಿ ಪ್ರಧಾನಿಗಳನ್ನು ಆಗ್ರಹಿಸಿದ್ದಾರೆ.

ಪುಟ 10 ಕ್ಕೆ

## ಆದಿವಾಸಿಗಳು, ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವುದನ್ನು ತಡೆಯಲು ಸುಗ್ರೀವಾಜ್ಞೆ ಹೊರಡಿಸಿ– ಸಿಪಿಐ(ಎಂ) ಆಗ್ರಹ

ಸುಪ್ರಿಂ ಕೋರ್ಟ್ ಹತ್ತು ಲಕ್ಷಕ್ಕೂ ಹೆಚ್ಚು ಆದಿವಾಸಿಗಳು ಮತ್ತು ಪಾರಂಪರಿಕ ಅರಣ್ಯವಾಸಿಗಳನ್ನು ಅವರು ನೆಲೆಸಿರುವ ಭೂಮಿಯಿಂದ ಒಕ್ಕಲೆಬ್ಬಿಸುವ ಆದೇಶವನ್ನು ನೀಡಿರುವ ಹಿನ್ನೆಲೆಯಲ್ಲಿ ಮೋದಿ ಸರಕಾರ ಇನ್ನಷ್ಟು ವಿಳಂಬ ಮಾಡದೆ ಎಲ್ಲ ಆದಿವಾಸಿಗಳು ಮತ್ತು ಪಾರಂಪರಿಕ ಅರಣ್ಯವಾಸಿಗಳಿಗೆ ಒಕ್ಕಲೆಬ್ಬಿಸದಂತೆ ರಕ್ಷಣೆ ಕೊಡುವ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಆದಿವಾಸಿ ಜನಗಳು ತಾವು ಏನೂ ತಪ್ಪು ಮಾಡಿರದಿದ್ದರೂ, ಕೇಂದ್ರ ಮತ್ತು ರಾಜ್ಯ ಸರಕಾರಗಳು ಕಾಯ್ದೆಯನ್ನು ಜಾರಿ ಮಾಡಲು ವಿಫಲರಾಗಿರುವುದರಿಂದ ಶಿಕ್ಷೆ ಅನುಭವಿಸುವಂತಾಗಿದೆ. ಡಿಸೆಂಬರ್ 2018ರ ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ ದೇಶಾದ್ಯಂತ 42.19 ಲಕ್ಷ ದಾವೆಗಳು ಬಂದಿದ್ದು, ಅವುಗಳಲ್ಲಿ 18.89 ಲಕ್ಷ ವನ್ನು, ಅಂದರೆ ಸುಮಾರು 40 ಶೇಕಡಾದಷ್ಟು ಮಾತ್ರವೇ ದಾವೆಗಳನ್ನು ಸ್ವೀಕರಿಸಲಾಗಿದೆ. ಹಲವಾರು ಸಂದರ್ಭಗಳಲ್ಲಿ ಬೇಕಾಬಿಟ್ಟಿಯಾಗಿ ದಾವೆಗಳನ್ನು ತಿರಸ್ಕರಿಸಲಾಗಿದೆ, ಗ್ರಾಮಸಭಾದ ಶಿಫಾರಸುಗಳ ವಿರುದ್ಧ, ಮತ್ತು ಅರಣ್ಯಗಳನ್ನು ಖಾಸಗಿಯವರಿಗೆ ಹಾಗೂ ವ್ಯಾಪಾರಸ್ಥರಿಗೆ ವಹಿಸಿಕೊಡ ಬಯಸುವ ಲಾಬ್ಬಿಗಳಿಂದಾಗಿ ತಿರಸ್ಕರಿಸಲಾಗಿದೆ. ಈ ತಿರಸ್ಕರಣೆಗಳ ವಿರುದ್ಧ ಹಾಕಿರುವ ಲಕ್ಷಾಂತರ ಅಪೀಲುಗಳನ್ನು ಇತ್ಯರ್ಥ ಮಾಡದೆ ಉಳಿಸಲಾಗಿದೆ.

ನ್ಯಾಯಾಲಯದಲ್ಲಿ ವಿಚಾರಣೆಯಾಗುವಾಗ ನಿರ್ಣಾಯಕವಾದ ದಿನಾಂಕಗಳಲ್ಲಿ ಕೇಂದ್ರ ಸರಕಾರದ ಕಾನೂನು ಸಲಹೆಗಾರರು ಉದ್ದೇಪೂರ್ವಕವಾಗಿ ಗೈರು ಹಾಜರಾಗಿರುವುದರಿಂದ, ಸಂಬಂಧಪಟ್ಟ ಸಚಿವಾಲಯ ಅರಣ್ಯ ಹಕ್ಕುಗಳ ಕಾಯ್ದೆಯ ವಿರುದ್ಧದ ಅರ್ಜಿಯಲ್ಲಿ ಶಾಮೀಲಾಗಿದೆ ಎಂಬ ಆರೋಪ ನ್ಯಾಯವಾಗಿಯೇ ಬಂದಿದೆ.

ಸರಕಾರ ಆದಿವಾಸಿಗಳ ಹಕ್ಕುಗಳ ಮೇಲೆ ಸುಮಾರಾಗಿ ಸಮರವನ್ನೇ ಸಾರಿರುವುದನ್ನು ತಡೆಯಬೇಕು ಎಂದಿರುವ ಪೊಲಿಟ್ ಬ್ಯುರೊ ತಕ್ಷಣವೇ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಬೇಕು ಎಂದು ಒತ್ತಾಯಿಸಿದೆ.

## ಕಾಶ್ಮೀರಿ ಜನಗಳ ಮೇಲೆ ಹಲ್ಲೆಗಳನ್ನು ನಿಲ್ಲಿಸಿ–ದ್ವೇಷಪ್ರಚಾರಕ್ಕೆ ಇಳಿದಿರುವವರ ವಿರುದ್ಧ ದೃಢಕ್ರಮ ಕೈಗೊಳ್ಳಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ದೇಶದ ವಿವಿಧೆಡೆಗಳಲ್ಲಿ ಕಾಶ್ಮೀರದ ವಿದ್ಯಾರ್ಥಿಗಳು ಮತ್ತು ಜನತೆಯ ಮೇಲೆ ಹಲ್ಲೆಗಳ ನಡೆಯುತ್ತಿರುವ ಬಗ್ಗೆ ಸಿಪಿ(ಎಂ) ಪೊಲಿಟ್ ಬ್ಯುರೊ ಗಂಭೀರ ಆತಂಕ ವ್ಯಕ್ತಪಡಿಸಿದೆ. ದೆಹ್ರಾದೂನ್ ನಲ್ಲಿ ಭಜರಂಗ ದಳ ಮತ್ತು ವಿ.ಹೆಚ್.ಪಿ. ಮಂದಿ ವಿದ್ಯಾರ್ಥಿಗಳಿಗೆ ಹೊಡೆದಿದ್ದಾರೆ. ಇತರೆಡೆಗಳಲ್ಲೂ ಕಾಶ್ಮೀರಿ ವಿದ್ಯಾರ್ಥಿಗಳು ಮತ್ತು ವ್ಯಾಪಾರಿಗಳ ಮೇಲೆ ಬೆದರಿಕೆಗಳು ಬಂದಿವೆ, ಹಲ್ಲೆಗಳು ನಡೆದಿವೆ. ಜಮ್ಮುವಿನ ಕಾಶ್ಮೀರಿ ನಿವಾಸಿಗಳ ಮೇಲೆ ಹಲ್ಲೆಗಳ ನಂತರ ಅಲ್ಲಿ ಕರ್ಫ್ಯೂ ಹಾಕಲಾಗಿದೆ.

ಪುಲ್ವಾಮಾದಲ್ಲಿ 40 ಸಿ.ಆರ್.ಪಿ.ಎಫ್. ಸೈನಿಕರ ಹತ್ಯೆಯಿಂದ ಸಹಜವಾಗಿಯೇ ಜನಗಳು ನೊಂದಿದ್ದಾರೆ, ಬೇಸರಗೊಂಡಿದ್ದಾರೆ. ಆದರೆ ಈ ಸಂದರ್ಭವನ್ನು ಅಮಾಯಕ ಕಾಶ್ಮೀರಿ ಗಳ ಮೇಲೆ ಗುರಿಯಿಡಲು ಬಳಸಿಕೊಳ್ಳುವುದು ನಿಂದನಾರ್ಹ ಎಂದು ಪೊಲಿಟ್ ಬ್ಯುರೊ ಹೇಳಿದೆ.

ಕಾಶ್ಮೀರಿ ನಿವಾಸಿಗಳನ್ನು ರಕ್ಷಿಸಲು ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು, ದ್ವೇಷ ಪ್ರಚಾರಕ್ಕೆ ಮತ್ತು ಹಿಂಸಾಚಾರಕ್ಕೆ ಇಳಿಯುವವರ ವಿರುದ್ಧ ದೃಢ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ.

## ಮೇಘಾಲಯ ರಾಜ್ಯಪಾಲರನ್ನು ವಜಾಮಾಡಬೇಕು – ಸಿಪಿಐ(ಎಂ) ಪೊಲಿಟ್‌ಬ್ಯುರೊ

ಮೇಘಾಲಯದ ರಾಜ್ಯಪಾಲ ತಥಾಗತ ರಾಯ್ ಮತ್ತೊಂದು ಆಕ್ರೋಶಕಾರಿ ಹೇಳಿಕೆ ನೀಡಿ ಪುಲ್ವಾಮ ದುರಂತದ ಹಿನ್ನೆಲೆಯಲ್ಲಿ ಕಾಶ್ಮೀರ ಮತ್ತು ಕಾಶ್ಮೀರಿಗಳನ್ನು ಬಹಿಷ್ಕರಿಸಬೇಕೆಂಬ ಕರೆಯನ್ನು ಅನುಮೋದಿಸಿದ್ದಾರೆ. ಕಾಶ್ಮೀರಿಗಳು, ವಿಶೇಷವಾಗಿ ವಿದ್ಯಾರ್ಥಿಗಳು ದೇಶದ ವಿವಿಧ ಭಾಗಗಳಲ್ಲಿ ಹಲ್ಲೆಗಳಿಗೆ, ಕಿರುಕುಳ–ಪೀಡನೆಗಳಿಗೆ ತುತ್ತಾಗುತ್ತಿರುವಾಗ ಮತ್ತು ತಾವಿದ್ದ ಲ್ಲಿಂದ ಹೊರಹೋಗಬೇಕಾದ ಬಲವಂತಕ್ಕೆ ಒಳಗಾಗುತ್ತಿರುವ ಸಮಯದಲ್ಲಿ ಇದು ಬಂದಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಕ್ರೋಶ ವ್ಯಕ್ತಪಡಿಸಿದೆ.

ರಾಜ್ಯಪಾಲರು ಒಂದು ಸಂವಿಧಾನಿಕ ಹುದ್ದೆಯಲ್ಲಿದ್ದಾರೆ. ಭಾರತದ ರಾಷ್ಟ್ರಪತಿಗಳ ಪ್ರತಿನಿಧಿಯಾಗಿ ಅವರು ಭಾರತೀಯ ಸಂವಿಧಾನದ ಪಾಲಕರಾಗಿ ಕೆಲಸ ಮಾಡಬೇಕೆಂದು ನಿರೀಕ್ಷಿಸಲಾಗುತ್ತಿದೆ. ಇವರಿಂದ ಇಂತಹ ತಾನು ಅಲಂಕರಿಸಿರುವ ಹುದ್ದೆಯನ್ನು ಅವಹೇಳನಕ್ಕೆ ಗುರಿಮಾಡುವಂತ ಸಾರ್ವಜನಿಕ ಟಿಪ್ಪಣಿ ಬಂದಿರುವುದು ಇದೇ ಮೊದಲ ಬಾರಿಯೇನಲ್ಲ ಎಂದು ನೆನಪಿಸಿರುವ ಪೊಲಿಟ್‌ಬ್ಯುರೊ ಇಂತಹ ವಿಧಿಭಂಗವನ್ನು ಒಪ್ಪಲು ಸಾಧ್ಯವಿಲ್ಲ, ರಾಷ್ಟ್ರಪತಿಗಳು ಅವರನ್ನು ತಕ್ಷಣವೇ ವಜಾ ಮಾಡಬೇಕು ಎಂದು ಆಗ್ರಹಿಸಿದೆ.

## 'ರೈತ ಗೌರವ'ದ ಬಜೆಟ್ ಭ್ರಮೆ ಆಗಲೇ ನಿರಸನಗೊಳ್ಳುತ್ತಿದೆ– ಎಐಕೆಎಸ್ ತರಾತುರಿಯ ಜಾರಿಯಿಂದ ಅರ್ಹ ರೈತರನ್ನೂ ವಂಚಿಸುವ ಹುನ್ನಾರ

'ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿದಿ' ಎಂಬುದನ್ನು ಬಜೆಟಿನಲ್ಲಿ ಪ್ರಕಟಿಸಿ ತಾನೊಂದು ರೈತ–ಸ್ನೇಹಿ ಸರಕಾರ ಎಂಬ ಭ್ರಮೆಯನ್ನು ಸೃಷ್ಟಿಸುವ ಮೋದಿ ಸರಕಾರದ ಪ್ರಯತ್ನ, ಅದರ ತರಾತುರಿಯ ಜಾರಿಯಲ್ಲೇ ಬಯಲಾಗಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಹೇಳಿದೆ.

ಈ ನಿಧಿಯ ಅಡಿಯಲ್ಲಿ ಮೊದಲ ಕಂತಿನ ಪಾವತಿಗೆ ಅರ್ಜಿಗಳನ್ನು ಫೆಬ್ರುವರಿ 20ರೊಳಗೆ ಸಲ್ಲಿಸಬೇಕು ಎಂದು ಈ ಸರಕಾರ ಆದೇಶ ಹೊರಡಿಸಿತು. ಆ ಆದೇಶ ಹೆಚ್ಚಿನ ರಾಜ್ಯ ಸರಕಾರಗಳ ಕೈಸೇರಿದ್ದು ಫೆಬ್ರುವರಿ 16ರಂದೇ. ಮರುದಿನ ಫೆಬ್ರುವರಿ 17 ಭಾನುವಾರ. 2 ಎಕ್ರೆಗಿಂತ ಕಡಿಮೆ ಜಮೀನಿರುವ ರೈತಾಪಿ ಕುಟುಂಬಗಳ ಸಂಖ್ಯೆ 12 ಕೋಟಿಗೂ ಹೆಚ್ಚು. ಇವರನ್ನೆಲ್ಲ 20ರೊಳಗೆ ತಲುಪಬೇಕೆಂಬದು ಶುದ್ಧ ಅಸಂಬದ್ಧ. ಈ ಅನಗತ್ಯ ತರಾತುರಿಯ ಉದ್ದೇಶ ಚುನಾವಣೆಗಳ ಮೊದಲು ಸುಳ್ಳು ನಿರೀಕ್ಷೆಗಳನ್ನು ಹುಟ್ಟಿಸುವುದು ಮತ್ತು ಅದರ ಚುನಾವಣಾ ಲಾಭಗಳನ್ನು ಗಿಟ್ಟಿಸುವುದು ಎಂಬುದು ಸ್ಪಷ್ಟ ಎಂದು ಎಐಕೆಎಸ್ ಹೇಳಿದೆ.

ಈ ನಿಧಿಯ ನಿರೂಪಣೆ ಆರಂಭದಲ್ಲೇ ಲಕ್ಷಾಂತರ ರೈತ ಕುಟುಂಬಗಳನ್ನು, ಮುಖ್ಯವಾಗಿ ಭೂಹೀನರು ಮತ್ತು ಗೇಣಿ ರೈತರನ್ನು ಹೊರಗಿಟ್ಟಿದೆ. ಈಗ ಈ ನಿಧಿಯ ವ್ಯಾಪ್ತಿಯಲ್ಲಿ ಬರುವ ರೈತಾಪಿಗಳನ್ನು ಕೂಡ ವಂಚಿಸಲು ಈ ಸರಕಾರ ಹೊರಟಿದೆ ಎಂಬುದು ಇದರ ಜಾರಿಯಲ್ಲಿನ ಇಂತಹ ಅತ್ಯಂತ ನಿರ್ಲಕ್ಷ್ಯ ಮತ್ತು ಹಾಸ್ಯಾಸ್ಪದ ನಡೆ ಬಯಲಿಗೆಳೆದಿದೆ. ಈ ಮೂಲಕ ಈ ನಿಧಿಯ ವ್ಯಾಪ್ತಿಗೆ ಬರುವವರನ್ನೂ ಅವರಿಗೆ ಕೊಡಬೇಕಾದ ದಿನಕ್ಕೆ 17ರೂ. ಯ ಅಲ್ಪ ಪರಿಹಾರದಿಂದಲೂ ವಂಚಿಸುವ ಹುನ್ನಾರ ಇದು.

ಈ ನಿಧಿಯ ಮೊದಲ ಕಂತಿಗೆ ಅರ್ಜಿ ಹಾಕುವ ಕೊನೆಯ ದಿನಾಂಕವನ್ನು ವಿಸ್ತರಿಸಬೇಕು, ಭೂಹೀನರು ಮತ್ತು ಗೇಣಿ ರೈತರನ್ನೂ ಈ ನಿಧಿಯ ವ್ಯಾಪ್ತಿಗೆ ತರಬೇಕು ಎಂದು ಎಐಕೆಎಸ್ ಆಗ್ರಹಿಸಿದೆ. ಗ್ರಾಮ ಮತ್ತು ಬ್ಲಾಕ್ ಮಟ್ಟದ ಶಿಬಿರಗಳನ್ನು ನಡೆಸಿ ಎಲ್ಲ ಅರ್ಹ ರೈತರನ್ನು ಇದರಲ್ಲಿ ದಾಖಲಿಸಲು ಮತ್ತು ಭೂದಾಖಲೆಗಳು ಕಂಪ್ಯೂಟರೀಕರಣಗೊಂಡಿರದ ರಾಜ್ಯಗಳಲ್ಲೂ ರೈತಾಪಿ ಜನಗಳ ಯಾವ ಬಡವಿಭಾಗವೂ ಇದರಿಂದ ಹೊರಗುಳಿಯದಂತೆ ಮಾಡಲು ಸಾಕಷ್ಟು ಸಮಯ ನೀಡಬೇಕು ಎಂದು ಅದು ಆಗ್ರಹಿಸಿದೆ. ಗೇಣಿ ರೈತರನ್ನು ಗುರುತಿಸಲು ಪಂಚಾಯತುಗಳ ಸಹಾಯ ಪಡೆಯಲು ಸಾಧ್ಯವಿದೆ. ಕೇರಳದಲ್ಲಿ ಎಲ್‌ಡಿಎಫ್ ಸರಕಾರ ಕೇಂದ್ರ ನಿಗದಿ ಮಾಡಿದ ಕನಿಷ್ಟ ಬೆಂಬಲ ಬೆಲೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಅಂದರೆ ಕ್ವಿಂಟಾಲಿಗೆ 800ರೂ. ನಲ್ಲಿ ಭತ್ತ ಖರಿದಿ ಮಾಡುತ್ತಿದ್ದರೆ, ಅಲ್ಲಿನ ಒಂದು ಪಂಚಾಯ್ತು ಹೆಕ್ಟೇರಿಗೆ 17,000 ರೂ. ಭತ್ತದ ಸಾಗುವಳಿಗೆ ಪ್ರೋತ್ಸಾಹ ಧನವಾಗಿ ಕೊಡುತ್ತಿದೆ ಎಂಬ ಸಂಗತಿಯತ್ತ ಎಐಕೆಎಸ್ ಗಮನ ಸೆಳೆದಿದೆ.

ಈ ಸಂದರ್ಭದಲ್ಲಿ, ಕನಿಷ್ಟ ಬೆಂಬಲ ಬೆಲೆಯ ಆಶ್ವಾಸನೆಯಲ್ಲಿ ವಿಶ್ವಾಸಘಾತ ಮಾಡುವುದನ್ನು ನಿಲ್ಲಿಸಬೇಕು, ಈ ಸ್ಕೀಮನ್ನು ವಿಸ್ತರಿಸಬೇಕು, ಬೆಂಬಲ ಮೊತ್ತವನ್ನು ಹೆಚ್ಚಿಸಬೇಕು ಮತ್ತು ಅದು ಎಲ್ಲ ರೈತರಿಗೆ ಲಭ್ಯವಾಗುವಂತೆ ಮಾಡಬೇಕು ಎಂದು ಆಗ್ರಹಿಸಿರುವ ಎಐಕೆಎಸ್ ಈ ಬೇಡಿಕೆಗಳು ಈಡೇರುವ ವರೆಗೆ ಹೋರಾಟ ಮುಂದುವರೆಯುತ್ತದೆ ಎಂದು ಹೇಳಿದೆ.

ಸಂಪಾದಕೀಯ

# ಧಾಳಿಯಿಂದ ರಕ್ಷಿಸಿ

ಭಾರತದ ಅರಣ್ಯಗಳಲ್ಲಿ ನೆಲೆ ಹೊಂದಿರುವ ಲಕ್ಷಾಂತರ ಆದಿವಾಸಿಗಳು ಹಾಗೂ ಅರಣ್ಯ ವಾಸಿಗಳನ್ನು 2019 ರ ಜುಲೈ 24 ರೊಳಗೆ ಅಲ್ಲಿಂದ ಒಕ್ಕಲೆಬ್ಬಿಸಬೇಕೆಂಬ ಸರ್ವೋಚ್ಚ ನ್ಯಾಯಾಲಯದ ತೀರ್ಪು ಅತ್ಯಂತ ಆಘಾತಕಾರಿಯಾಗಿದೆ. ಅರಣ್ಯ ಹಕ್ಕುಗಳ ಕಾಯ್ದೆ 2006 ರನ್ವಯ ಭೂಮಿಯ ಹಕ್ಕು, ಸಮುದಾಯಗಳಿಗಾಗಿ ಕ್ಲೇಮ್ ಗಳನ್ನು ಹಾಕಿ ಯಾವುದೋ ಕಾರಣಗಳಿಂದ ಅವರು ಅಲ್ಲಿಂದ ಹೊರ ನಡೆಯಬೇಕು, ಇಲ್ಲವೇ ಹೊರ ದಬ್ಬಲೇ ಬೇಕು ಎಂಬ ನ್ಯಾಯಾಲಯದ ತೀರ್ಪು ಅಲ್ಲೋಲಕಾರಿ ಪರಿಸ್ಥಿತಿಯನ್ನು ನಿರ್ಮಿಸಬಹುದು.

ಇಂತಹ ತೀರ್ಪು ನೀಡಲು ನ್ಯಾಯಾಲಯಕ್ಕೆ ಹಲವು ತಾಂತ್ರಿಕ ಕಾರಣಗಳು, ಸಮರ್ಥನೆಗಳು ಇರಬಹುದು. ಹೊಣೆ ಯಾರಾದರೂ ಇರಬಹುದು. ಆದರೆ ಸಾವಿರಾರು ವರ್ಷಗಳಿಂದ ಹಲವಾರು ತಲೆಮಾರುಗಳಿಂದ ನೆಲೆಸಿ ನಮ್ಮ ನಾಗರಿಕತೆ ಸಂಸ್ಕೃತಿಯ ಅಡಿಪಾಯವಾಗಿರುವ ಈ ಸಮುದಾಯಗಳನ್ನು ಬೀದಿಗೆ ತಳ್ಳಲಾಗುವುದು ಎಂಬುದರಲ್ಲಿ ಅನುಮಾನವೇ ಇಲ್ಲ. ಇಂತಹ ಕ್ರಮ ನಮ್ಮ ಸಂವಿಧಾನ, ಆಡಳಿತ ವ್ಯವಸ್ಥೆ, ಕಾಲಾನು ಕ್ರಮದಲ್ಲಿ ರೂಪಿಸಲಾದ ಕಾನೂನುಗಳು ಜನತೆಗೆ ಕೊಟ್ಟ ಭರವಸೆಗಳ ಸ್ಪಷ್ಟ ಉಲ್ಲಂಘನೆ.

ಬ್ರಿಟಿಷರಿಂದ ಭಾರತ ಸ್ವತಂತ್ರಗೊಂಡ ನಂತರ ಆಳುವವರು 'ಆದಿವಾಸಿಗಳು ಹೇಗೆ ಇರಲು ಬಯಸುತ್ತಾರೆ ಹಾಗೆ ಇರಬೇಕು. ಅವರ ಬದುಕು ಸಂಸ್ಕೃತಿ ಸಂರಕ್ಷಿತ ವಾಗಬೇಕು, ಸ್ವಾಯತ್ತವಾಗಿರಬೇಕು. ಅಂತಹುದಕ್ಕೆ ಸರಕಾರ ಸಹಾಯ ಮಾಡಬಹುದೇ ಹೊರತು ನಿರ್ದೇಶಿಸುವುದಲ್ಲ,ಇಲ್ಲ ದಾಳಿ ನಡೆಸುವುದಲ್ಲ. ಅತಿಕ್ರಮಣ ಮಾಡುವಂತಿಲ್ಲ ಎಂಬ ವಚನವನ್ನು ನೀಡಲಾಗಿತ್ತು .ಆದರೆ ಪ್ರತಿಯೊಂದು ಹಂತದಲ್ಲಿಯೂ ವಚನ ದ್ರೋಹ ಎಸಗಲಾಗಿದೆ, ದುರಾಕ್ರಮಣ ನಡೆಸಲಾಗಿದೆ.

ಅರಣ್ಯ ಹಕ್ಕುಗಳ ಕಾಯಿದೆಯ ಅನ್ವಯ ಅರ್ಜಿ ಹಾಕಲಾದವರ ಕ್ಲೇಮ್ ಗಳು ಪರಿಗಣಿತವಾಗಿ ಅಥವಾ ತಿರಸ್ಕೃತವಾಗಿ ಹೋದ ಮೇಲೆ ಅಂತಹವರು ಅರಣ್ಯದಲ್ಲಿ ವಾಸಿಸಲು ಅಲ್ಲಿ ಹಕ್ಕು ಪ್ರತಿಪಾದಿಸಲು ಅರ್ಹರಲ್ಲ, ಅಂತಹವರನ್ನು ಹೊರ ಹಾಕಬೇಕು ಎಂಬ ಕೋರಿಕೆಯನ್ನು ಬೆಂಗಳೂರು ಮೂಲದ ವೈಲ್ಡ್ ಲೈಫ್ ಫಸ್ಟ್ ಎಂಬ ಸ್ವಯಂ ಸೇವಾ ಸಂಸ್ಥೆ ಸರ್ವೋಚ್ಚ ನ್ಯಾಯಾಲಯದಲ್ಲಿ ಮಾಡಿತ್ತು. ಇದರಲ್ಲಿರುವವರು ಬಹುತೇಕರು ಅರಣ್ಯ ಇಲಾಖೆಯ ಮಾಜಿ ಅಧಿಕಾರಿಗಳು. ಅದರಲ್ಲಿ ವೈಲ್ಡ್ ಲೈಫ್ ಫಸ್ಟ್ ಎಂಬ ಎನ್ ಜಿ ಓ ದ ಸ್ಥಾಪಕ ಪ್ರಮುಖರಾಗಿರುವ ಕೆ.ಎಂ ಚಿಣ್ಣಪ್ಪ ನವರು ನಿವೃತ್ತ ಅರಣ್ಯ ಅಧಿಕಾರಿ ಮೈಸೂರು ಪ್ರದೇಶಗಳನ್ನು ಬೆಸೆಯುವ, ಹಲವಾರು ವೈವಿಧ್ಯತೆಗಳ ಆಗರವಾಗಿರುವ ಪಶ್ಚಿಮಘಟ್ಟದ ನಾಗರಹೊಳೆಯ ಸಾವಿರಾರು ಆದಿವಾಸಿ ಕುಟುಂಬಗಳನ್ನು ಅವರ ನೆಲೆಯಿಂದ ಎತ್ತಂಗಡಿ ಮಾಡಲು ನಾನಾ ತರಹದ ಹಿಂಸೆ, ಆದಿವಾಸಿ ಕಗ್ಗೊಲೆ, ಕ್ರೂರ ಪ್ರಾಣಿಗಳ ದಾಳಿ ಮಾಡಿಸಿದ ಆರೋಪವಿದೆ ಎನ್ನಲಾಗುವ ಕುಖ್ಯಾತಿ ಹೊಂದಿದವರು ಎಂಬ ಸಂಗತಿಯನ್ನು ಗಮನಿಸಿದಾಗ ಇಂತಹವರ ಉದ್ದೇಶಗಳು ಅರ್ಥವಾಗಬಲ್ಲದು. ಈ ಸಂಸ್ಥೆ ಕೊಡಗಿನಲ್ಲಿ ಯಾವುದೇ ಜನಪರ ಅಭಿವೃದ್ಧಿ ಪ್ರಶ್ನೆಗಳು ಪ್ರಸ್ತಾಪವಾದಾಗ ಪರಿಸರ ಹೆಸರಿನಲ್ಲಿ ಅಡ್ಡಗಾಲು ಹಾಕುತ್ತಾ ಬಂದಿರುವುದು, ಆದರೆ ಪರಿಸರ ನಾಶ ಮಾಡುವ ಅಪರಾಧಿಗಳ ಬಗ್ಗೆ ಚಕಾರ ಎತ್ತದಿರುವುದು ಗೊತ್ತಿರುವ ಸತ್ಯ.



ಅರಣ್ಯ ಹಕ್ಕುಗಳ ಕಾಯ್ದೆ 2006ನ್ನು ಎಡಪಕ್ಷಗಳ ಆಗ್ರಹದ ಮೇರೆಗೆ ಅಂದಿನ ಯುಪಿಎ–1 ಸರಕಾರ ಸಂಸತ್ತಿನಲ್ಲಿ ಮಂಡಿಸಿದಾಗ ಬಂದ ವಿರೋಧಗಳಿಗೆ ಸ್ಪಷ್ಟನೆ ನೀಡಿ ಆದಿವಾಸಿಗಳ ಪಾರಂಪರಿಕ ಹಕ್ಕುಗಳನ್ನು ಎತ್ತಿ ಹಿಡಿದು ಶತಶತಮಾನಗಳ ಅನ್ಯಾಯಗಳನ್ನು ಸರಿಪಡಿಸಲು ಕಾಯ್ದೆ ಅಂಗೀಕರಿಸಿ ದೃಢ ಹೆಜ್ಜೆ ಇರಿಸಿದ್ದು ಐತಿಹಾಸಿಕ ಸಂಗತಿ. ಬಹುತೇಕ ಅರಣ್ಯ ಇಲಾಖೆಯ ಅಧಿಕಾರಿಗಳು ಕಾಡಿನ ಸಂಪತ್ತಿನ ಮೇಲೆ ಕಣ್ಣಿರಿಸಿದ ಹಣದಾಹಿ ಉದ್ಯಮಿಗಳು, ಕೆಲ ಅಂತರಾಷ್ಟ್ರೀಯ ಏಜನ್ಸಿಗಳು ಕಾಯ್ದೆಗೆ ವಿರೋಧ ವ್ಯಕ್ತ ಪಡಿಸಿದ್ದು ನಿರೀಕ್ಷಿತ.

ಆದರೆ ಮಹತ್ವಾಕಾಂಕ್ಷೆಯ ಈ ಕಾಯ್ದೆ ಜಾರಿಯಲ್ಲಿ ಎಡರಂಗದ ಸರ್ಕಾರಗಳನ್ನು ಬಿಟ್ಟರೆ ಉಳಿದಂತೆ ಬಹುತೇಕ ರಾಜ್ಯಗಳ ಸರ್ಕಾರಗಳು ನಿರ್ಲಕ್ಷ್ಯ ವಹಿಸಿರುವುದು ಅಕ್ಷಮ್ಯ ಅಪರಾಧವಾಗಿದೆ. ಕರ್ನಾಟಕವು ಈ ಕಾಯ್ದೆಯ ಜಾರಿಯಲ್ಲಿ ಗುಜರಾತಿನಂತೆ ಅತ್ಯಂತ ಕೆಳ ಸ್ಥಾನದಲ್ಲಿದೆ. ಕರ್ನಾಟಕದ 18 ನೆಯ ಸ್ಥಾನ ತಮಿಳುನಾಡು ಸರ್ಕಾರ ಹತ್ತು ವರ್ಷಗಳ ಕಾಲ ಈ ಕಾಯ್ದೆಯನ್ನು ಜಾರಿ ಮಾಡದೆ ವಂಚಿಸಿದ್ದು ಮತ್ತೊಂದು. ಇದರ ವಿರುದ್ಧ ಸುಪ್ರೀಂ ಕೋರ್ಟಿಗೆ ಹೋಗಿ ಹೋರಾಟ ಮಾಡಬೇಕಾಗಿ ಬಂತು.

ಕರ್ನಾಟಕ ರಾಜ್ಯದಲ್ಲಿ ಸಲ್ಲಿಸಲಾದ 12 ಲಕ್ಷ ಅರ್ಜಿಗಳಲ್ಲಿ ಮಾನ್ಯ ಆದದ್ದು 12 ಸಾವಿರಗಳು ಮಾತ್ರ. ಅದರಲ್ಲಿ ಆದಿವಾಸಿಗಳ ಪಾಲು ಕೇವಲ 8 ಸಾವಿರ ಮಾತ್ರ. ಆದರೆ ಅರಣ್ಯದೊಳಗೆ ಕಿರು ಉತ್ಪನ್ನ ಸಂಗ್ರಹಣೆಯು ಒಳಗೊಂಡು ಸಮುದಾಯ ಹಕ್ಕುಗಳು ಸಿಕ್ಕಿದ್ದು ಕೇವಲ 600 ಮಾತ್ರ.

ಈ ಪ್ರಕ್ರಿಯೆಯಲ್ಲಿ ಎರಡು ಲಕ್ಷದಷ್ಟು ಅರ್ಜಿಗಳನ್ನು ತಿರಸ್ಕರಿಸಿರುವುದು ದುರುದ್ದೇಶ ಪೂರ್ವಕ ಎಂಬುದು ಮೇಲ್ನೋಟದಲ್ಲಿಯೇ ಕಾಣುತ್ತದೆ.

ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಕಾಯ್ದೆಯ ಅನುಗುಣವಾಗಿ ದಾಖಲೆಗಳೊಂದಿಗೆ ಅರ್ಜಿ ಹಾಕಿದರೂ ಬೇಕೆಂದೇ ತಿರಸ್ಕರಿಸಲಾಗಿದೆ. ಜೇನು ಕುರುಬರು, ಪಣಿಯ, ಪಂಜರಿ, ಎರವರು, ಸೋಲಿಗರು ಮುಂತಾದ ಸಮುದಾಯಗಳು ಇಂತಹ ಸೇಡು, ತಾರತಮ್ಯದ ವಿರುದ್ಧ ಹೈಕೋರ್ಟ್ ಗೆ ಮೊರೆ ಹೋಗಿ ನ್ಯಾಯದ ತೀರ್ಪು ಪಡೆದದ್ದು ಕಣ್ಣೆದುರೇ ಇದೆ. ಅಂತ ತೀರ್ಪು ಪಡೆದು ಎರಡು ವರ್ಷಗಳಾದರೂ ಇಂದಿಗೂ ಅದನ್ನು ಜಾರಿಗೊಳಿಸಿಲ್ಲ ಎಂಬುದು ಸರ್ಕಾರದ ಕಾರ್ಯ ವೈಖರಿಗೆ ಹಿಡಿದ ಕನ್ನಡಿ. ಶಿವಮೊಗ್ಗದ ಹಸಲರು, ಕೊರಗರು, ಉತ್ತರ ಕನ್ನಡ ಜಿಲ್ಲೆಯ ಸಿದ್ದಿಗಳು, ಕುಣಬಿಗಳು, ಹಾಲಕ್ಕಿ ಮುಂತಾದವರು, ಚಾಮರಾಜನಗರ ಮೈಸೂರಿನ ಜೇನು ಕುರುಬರು, ಸೋಲಿಗರು ಮುಂತಾದವರ ಕಥೆಗಳ ಸರಮಾಲೆಯೇ ನಮ್ಮೆದುರಿದೆ.

ಸರಕಾರದ ನಡೆಯನ್ನು ಅನುಮಾನಿಸುವ ಅಂಶಗಳು ಇವೆ.

ಸರ್ವೋಚ್ಚ ನ್ಯಾಯಾಲಯದ ಮುಂದೆ ವಾದ ಮಂಡಿಸಬೇಕಾದ ಕೇಂದ್ರ ಸರ್ಕಾರದ ಪ್ರತಿನಿಧಿ ಹಾಜರಾಗದೇ ತಪ್ಪಿಸಿಕೊಳ್ಳುತ್ತಾರೆ ಎಂದರೆ ಏನರ್ಥ? ಮೇಲಾಗಿ ಇದರ ಜಾರಿಯ ಉಸ್ತುವಾರಿ ಇರುವುದು ಬುಡಕಟ್ಟು ಸಚಿವಾಲಯಕ್ಕೆ. ಆದರೆ ಸರಕಾರ ವಹಿಸಿದ್ದು ಬೇರೆ ಇಲಾಖೆಗೆ. ಸರಕಾರದ ನಿಜವಾದ ಉದ್ದೇಶವಾದರೂ ಏನು? ಕಾಯ್ದೆಯನ್ನು ಹಂತ ಹಂತಹಂತವಾಗಿ ದುರ್ಬಲಗೊಳಿಸಿ, ಅರ್ಥಹೀನ ಗೊಳಿಸಿದ ಕೇಂದ್ರ ಸರ್ಕಾರ ಯಾರ ಹಿತ ಕಾಪಾಡ ಬಯಸಿದೆ? ಉದ್ಯಮಿಗಳಿಗೆ, ಗಣಿಗಾರಿಕೆಗೆ ನಿಸರ್ಗ ಸಂಪತ್ತಿನ ಲೂಟಿಗೆ ಅವಕಾಶ ನೀಡುತ್ತಲೇ ಬಂದ ಸರ್ಕಾರ ಆದಿವಾಸಿಗಳ ಬಗ್ಗೆ ತಾರತಮ್ಯದ ದೃಷ್ಟಿ ತೋರಿದೆ. ಇಂತಹ ತೀರ್ಪು ಹೊರಬರುವಲ್ಲಿ ಕೇಂದ್ರ ಹಾಗೂ ರಾಜ್ಯಸರ್ಕಾರಗಳ ವೈಫಲ್ಯದ ಪಾಲು ಅತಿ ದೊಡ್ಡದು ಎಂಬುದನ್ನು ಮರೆಮಾಚಲು ಸಾಧ್ಯವಿಲ್ಲ.

ಅರಣ್ಯದಲ್ಲಿ ನೆಲೆಸಿರುವ ಅರಣ್ಯಕ್ಕೆ ವನ್ಯಜೀವಿಗಳಿಗೆ ಆದಿವಾಸಿಗಳ ವಾಸ ಹಾನಿಕರ ಎಂಬುದು ವಂಚನೆಯ ಬೊಗಳೆ ವಾದವಾಗಿದೆ. ಅರಣ್ಯ ಹಾಳಾಗಿರುವುದು, ಆಗುತ್ತಿರುವುದು ಆದಿವಾಸಿಗಳಿಂದ ಅಲ್ಲ. ಬದಲಾಗಿ ಲೂಟಿಕೋರ, ಲಾಭಖೋರ ಲಾಭಿಗಳಿಂದ, ಹಾಗೂ ಸರಕಾರದ, ಅಧಿಕಾರಸ್ಥರ ಶಾಮೀಲಿನಿಂದ.

ಲಕ್ಷಾಂತರ ಕುಟುಂಬಗಳ ಬದುಕು, ಭವಿಷ್ಯವನ್ನು ಅತಂತ್ರಗೊಳಿಸುವ ಈ ತೀರ್ಪಿನಿಂದ ಜನತೆಯನ್ನು ಸಂರಕ್ಷಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳದೇ ಇದ್ದಲ್ಲಿ ಅದೊಂದು ಘೋರ ಅಪರಾಧವಾಗುತ್ತದೆ ಎಂಬುದನ್ನು ಸರ್ಕಾರ ಮನಗಾಣಬೇಕು.ಆದ್ದರಿಂದ ಕೂಡಲೇ ಕೇಂದ್ರಸರ್ಕಾರ ಸುಗ್ರೀವಾಜ್ಞೆ ಹೊರಡಿಸಿ ಅವರೆಲ್ಲರನ್ನು ರಕ್ಷಿಸಬೇಕು. ತಿರಸ್ಕೃತ ಗೊಳಿಸಲಾದ ಎಲ್ಲವುಗಳನ್ನು ಪುನರ್ ಪರಿಶೀಲಿಸಲು ವಿಶ್ವಾಸಾರ್ಹವಾದ ನಿಷ್ಪಕ್ಷಪಾತದಿಂದ ಕೂಡಿದ ಒಂದು ಸಮಿತಿಯನ್ನು ಎಲ್ಲಾ ಕಡೆ ರಚಿಸಬೇಕು. ಎಷ್ಟೋ ಕಡೆ ಅರ್ಜಿ ಹಾಕಲು ಸಾಧ್ಯವಾಗದೆ ಇರುವವರಿಗೆ ಮತ್ತೊಂದು ಅವಕಾಶ ನೀಡಬೇಕು ಎಂಬ ಬೇಡಿಕೆಯೂ ಸರಿಯಾದುದು ಈ ದಿಕ್ಕಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ಷಿಪ್ರ ಹೆಜ್ಜೆ ಇಡಬೇಕು.

ಈ ಬೇಡಿಕೆಗಳಿಗಾಗಿ ನಾಡಿನ ಎಲ್ಲಾ ಆದಿವಾಸಿಗಳು, ಅರಣ್ಯವಾಸಿಗಳು ರಾಜಿಯಿಲ್ಲದ ಹೋರಾಟ ನಡೆಸಬೇಕಾದುದು ಅತ್ಯಂತ ಅನಿವಾರ್ಯ. ಬಾಧಿತವಾದ ಈ ಸಮುದಾಯಗಳೊಂದಿಗೆ ನಾಗರಿಕ ವಿಭಾಗಗಳು ಕೂಡ ಕೈ ಜೋಡಿಸಬೇಕು. ಇಂತಹ ಅಮಾನುಷ ದಾಳಿಯ ವಿರುದ್ಧ ದನಿಯೆತ್ತದಿದ್ದರೆ ಅದು ಅಪರಾಧವಾಗುತ್ತದೆ ಎಂಬುದನ್ನು ಎಲ್ಲರೂ ನೆನಪಿಡಬೇಕು.

## ವಿಜಯ ಬ್ಯಾಂಕ್ ಉಳಿಸಿ – ವಿಲೀನಿಕರಣ ನಿಲ್ಲಿಸಿ ಸಿ.ಪಿ.ಐ(ಎಂ) ನಿಂದ ಶಾಖೆಗಳ ಮುಂದೆ ಪ್ರತಿಭಟನೆ

ಅವಿಭಜಿತ ದ.ಕ ಜಿಲ್ಲೆಯ ಹೆಮ್ಮೆಯ ಹಾಗೂ ನಿರಂತರ ಲಾಭಗಳಿಸುತ್ತಿರುವ ವಿಜಯ ಬ್ಯಾಂಕನ್ನು ದೇನಾ ಬ್ಯಾಂಕ ಮತ್ತು ಬ್ಯಾಂಕ ಆಫ್ ಬರೋಡದೊಂದಿಗೆ ವಿಲೀನಗೊಳಿಸುತ್ತಿರುವುದನ್ನು ವಿರೋಧಿಸಿ ಜಿಲ್ಲೆಯಾದ್ಯಂತ ವಿಜಯ ಬ್ಯಾಂಕ ಶಾಖೆಗಳ ಮುಂದೆ ಪ್ರತಿಭಟನೆ ನಡೆಸಬೇಕೆಂದು ಸಿ.ಪಿ.ಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಕರೆ ನೀಡಿದೆ.

ನಾಳೆ (ಫೆಬ್ರವರಿ 23) ಮಂಗಳೂರಿನಲ್ಲಿ ವಿಜಯ ಬ್ಯಾಂಕ ಉಳಿಸಿ ಹೋರಾಟ ಸಮಿತಿ ನೇತೃತ್ವದಲ್ಲಿ ನಡೆಯುತ್ತಿರುವ ಜನಪ್ರತಿನಿಧಿಗಳ ಸಭೆಯಲ್ಲಿ ಸಿ.ಪಿ.ಐ(ಎಂ) ಗೆ ಸೇರಿದ ಗ್ರಾಮ ಪಂಚಾಯತ ಸದಸ್ಯರು ಭಾಗವಹಿಸಲಿದ್ದಾರೆ. ಹಾಗೂ ವಿಲೀನಿಕರಣ ತಿರ್ಮಾನವನ್ನು ಕೈಬಿಡಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸಲಾಗುವುದು.

ವಿಲೀನಿಕರಣದ ಅನುಭವ ಏನೆಂದರೆ ಬಹುತೇಕ ಗ್ರಾಮೀಣ ಪ್ರದೇಶದ ಶಾಖೆಗಳನ್ನು ಮುಚ್ಚಲಾಗುವುದು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಳ್ಳಿ ಹಳ್ಳಿಗಳಲ್ಲಿ ಹಬ್ಬಿರುವ ವಿಜಯ ಬ್ಯಾಂಕ ರೈತರು, ಕಾರ್ಮಿಕರು, ಶಿಕ್ಷಕರು, ಸ್ವ ಸಹಾಯ ಗುಂಪುಗಳು, ವ್ಯಾಪಾರಸ್ಥರುಗಳಿಗೆ ಸೇವೆ ನೀಡುತ್ತಿದೆ. ಈಗಾಗಲೇ ಕನ್ನಡ, ತುಳು ಬಾಷೆ ಗೊತ್ತಿಲ್ಲದ ನೌಕರರೊಂದಿಗೆ ವ್ಯವಹಾರ ನಡೆಸುವುದು ಕಷ್ಟವಾಗಿ ಜನರು ದೂರ ಸರಿಯುತ್ತಿದ್ದಾರೆ. ಬ್ಯಾಂಕ ಆಫ್ ಬರೋಡದೊಂದಿಗೆ ವಿಲೀನಗೊಂಡಲ್ಲಿ ಸ್ಥಳೀಯರಿಗೆ ಪರಕೀಯತೆ ಕಾಡುತ್ತದೆ. ಆದ್ದರಿಂದ ವಿಜಯ ಬ್ಯಾಂಕನ್ನು ವಿಲೀನಗೊಳಿಸುವ ನಿರ್ಧಾರವನ್ನು ಕೈಬಿಡಬೇಕೆಂದು ಸಿ.ಪಿ.ಐ(ಎಂ) ಉಡುಪಿ ಜಿಲ್ಲಾ ಸಮಿತಿ ಕೇಂದ್ರ ಸರಕಾರವನ್ನು ಆಗ್ರಹಿಸುತ್ತದೆ.

–ಬಾಲಕೃಷ್ಣ ಶೆಟ್ಟಿ

ವರದಿ: ವಾ.ಉ.

# ಜನ ಚಳುವಳಿಯ ಬದ್ಧ ಹಿತೈಷಿ ಪಿ.ಹರಿಶ್ಚಂದ್ರ ರಾವ್ ನಿಧನ

ಪಕ್ಷದ ಸದಸ್ಯರಲ್ಲದೆಯೂ, ಸಿಪಿಐ(ಎಂ) ಪಕ್ಷದ ಮಹಾ ಅಭಿಮಾನಿಯಾಗಿದ್ದ ಪಿ.ಹರಿಶ್ಚಂದ್ರ ರಾವ್ ಫೆಬ್ರವರಿ 18 ರಂದು ಮಂಗಳೂರಿನಲ್ಲಿ ನಿಧನರಾಗಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಕಿಡ್ನಿ ವೈಫಲ್ಯವನ್ನು ಅನುಭವಿಸುತ್ತಿದ್ದರೂ, ಪಕ್ಷದ ಚಟುವಟಿಕೆಗಳ ಬಗ್ಗೆ ಆಸಕ್ತಿ ವಹಿಸಿ, ಸಾಧ್ಯವಾದಲ್ಲಿ ಭಾಗವಹಿಸುತ್ತಿದ್ದರು. ಅವರಿಗೆ 81 ವರ್ಷ ವಯಸ್ಸಾಗಿತ್ತು.

ಸಿಪಿಐ(ಎಂ) ಪಕ್ಷದ ರಾಜ್ಯ ನಾಯಕರಾಗಿದ್ದ ಮಾಸ್ತರು ಪಿ.ರಾಮಚಂದ್ರರಾವ್ ಅವರು ಹರಿಶ್ಚಂದ್ರ ರಾಯರ ಚಿಕ್ಕಪ್ಪನಾಗಿದ್ದು, ಅವರಿಂದ ಪ್ರಭಾವಿತರಾಗಿದ್ದರು. ಭಾರತ ಸರಕಾರದ ಟೆಲಿಕಾಂ ಇಲಾಖೆಯಲ್ಲಿ ಎಳೆಯ ಪ್ರಾಯದಲ್ಲೇ ಸೇವೆಗೆ ಸೇರಿ, ಎಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದ ಅವಧಿಯಲ್ಲಿ ಟೆಲಿಕಾಮ್ ನೌಕರರ ಸಂಘಟನೆಯನ್ನು ಮಂಗಳೂರಿನಲ್ಲಿ ಕಟ್ಟಿ ಅನೇಕ ಹೋರಾಟಗಳನ್ನು ನಡೆಸಿದ್ದರು. ಇದೇ ಅವಧಿಯಲ್ಲಿ ಅವರು ಚಿಕ್ಕಪ್ಪ ಪಿ.ರಾಮಚಂದ್ರರಾಯರೊಂದಿಗೆ ಮಂಗಳೂರು ನಗರ ಬಡಾವಣೆಯ ಕಾರ್ಮಿಕ ಜನವಾಸದ ಪ್ರದೇಶಗಳಲ್ಲಿ ಮಾನವ ಸಮಾಜ ವಿಕಾಸ, ಕಾರ್ಮಿಕ ಚಳುವಳಿ ಕುರಿತಾದ ಪಾಠಗಳನ್ನು ನಡೆಸುತ್ತಿದ್ದರು. ಹಿರಿಯ ಕಮ್ಯೂನಿಸ್ಟ್ ಮುಖಂಡರಾದ ಕೆ.ಆರ್.ಶ್ರೀಯಾನರು ಯುವಕ ಮಂಡಲಗಳನ್ನು ಅಲ್ಲಲ್ಲಿ ಸಂಘಟಿಸುತ್ತಿದ್ದ ವೇಳೆ ಕೊಟ್ಟಾರ, ಮತ್ತು ಅಶೋಕನಗರದ ಯುವಕ ಮಂಡಲ ಕಟ್ಟುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು. 'ಸಮುದಾಯ' ಘಟಕ ಮಂಗಳೂರಿನಲ್ಲಿ ಪ್ರಾರಂಭವಾದಾಗ ಅದರೊಂದಿಗೆ ಜೊತೆಗೂಡಿ, ಬೀದಿ ನಾಟಕ ತಂಡಗಳನ್ನು ಚುನಾವಣಾ ಪ್ರಚಾರಕ್ಕಾಗಿ ಕರೆದೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅಲ್ಪಾವಧಿ ಕಾರ್ಯ ನಿರ್ವಹಿಸಿದ್ದ 'ಚಿತ್ರ ಸಮುದಾಯ' ಫಿಲ್ಮ್ ಸೊಸೈಟಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಸಿಪಿಐ(ಎಂ) ಪಕ್ಷದ ನಿಷ್ಠಾವಂತ ಬೆಂಬಲಿಗರಾಗಿದ್ದರು.

3 ದಶಕಗಳ ಭಾರತ ಸರಕಾರದ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದು ಕೊಲ್ಲಿ ರಾಷ್ಟ್ರದಲ್ಲಿ ಅಲ್ಲಿನ ಸರಕಾರದಲ್ಲಿ ಟೆಲಿಕಾಂ ಎಂಜಿನಿಯರ್ ಆಗಿ ಹಲವಾರು ವರ್ಷ ದುಡಿದು ವಾಪಸಾದ ಪಿ.ಹರಿಶ್ಚಂದ್ರ ರಾಯರು ಮಂಗಳೂರಿನಲ್ಲಿ ಮತ್ತೆ ಪಕ್ಷದ ಜೊತೆ ಸಂಪರ್ಕ ಬೆಳೆಸಿಕೊಂಡರು. ಕೌಟುಂಬಿಕ ಜವಾಬ್ದಾರಿಗಳು ಹೆಚ್ಚಿಗಿರುವುದರಿಂದ ತಾನಿನ್ನು ಪಕ್ಷದ ಸದಸ್ಯನಾಗಿ ಕೆಲಸ ಮಾಡುವುದು ಕಷ್ಟ ಎಂದು ಭಾವಿಸಿದ ಅವರು, ಪಕ್ಷಕ್ಕೆ ಎಡಚಳುವಳಿಗೆ, ವಿದ್ಯಾರ್ಥಿ ಯುವಜನ, ಮಹಿಳಾ, ಸಾಂಸ್ಕೃತಿಕ ಚಳುವಳಿಗೆ ಕೊಡುಗೈ ದಾನಿಯಾಗಿ ದೇಣಿಗೆ ನೀಡುತ್ತಿದ್ದರು. ಎಸ್ಎಫ್ಐನಲ್ಲಿ ಸಕ್ರಿಯರಾಗಿದ್ದ ವಿದ್ಯಾರ್ಥಿಗಳ ಕಾಲೇಜು ಶಿಕ್ಷಣಕ್ಕೆ, ಅನಾರೋಗ್ಯ ಪೀಡಿತ ಪಕ್ಷದ ಸಂಗಾತಿಗಳಿಗೆ ನೆರವು ನೀಡಿದ್ದಾರೆ.

ಕಳೆದ 10 ತಿಂಗಳಲ್ಲಿ ಅವರ ಅವಿವಾಹಿತ ಕಿರಿಯ ಪುತ್ರ ಅಪಘಾತದಿಂದ, ಪತ್ನಿ ಅನಾರೋಗ್ಯದಿಂದ ತೀರಿಕೊಂಡರೂ, ಪಕ್ಷಕ್ಕೆ ಕೊಡಬೇಕಾದ ದೇಣಿಗೆ ನೀಡಲು ಮರೆಯಲಿಲ್ಲ. ಕೇರಳ ಪ್ರವಾಹ ಸಂತ್ರಸ್ತರ ನಿಧಿಗೆ ಕೇಳುವ ಮೊದಲೇ ದೇಣಿಗೆ ಕಳುಹಿಸಿಕೊಟ್ಟರು. ಮಂಗಳೂರು ನಗರ ಕೇಂದ್ರದಲ್ಲಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳು ಏರ್ಪಡಿಸುತ್ತಿದ್ದ ಪ್ರತಿಭಟನಾ ಪ್ರದರ್ಶನಗಳಲ್ಲಿ ಅವರನ್ನು ಯಾವಾಗಲೂ ಕಾಣಲು ಸಾಧ್ಯವಿತ್ತು. ಗಾಂಧಿ 150–ಸೌಹಾರ್ದ ನಡಿಗೆ ಜನವರಿ 30 ರಂದು – ದೈಹಿಕವಾಗಿ ತುಂಬ ಬಳಲಿದ್ದರೂ ಒಂದು ಕಿ.ಮೀ.ನಡಿಗೆಯಲ್ಲಿ ಭಾಗವಹಿಸಿದ್ದು ಅವರ ಅಂತಿಮ ಬಹಿರಂಗ ಚಟುವಟಿಕೆಯಾಗಿತ್ತು.

ಪಿ.ಹರಿಶ್ಚಂದ್ರ ರಾಯರ ಅಜ್ಜ ಸ್ಥಾಪಿಸಿದ ಅಶೋಕ ನಗರ ಹಿರಿಯ ಪ್ರಾಥಮಿಕ ಶಾಲೆ ಕನ್ನಡ ಮಾಧ್ಯಮದಲ್ಲೇ ಮುಂದುವರಿಯಲು, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಅವರ ನಿಲುವು ಕಾರಣ. ಸಿಪಿಐ(ಎಂ) ಪಕ್ಷ ಒಂದೇ ಭಾರತ ದೇಶದ ಭವಿಷ್ಯದ ಆಶಾಕಿರಣ ಎಂದು ನಂಬಿದ್ದ ಪಿ.ಹರೀಶ್ಚಂದ್ರ ರಾಯರು ನಿಷ್ಕಾಮಕರ್ಮಿ. ಅಂತೆಯೇ ಸದ್ದು ಮಾಡದೇ ಈ ಜಗತ್ತನ್ನು ತೊರೆದಿದ್ದಾರೆ.



**ಪಿ. ಹರಿಶ್ಚಂದ್ರರಾಯರಿಗೆ ಶ್ರದ್ಧಾಂಜಲಿ:**

ಸಮುದಾಯ, ಅ.ಭಾ.ನ್ಯಾಯವಾದಿಗಳ ಸಂಘ, ದಲಿತ ಹಕ್ಕುಗಳ ಸಮಿತಿ, ಡಿವೈಎಫ್ಐ, ಎಸ್ಎಫ್ಐ, ಬ್ಯಾಂಕು ಅಧಿಕಾರಿಗಳ ಸಂಘ, ದಸಂಸ ಒಳಗೊಂಡ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಫೆಬ್ರವರಿ 20 ರಂದು ಮಂಗಳೂರಿನಲ್ಲಿ 'ವಿಕಾಸ' ಕಚೇರಿಯಲ್ಲಿ ಶ್ರದ್ಧಾಂಜಲಿ ಸಭೆ ನಡೆಸಲಾಯಿತು. ಡಾ.ಕೆ.ರಾಜೇಂದ್ರ ಉಡುಪ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಪಿ.ಹರಿಶ್ಚಂದ್ರ ರಾಯರ ಕುರಿತು ನ್ಯಾಯವಾದಿ ಯಶವಂತ ಮರೋಳಿ, ಡಾ.ಕೃಷ್ಣಪ್ಪ ಕೊಂಚಾಡಿ, ಮುನೀರ್ ಕಾಟಿಪಳ್ಳ, ನಿವೃತ್ತ ಬ್ಯಾಂಕ್ ಅಧಿಕಾರಿ ಕೆ.ರಾಘವ, ಹಿರಿಯ ಸಿಪಿಐ(ಎಂ) ಮುಖಂಡ ಕೆ.ಆರ್.ಶ್ರೀಯಾನ್, ವಸಂತ ಆಚಾರಿ, ಯಾದವ ಶೆಟ್ಟಿ, ವಾಸುದೇವ ಉಚ್ಚಿಲ, ಚಂದ್ರಹಾಸ ಜಪ್ಪಿನಮೊಗರು ಮಾತನಾಡಿದರು. ಹರಿಶ್ಚಂದ್ರರಾಯರ ಮಕ್ಕಳು, ಸೊಸೆ ಈ ಸಂದರ್ಭ ಉಪಸ್ಥಿತರಿದ್ದರು.

---

### ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಮಟ್ಟದ ಕಾರ್ಯಾಗಾರ

# ದಲಿತ ಹಕ್ಕುಗಳ ಪ್ರಶ್ನೆ ಮುನ್ನೆಲೆಗೆ ಬರಬೇಕಿದೆ – ಯು.ಬಸವರಾಜು



ಸ್ವಾತಂತ್ರ್ಯ ಬಂದು 72 ವರ್ಷಗಳು ಕಳೆದರೂ ದಲಿತರು ತಮ್ಮ ಹಕ್ಕುಗಳನ್ನು ಪಡೆಯಲಾಗುತ್ತಿಲ್ಲ, ಮಾತ್ರವಲ್ಲ ದಲಿತರ ಮೇಲಿನ ದಾಳಿಗಳು ಕಡಿಮೆಯಾಗುತ್ತಿಲ್ಲ. ಅಲ್ಲದೆ 1990ರ ಬಳಿಕದ ಜಾಗತೀಕರಣದ ಯುಗದಲ್ಲಿ ದಲಿತರ ಮೇಲಿನ ದಾಳಿಗಳು ಇನ್ನಷ್ಟು ತೀವ್ರವಾಗುತ್ತಿವೆ. ಕರ್ನಾಟಕ ಪ್ರಾಂತ ರೈತ ಸಂಘ ರೈತರ ಮತ್ತು ಕೃಷಿ ಕಾರ್ಮಿಕರ ಪರಿಸ್ಥಿತಿ ಹದಗೆಡುತ್ತಿರುವುದರ ವಿರುದ್ಧ ರೈತರನ್ನು, ಕೃಷಿ ಕಾರ್ಮಿಕರನ್ನು, ದಲಿತರನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿದೆ. ದಲಿತರ ಹಕ್ಕುಗಳ ಪ್ರಶ್ನೆ ಇವತ್ತು ಮುನ್ನೆಲೆಗೆ ಬರಬೇಕಾಗಿದೆ. ಹಾಗೆ ಬರಬೇಕಾದರೆ ದಲಿತರು ಇತರ ಎಡ ಹಾಗೂ ಪ್ರಜಾಪ್ರಭುತ್ವವಾದಿ ಸಂಘಟನೆಗಳೊಂದಿಗೆ ಜೊತೆಗೂಡಿ ಸಂಘಟಿತರಾಗಬೇಕಾಗಿದೆ. ದಲಿತರು ಕೇವಲ ಹಿತವಾದಿ ನೆಲೆಯಲ್ಲಿ ಸಂಘಟಿತರಾದರೆ, ಅವರ ಹಕ್ಕಿನ ಪ್ರಶ್ನೆಗಳು ರಾಷ್ಟ್ರೀಯ ಸಂವಾದದ ಮುನ್ನೆಲೆಗೆ ಬರಲಾರದು ಎಂಬುದಾಗಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು. ಬಸವರಾಜು ಹೇಳಿದರು.

ಅವರು ಮಂಗಳೂರಿನ ಕೊಂಚಾಡಿ ಶ್ರೀರಾಮಾಶ್ರಮ ಪ್ರೌಢಶಾಲೆಯಲ್ಲಿ ಫೆಬ್ರವರಿ 17 ರಂದು ದಲಿತ ಹಕ್ಕುಗಳ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 2 ದಿನಗಳ ಜಿಲ್ಲಾ ಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ರಾಜ್ಯದಲ್ಲಿ ದಲಿತರಿಗಾಗಿ ದುಡಿಯುತ್ತಿರುವ ಸಂಘಟನೆಗಳು ಹಲವಾರಿವೆ. ಕೆಲವು ಸಂಘಟನೆಗಳು ವ್ಯಕ್ತಿಗತ ನೇತೃತ್ವದಲ್ಲಿ ವಿಘಟನೆಯಾಗಿವೆ. ಹೀಗೆ ಆಗಲು ಮುಖ್ಯ ಕಾರಣ ಸಂಘಟನೆ ಕೇವಲ ಜಾತಿವಾದಿ ನೆಲೆಯಲ್ಲಿರುವುದು ಮತ್ತು ಇನ್ನೊಂದೆಡೆ ವ್ಯಕ್ತಿವಾದಿ ಪ್ರತಿಷ್ಠೆಗಳು ಪ್ರಧಾನವಾಗಿರುವುದು. ದಲಿತ ಹಕ್ಕುಗಳ ಸಂಘಟನೆ ಜಾತಿವಾದಿ ಸಂಘಟನೆಯಲ್ಲ. ದಲಿತರೂ, ದಲಿತೇತರರೂ ಜೊತೆಗೂಡಿರುವ ಸಂಘಟನೆ ಇದು. ಇದರ ವ್ಯಾಪ್ತಿಯಲ್ಲಿ ಎಲ್ಲ ದಲಿತರೂ ಬರುತ್ತಾರೆ. ದಲಿತರ ಹಕ್ಕುಗಳ ಪರ ಹೋರಾಡುತ್ತಿರುವ ದಲಿತೇತರರೂ ಇದರಲ್ಲಿರುತ್ತಾರೆ. ಅಂತಹ ಜಂಟಿ ಹೋರಾಟಗಳು ಮಾತ್ರ ದಲಿತರ ಹಕ್ಕುಗಳ ಪ್ರಶ್ನೆಗಳನ್ನು ಮುಂಚೂಣಿಗೆ ತರುತ್ತವೆ ಎಂಬುದಾಗಿ ಯು. ಬಸವರಾಜು ವಿವರಿಸಿದರು.

ಸ್ವಾತಂತ್ರ್ಯದ ಬಳಿಕ ಇಷ್ಟು ವರ್ಷಗಳ ಆಡಳಿತದಲ್ಲಿ ಭೂಮಾಲಕರು ಬಂಡವಾಳಶಾಹಿಗಳ ಪಾಲುಗಾರಿಕೆಯಲ್ಲಿ ದೇಶದ ಆಡಳಿತ ನಡೆಸುತ್ತಿದ್ದಾರೆ. ಪಾಳೇಗಾರಿ ಭೂಮಾಲಕತ್ವ ಇನ್ನೂ ಜೀವಂತ ಇರುವ ಹಿನ್ನೆಲೆಯಲ್ಲಿ ದಲಿತರು ಹಾಗೂ ಕೃಷಿಕಾರ್ಮಿಕರ ಮೇಲೆ ದಾಳಿಗಳು ನಡೆಯುತ್ತಿವೆ. ದಲಿತರ ಮೇಲಿನ ದಾಳಿ ಹಾಗೂ ತಾರತಮ್ಯಗಳು ಜಾಗತೀಕರಣದ ಅನಂತರ ಇನ್ನಷ್ಟು ತೀವ್ರತೆಯಿಂದ ನಡೆಯುತ್ತಿದ್ದು, ಇದನ್ನು ತಡೆಗಟ್ಟುವ ಹೋರಾಟದಲ್ಲಿ ದಲಿತ ಹಕ್ಕುಗಳ ಸಮಿತಿಯನ್ನು ಬಲಪಡಿಸಲು ಅವರು ಕರೆ ನೀಡಿದರು.

ದೇಶದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪ್ರತಿವರ್ಷ ಮಂಡಿಸುತ್ತಿರುವ ಬಜೆಟುಗಳನ್ನು ಪರಿಶೀಲಿಸಿದಾಗಲೂ ದಲಿತ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಆರ್ಥಿಕ ಕಾದಿರಿಸುವಿಕೆ ಇರುವುದಿಲ್ಲದಿರುವುದರ ಬಗ್ಗೆ ಅವರು ಗಮನ ಸೆಳೆದರು. ಉದಾಹರಣೆಗೆ ಕೇಂದ್ರದ ಈ ಸಾಲಿನ ಬಜೆಟಿನಲ್ಲಿ ಅಭಿವೃದ್ಧಿ ಬಾಬ್ತು ರೂ. 11 ಲಕ್ಷ ಕೋಟಿ ಮೊಬಲಗಿನಲ್ಲಿ ಜನಸಂಖ್ಯಾವಾರು ದಲಿತರಿಗಾಗಿ 3 ಲಕ್ಷ ಕೋಟಿ ರೂ. ಕಾದಿರಿಸಬೇಕಾಗಿತ್ತು. ಆದರೆ ಕಾದಿರಿಸಿರುವುದು ಕೇವಲ ರೂ. 1 ಲಕ್ಷ ಕೋಟಿ ಒಳಗೇನೇ. ಅದೇ ರೀತಿ ಇಡೀ ದೇಶದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಪ್ರತಿವರ್ಷ ಖರ್ಚು ಮಾಡುತ್ತಿರುವ ಬಜೆಟ್ಟಿನಲ್ಲಿ ಸುಮಾರು 5–7 ಲಕ್ಷ ಕೋಟಿ ರೂ. ಖರ್ಚು ಮಾಡಬೇಕಾದಲ್ಲಿ ಕೇವಲ ಸುಮಾರು ಒಂದೂವರೆ ಲಕ್ಷ ಕೋಟಿ ರೂ.ಗಳಷ್ಟನ್ನೇ ಕಾದಿರಿಸಿರುವುದು, ದೇಶದ ಆಳುವ ಸರ್ಕಾರಗಳು ಯಾರ ಪರವಾಗಿವೆ ಎಂಬುದನ್ನು ತೋರಿಸುತ್ತಿದೆ ಎಂದವರು ವಿವರಿಸಿದರು.

ಸರ್ಕಾರಗಳು ದಲಿತರಿಗೆ ಭೂಮಿ ಕೊಡುತ್ತಿಲ್ಲ, ಉದ್ಯೋಗ ಕೊಡುತ್ತಿಲ್ಲ ಅದೇ ಸರ್ಕಾರಗಳು ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಗಾಗಿ ಕೋಟಿಗಟ್ಟಲೆ ಎಕ್ರೆ ಭೂಬ್ಯಾಂಕಿನಲ್ಲಿ ಭೂಮಿ ಕಾದಿರಿಸಲು ನಿರ್ದೇಶನ ನೀಡಿವೆ. ಮೇಲುಜಾತಿಯವರಿಗೆ 10% ಮೀಸಲಾತಿ ಕಾದಿರಿಸುವ ಉತ್ಸಾಹ ಇದೆ. ಇವುಗಳ ಬಗ್ಗೆ ದಲಿತರು ಹಾಗೂ ದುಡಿಯುವ ವರ್ಗ ಜಾಗೃತರಾಗಿ ಹೋರಾಡಬೇಕಾಗಿದೆ. ಈ ನಿಟ್ಟಿನಲ್ಲಿ ದಲಿತ ಹಕ್ಕುಗಳ ಸಮಿತಿಯನ್ನು ದಕ್ಷಿಣ ಕನ್ನಡದಲ್ಲೂ ಬಲಪಡಿಸಲು ಯು. ಬಸವರಾಜು ಮನವಿ ಮಾಡಿದರು.

ದಲಿತ ಹಕ್ಕುಗಳ ರಾಜ್ಯ ಸಮಿತಿ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಜಾತಿ ತಾರತಮ್ಯ ತೊಲಗಿಸಬೇಕು, ಅಸ್ಪೃಶ್ಯತೆ ನಿವಾರಿಸಬೇಕು, ಜಾತಿ ವ್ಯವಸ್ಥೆಯ ನಿರ್ಮೂಲನೆ ಆಗಬೇಕು, ಜಾತಿ ಸಮಾನತೆ ಸಾಧ್ಯವಾಗಬೇಕು ಎಂಬ ನಿಟ್ಟಿನಲ್ಲಿ ದಲಿತ ಹಕ್ಕುಗಳ ಸಮಿತಿಯನ್ನು ಕಟ್ಟಲಾಗುತ್ತಿದೆ. ಇವತ್ತು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮನುವಾದಿ ಬಿಜೆಪಿ ಮುಖಂಡರು, ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ಬದಲಾಯಿಸುವ ಮಾತುಗಳನ್ನಾಡುತ್ತಿದ್ದಾರೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಇನ್ನೊಬ್ಬ ಅತಿಥಿಗಳಾದ ಸೀತಾರಾಮ್ ಎಸ್ ಮಾತನಾಡಿ, ದಲಿತರು ಇವತ್ತು ಸಾಧ್ಯವಾದಷ್ಟು ಹೆಚ್ಚಿನ ಮಟ್ಟದ ಶಿಕ್ಷಣ ಪಡೆಯುವುದು ಅತಿ ಅವಶ್ಯವಾಗಿದೆ. ಶಿಕ್ಷಣದೊಂದಿಗೆ ಸಂಘಟನೆ ಹಾಗೂ ಹೋರಾಟವನ್ನೂ ಕಟ್ಟಬೇಕು ಎಂಬುದಾಗಿ ಅವರು ಕರೆ ನೀಡಿದರು.

ದ.ಕ.ಜಿಲ್ಲಾ ಸಮಿತಿ ಸಂಚಾಲಕ ತಿಮ್ಮಯ್ಯ ಕೊಂಚಾಡಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಾಗಾರದ ಸ್ವಾಗತ ಸಮಿತಿಯ ಗೌರವಾಧ್ಯಕ್ಷ ಡಾ.ಕೃಷ್ಣಪ್ಪ ಕೊಂಚಾಡಿ ಸ್ವಾಗತಿಸಿ ಪ್ರಸ್ತಾವನೆ ಗೈದರು. ವೇದಿಕೆಯಲ್ಲಿ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷ ಸುಂದರ ಸಾಲ್ಯಾನ್, ಆದಿವಾಸಿ ಹಕ್ಕುಗಳ ಸಮಿತಿಯ ಭಾಸ್ಕರ ನಂತೂರು, ದಲಿತ ಹಕ್ಕುಗಳ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಗಿರಿಜ ಮೂಡಬಿದ್ರಿ ಉಪಸ್ಥಿತರಿದ್ದರು. ನವೀನ್ ಕೊಂಚಾಡಿ ಕಾರ್ಯಕ್ರಮ ನಿರೂಪಿಸಿದರು. ಶಶಿಕುಮಾರ್ ಗುಂಡಳಿಕೆ ವಂದಿಸಿದರು.

–ಗಿರಿಜ ಮೂಡಬಿದ್ರಿ




# ಆದಿವಾಸಿ ಸಂಘಟನೆಗಳಿಂದ ಜಿಲ್ಲಾಧಿಕಾರಿ ಕಚೇರಿ ಚಲೋ

ಆದಿವಾಸಿ ಸಮುದಾಯ ತಲೆತಲಾಂತರದಿಂದ ಪಶ್ಚಿಮಘಟ್ಟದಲ್ಲಿ ನೆಲೆ ಕಂಡುಕೊಂಡಿದ್ದರೂ ಭೂಮಿಯ ಹಕ್ಕು ಸಿಕ್ಕಿಲ್ಲ. ಆದಿವಾಸಿಗಳಿಗೆ ತಕ್ಷಣವೇ ಭೂಮಿಯ ಹಕ್ಕನ್ನು ನೀಡಿ ಆತ್ಮವಿಶ್ವಾಸದಿಂದ ಬದುಕುವ ವಾತಾವರಣವನ್ನು ಕಲ್ಪಿಸಿಕೊಡಿ ಎಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ರಾಜ್ಯ ಸಹಸಂಚಾಲಕ ಎಸ್.ವೈ.ಗುರುಶಾಂತ್ ಜಿಲ್ಲಾಡಳಿತವನ್ನು ಒತ್ತಾಯಿಸಿದರು.

ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಬೆಳ್ತಂಗಡಿ ತಾಲೂಕು ಸಮಿತಿ, ದ.ಕ.ಜಿಲ್ಲಾ ಮಲೆಕುಡಿಯ ಸಂಘ, ಬೆಳ್ತಂಗಡಿ ತಾಲೂಕು ಮಲೆಕುಡಿಯ ಸಂಘ, ಮಲೆಕುಡಿಯರ ಯುವ ವೇದಿಕೆ, ಬೆಳ್ತಂಗಡಿ ತಾಲೂಕು ಯುವ ಮರಾಠಿ ಸೇವಾ ಸಂಘದ ನೇತೃತ್ವದಲ್ಲಿ ಆದಿವಾಸಿ ಸಮುದಾಯದ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಹಮ್ಮಿಕೊಂಡ ಜಿಲ್ಲಾಧಿಕಾರಿ ಕಚೇರಿ ಚಲೋ ಧರಣಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಆದಿವಾಸಿ ಹಿತ ಕಾಪಾಡಲು 2006ರಲ್ಲಿ ಅರಣ್ಯ ಹಕ್ಕು ಕಾಯ್ದೆ ಜಾರಿಯಾದರೂ ಇಂದಿಗೂ ಅದರ ಅನುಷ್ಠಾನವಾಗಲಿಲ್ಲ. ಅಕ್ರಮ ಸಕ್ರಮದ ಮೂಲಕ ಅರ್ಜಿ ಸಲ್ಲಿಸಿದರೆ ಅದು ಕಂದಾಯ ಭೂಮಿಯಲ್ಲ, ಅರಣ್ಯ ಎಂದು ಹೇಳಲಾಗುತ್ತದೆ. ಅರಣ್ಯ ಹಕ್ಕು ಕಾಯ್ದೆ ಮೂಲಕ ಅರ್ಜಿ ಸಲ್ಲಿಸಿದರೆ ಅರಣ್ಯವಲ್ಲ ಎಂಬ ಉತ್ತರ ಬರುತ್ತದೆ. ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದರೆ ಈ ಭೂಮಿ ಯಾರದ್ದು ಎಂದು ತೀರ್ಮಾನಿಸುವುದು ಕಷ್ಟ ಕೆಲಸವಲ್ಲ. ಭೂಮಿಯ ಹಕ್ಕನ್ನು ಆದಿವಾಸಿಗಳಿಗೆ ಕೊಡಲು ಸರ್ಕಾರ ಮುತುವರ್ಜಿ ವಹಿಸುತ್ತಿಲ್ಲ ಎಂದು ಆರೋಪಿಸಿದರು.

ಆದಿವಾಸಿ ಪ್ರದೇಶಗಳಿಗೆ ನಾಗರೀಕ ಸೌಲಭ್ಯವನ್ನು ನೀಡಲು ಸರ್ಕಾರ ಮಧ್ಯಪ್ರವೇಶ ಮಾಡಬೇಕು. ನೆರಿಯ ಸುಂದರ ಮಲೆಕುಡಿಯ ಪ್ರಕರಣದಲ್ಲಿ ಪ.ಜಾತಿ / ಪ. ಪಂಗಡ ದೌರ್ಜನ್ಯ ತಡೆ ಕಾಯ್ದೆ ಪ್ರಕಾರ ಪ್ರಕರಣವನ್ನು ದಾಖಲಿಸಲು ಸರ್ಕಾರ ಕ್ರಮ ವಹಿಸಬೇಕು. ವಿಠಲ ಮಲೆಕುಡಿಯ ಮತ್ತು ಅವರ ತಂದೆಯ ಮೇಲೆ ಹೊರಿಸಿದ ದೇಶದ್ರೋಹದ ಪ್ರಕರಣವನ್ನು ಸರ್ಕಾರ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಸಿಐಟಿಯು ವಿನ ರಾಜ್ಯ ಉಪಾಧ್ಯಕ್ಷ ವಸಂತ ಆಚಾರಿ ಮಾತನಾಡಿ ಅರಣ್ಯ ವಾಸಿಗಳು ಇಂದಿಗೂ ವಿದ್ಯುತ್ ಇಲ್ಲದೇ ಚಿಮಿಣಿ ದೀಪದ ಬೆಳಕಿನಲ್ಲೇ ಇದ್ದಾರೆ. ತಮ್ಮ ಹಕ್ಕುಗಳ ಖಾತ್ರಿಗಾಗಿ ಕಾಡಿನಿಂದ ಬಂದು ಜಿಲ್ಲಾಧಿಕಾರಿ ಕಚೇರಿ ಎದುರು ಹೋರಾಟ ನಡೆಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಆದಿವಾಸಿಗಳು ವಾಸಿಸುವ ಪ್ರದೇಶಗಳಿಗೆ ಜಿಲ್ಲಾಡಳಿತ ಮೂಲಭೂತ ಸೌಕರ್ಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಕಾಶ್ಮೀರದಲ್ಲಿ ಉಗ್ರ ದಾಳಿಗೆ ಬಲಿಯಾದ ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಜಿಲ್ಲಾಧಿಕಾರಿಗಳ ಪರವಾಗಿ ಧರಣಿ ಸ್ಥಳಕ್ಕೆ ಬಂದ ತಹಶೀಲ್ದಾರ್ ಅನಂತ ಶಂಕರ್ ಆದಿವಾಸಿಗಳ ವಿವಿಧ ಬೇಡಿಕೆಯನ್ನು ಆಲಿಸಿ ಪರಿಹಾರಕ್ಕೆ ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಮಲೆಕುಡಿಯ ಸಂಘದ ಮಾಜಿ ಅಧ್ಯಕ್ಷ ಎಲ್ಯಣ್ಣ ಮಲೆಕುಡಿಯ, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಬೆಳ್ತಂಗಡಿ ತಾಲೂಕು ಅಧ್ಯಕ್ಷ ವಸಂತ ನಡ, ವಕೀಲ ಎಸ್.ಎಂ. ಶಿವಕುಮಾರ್, ಡಿವೈಎಫ್ಐ ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಬೆಳ್ತಂಗಡಿ ತಾಲೂಕು ಕಾರ್ಯದರ್ಶಿ ಜಯಾನಂದ ಪಿಲಿಕಲ, ಕೋಶಾಧಿಕಾರಿ ನಾಗೇಶ್ ಬಾಂಜಾರು, ಮುಖಂಡರಾದ ಪುರುಷೋತ್ತಮ ಗುಂಡ್ಯ, ದಮಯಂತಿ, ಲಕ್ಷ್ಮಣ ಅಲಂಗಾಯಿ, ಸುಂದರ ಮಲೆಕುಡಿಯ ಇದ್ದರು. ಸಮಿತಿ ಸಂಚಾಲಕ ಶೇಖರ ಲಾಯಿಲ ಕಾರ್ಯಕ್ರಮ ನಿರ್ವಹಿಸಿದರು.

ದ.ಕ ಜಿಲ್ಲೆಯ ಬೆಳ್ತಂಗಡಿ ಅತಿ ಹೆಚ್ಚು ಆದಿವಾಸಿಗಳಿರುವ ತಾಲೂಕು. ಮಲೆಕುಡಿಯ, ಮರಾಠಿ ನಾಯ್ಕ, ಕೊರಗ ಸಮುದಾಯಗಳು ವಾಸಿಸುತ್ತಿದ್ದಾರೆ. ಸ್ವಾತಂತ್ರ್ಯ ಲಭಿಸಿ 72 ವರ್ಷಗಳಾದರೂ ಇನ್ನೂ ಚಿಮಿಣಿ ದೀಪದಿಂದಲೇ ಜೀವನ ನಡೆಸುತ್ತಿದ್ದಾರೆ. ಹಲವಾರು ಕಾಲನಿಗಳಿಗೆ ರಸ್ತೆ ಸಂಪರ್ಕವಿಲ್ಲದೆ 10, 12 ಕಿಮೀ ಕಾಲ್ನಡಿಗೆಯಲ್ಲಿ ಮನೆ ತಲುಪಬೇಕಾದ ಅನಿವಾರ್ಯತೆ ಇದೆ. ಭೂಮಾಲೀಕರ ದೌರ್ಜನ್ಯಕ್ಕಂತೂ ಆದಿವಾಸಿಗಳ ಬದುಕು ತತ್ತರಿಸಿದೆ. ಇನ್ನೂ ಹಲವಾರು ಕುಟುಂಬಗಳು ಗುಡಿಸಲಿನಲ್ಲಿ ವಾಸಿಸುತ್ತಿದ್ದಾರೆ. ಮಾತ್ರವಲ್ಲದೆ ಪ್ರತಿ ಸಮುದಾಯಗಳು ಹಲವಾರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಸಮಸ್ಯೆಗಳು ಇನ್ನೂ ಗಂಭೀರವಾಗಿದೆ. ಪ್ರತಿಯೊಂದಕ್ಕೂ ವನ್ಯಜೀವಿ ಅರಣ್ಯ ಇಲಾಖೆಯ ಅನುಮತಿ ಪಡೆಯಬೇಕಾಗಿದೆ. ಅದು ಇಲ್ಲದಿದ್ದರೆ ಒಂದು ಹುಲ್ಲುಗಡ್ಡಿಯೂ ಅಲುಗಾಡದು. ಈ ಅನ್ಯಾಯದ ವಿರುದ್ಧ ಸ್ವರ ಎತ್ತಿದರೆ ಜೈಲೂಟ ಗ್ಯಾರಂಟಿ. ಪತ್ರಿಕೋದ್ಯಮ ಸ್ನಾತಕೋತ್ತರ ಪದವಿ ವಿದ್ಯಾರ್ಥಿಯಾಗಿದ್ದ ವಿಠಲ್ ಮಲೆಕುಡಿಯ ಮತ್ತು ಅವರ ತಂದೆಯ ಮೇಲಿನ ದೇಶದ್ರೋಹದ ಪ್ರಕರಣವೇ ಸಾಕ್ಷಿ. ಜನರು ವಾಸಿಸುವ ಮಣ್ಣಿನ ರಸ್ತೆಯನ್ನು ದುರಸ್ತಿ ಮಾಡಲು ಅವಕಾಶ ನೀಡದ ಅರಣ್ಯ ಇಲಾಖೆ, ದಟ್ಟ ಕಾಡಿನ ನಡುವೆ ಜೆಸಿಬಿ ಯಂತ್ರದ ಮೂಲಕ ಅನಧಿಕೃತ, ಅಕ್ರಮವಾಗಿ ರಸ್ತೆ ನಿರ್ಮಾಣ ಮಾಡುತ್ತಾರೆ. ಅರಣ್ಯ ಹಕ್ಕು ಕಾಯ್ದೆಯಡಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅವಕಾಶವಿದ್ದರೂ ರಸ್ತೆ, ವಿದ್ಯುತ್ ಎಂಬುದು ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವಾಸಿಗಳ ಪಾಲಿಗೆ ಗಗನ ಕುಸುಮ.

ನೆರಿಯ ಗ್ರಾಮದ ಭೂಮಾಲೀಕರ ದೌರ್ಜನ್ಯ: ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಆದಿವಾಸಿಗಳು ವಾಸಿಸುವ ಗ್ರಾಮ ನೆರಿಯ. ಜಿಲ್ಲೆಯ ಅತಿ ಹೆಚ್ಚು ಭೂಮಾಲೀಕರನ್ನು ಹೊಂದಿರುವ ಗ್ರಾಮವೂ ನೆರಿಯ. ಶತಮಾನಗಳಿಂದ ಜೀತ ಪದ್ಧತಿಯಿಂದ, ದೌರ್ಜನ್ಯಗಳಿಂದ ಜೀವನ ನಡೆಸುತ್ತಿದ್ದ ಆದಿವಾಸಿಗಳು ಇತ್ತೀಚಿನ ವರ್ಷಗಳಲ್ಲಿ ಜೀತ ಪದ್ಧತಿಯಿಂದ ಹೊರ ಬಂದಿದ್ದಾರೆ. ಆದರೂ ಇನ್ನೂ ದೌರ್ಜನ್ಯ ಮಾತ್ರ ನಿಂತಿಲ್ಲ. ನೆರಿಯ ಸುಂದರ ಮಲೆಕುಡಿಯ ಅವರ ಕೈ ಕಡಿದ ಪ್ರಕರಣ ಸಾಕ್ಷಿ. ಮಲೆಕುಡಿಯ ಸಮುದಾಯದ ಸುಂದರ ಮಲೆಕುಡಿಯ ಅವರು ಸುಮಾರು 50 ವರ್ಷಗಳಿಂದ ಸರ್ಕಾರಿ ಜಮೀನಿನಲ್ಲಿ ಕೃಷಿ ಮಾಡಿಕೊಂಡು ಮಂಜೂರಾತಿಗಾಗಿ ಅಕ್ರಮ ಸಕ್ರಮ ಯೋಜನೆಯಡಿ 1992 ರಲ್ಲಿ ಅರ್ಜಿ ಸಲ್ಲಿಸಿದರು. ಆದರೆ ಸರ್ಕಾರದ ಬೇಜವ್ದಾರಿಯಿಂದಾಗಿ ಈ ತನಕ ಹಕ್ಕುಪತ್ರ ದೊರೆತಿಲ್ಲ. ಇದು ಒಂದು ಉದಾಹರಣೆ ಅಷ್ಟೇ. ಈ ಭಾಗದ ಕಾಟಾಜೆ, ಪರ್ಪಳ ವ್ಯಾಪ್ತಿಯ 21 ಮಲೆಕುಡಿಯ ಸಮುದಾಯದ ಪರಿಸ್ಥಿತಿ ಇದೇ. ಈ ಆದಿವಾಸಿಗಳ ಕೃಷಿ ಜಮೀನನ್ನು ದೌರ್ಜನ್ಯ ಎಸಗಿ ಸ್ಥಳೀಯ ಭೂಮಾಲೀಕ ಗೋಪಾಲಕೃಷ್ಣ ಗೌಡ ಎಂಬಾತ ವಶಪಡಿಸಿಕೊಳ್ಳಲು ಸಂಚು ರೂಪಿಸಿದ್ದ. ಅದರ ಮುಂದುವರಿದ ಭಾಗವಾಗಿ ಸುಂದರ ಮಲೆಕುಡಿಯರ ಕೈ ಕಟ್ ಪ್ರಕರಣ ನಡೆದಿರುವುದು. ಇನ್ನೊಂದೆಡೆ ಭೂಮಾಲೀಕರು ತಮ್ಮತನವನ್ನು ಉಳಿಸಿಕೊಳ್ಳಲು ಆದಿವಾಸಿಗಳನ್ನು ಬೀದಿಪಾಲು ಮಾಡಲು ಪ್ರಯತ್ನಿಸುತ್ತಿದೆ. ಅದಕ್ಕೆ ನಮ್ಮನಾಳುವ ಸರ್ಕಾರ ಕೂಡ ಸಾತ್ ನೀಡುತ್ತಿದೆ.

ಬಾಂಜಾರು ಮಲೆಕುಡಿಯ ಕಾಲನಿಯ ಸಮೀಪದಲ್ಲಿ ಯೆನಪೋಯ ಮೋಹಿದ್ದೀನ್ ಕುಂಞ ಎಂಬ ಭೂಮಾಲೀಕನಿಗೆ 4020 ಎಕರೆ ಜಮೀನು ಇದೆ. ಇದರಲ್ಲಿ 368 ಎಕರೆ ಹೆಚ್ಚುವರಿ ಜಮೀನು ಇದೆ ಎಂಬ ಭೂನ್ಯಾಯ ಮಂಡಳಿಯ ಆದೇಶದ ವಿರುದ್ಧ ಭೂಮಾಲೀಕರು ರಾಜ್ಯ ಹೈಕೋರ್ಟ್ ನಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿತು. ಭೂಮಾಲೀಕರ ವಿರುದ್ಧ ಸರ್ಕಾರ ಕೂಡ ಹೈಕೋರ್ಟ್ ನಲ್ಲಿ ರಿಟ್ ಅರ್ಜಿ ಸಲ್ಲಿಸಿತು. ಕೊನೆಗೆ ಎರಡೂ ಪಿಟಿಷನ್ ರದ್ದು ಮಾಡಲಾಯಿತು. ಆದರೂ ಛಲ ಬಿಡದ ಸರ್ಕಾರ ಮತ್ತೆ 9 ವರ್ಷದ ಬಳಿಕ ಭೂಮಾಲೀಕರ ವಿರುದ್ಧ ಸ್ಪೆಷಲ್ ರಿಟ್ ಪಿಟಿಷನ್ ದಾಖಲಿಸಿತು. ಆಗ ಭೂಮಾಲೀಕರು ನಾವು ಬಾಂಜಾರು ಮಲೆಕುಡಿಯ ಸಮುದಾಯದ ಕುಟುಂಬಗಳಿಗೆ ತಲಾ 4 ರಿಂದ 6 ಎಕರೆಯಂತೆ 573 ಎಕರೆ ಜಮೀನು ಭೂಸುಧಾರಣಾ ಕಾಯ್ದೆಯಡಿ ನೀಡಿರುವುದಾಗಿ ಹೇಳಿತು. ಆಗ ರಾಜ್ಯ ಸರ್ಕಾರವು ಗೇಣಿದಾರರಲ್ಲದ ಎಸ್ಟೇಟ್ ನಲ್ಲಿ ಕೂಲಿಯಾಳುಗಳಾಗಿದ್ದ ಮಲೆಕುಡಿಯ ಸಮುದಾಯದ ಜನರಿಗೆ ಭೂ ಮಂಜೂರಾತಿ ನ್ಯಾಯ ಸಮ್ಮತವಲ್ಲ ಎಂದು ವಾದ ಮಂಡಿಸಿತು. ಈ ಬಗ್ಗೆ ಪಿಟಿಷನ್ ಇನ್ನೂ ವಿಚಾರಣೆಗೆ ಬಾಕಿ ಇದೆ. ಈ ಪ್ರಕರಣದಲ್ಲಿ ಸರ್ಕಾರವೇ ಶತಮಾನಗಳಿಂದ ವಾಸವಾಗಿರುವ ಆದಿವಾಸಿಗಳ ಜಮೀನನ್ನು ವಶಪಡಿಸಿಕೊಂಡು ಬೀದಿಪಾಲು ಮಾಡಲು ಹೊರಟಿದೆ.

ಇನ್ನೂ ಹಲವಾರು ಪ್ರಮುಖ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಬೆಳ್ತಂಗಡಿ ತಾಲೂಕು ಸಮಿತಿ ಪೆಬ್ರವರಿ 15 ರಂದು ದ.ಕ ಜಿಲ್ಲಾಧಿಕಾರಿ ಕಛೇರಿ ಚಲೋ ಕಾರ್ಯಕ್ರಮ ಸಂಘಟಿಸಿತು.ಈ ಪ್ರತಿಭಟನೆಯನ್ನು ದಮನಿಸಲು ಸ್ಥಳೀಯ ಶಾಸಕ ಹರೀಶ್ ಪೂಂಜ ಸೇರಿದಂತೆ ಸಂಘಪರಿವಾರ ಪ್ರೇರಿತ ಆದಿವಾಸಿ ಸಂಘಟನೆಗಳು ಪ್ರಯತ್ನಿಸಿದರು. ಆದರೆ ಅದನ್ನೆಲ್ಲ ಮೀರಿ ಜಿಲ್ಲಾಧಿಕಾರಿ ಚಲೋ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಯಿತು. ದ.ಕ ಜಿಲ್ಲೆಯ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ಪ್ರತಿಭಟನಾ ಸ್ಥಳಕ್ಕೆ ಸರ್ಕಾರದ ಪ್ರತಿನಿಧಿಗಳು ಬಂದು ಮನವಿ ಸ್ವೀಕರಿಸಿದ ಘಟನೆ ನಡೆಯಿತು.

# ಕುಂದಾಪುರ: ಸರಕಾರ ನಿಗದಿಪಡಿಸಿದ ಕನಿಷ್ಠ ವೇತನ ಅದೇಶ ಜಾರಿಗೊಳಿಸಲು ಒತ್ತಾಯಿಸಿ ಹೊರಾಟದ ಹಾದಿಯಲ್ಲಿ ಹೆಂಚು ಕಾರ್ಮಿಕರು

ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯ ಹಾಗೂ ಕರಾವಳಿಯ ಉತ್ತರ ಕನ್ನಡ ಜಿಲ್ಲೆಯೂ ಸೇರಿಕೊಂಡಂತೆ ಕಳೆದ 5–6 ದಶಕಗಳಿಂದ ಸಿಐಟಿಯು ನೇತೃತ್ವದಲ್ಲಿ ಎಸ್.ಕೆ. ಟೈಲ್ ವರ್ಕರ್ಸ್ ಯೂನಿಯನ್ ಅಡಿಯಲ್ಲಿ ಸುಮಾರು 55–60ಕ್ಕೂ ಹೆಚ್ಚು ಹೆಂಚು ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ಸಹಸ್ರಾರು ಸಂಖ್ಯೆಯಲ್ಲಿ ಸಂಘಟಿತರಾಗಿ, ತಮ್ಮ ನ್ಯಾಯಯುತ ಹಕ್ಕುಗಳಿಗಾಗಿ ಸಮರಧೀರ ಹೊರಾಟ ಮಾಡಿದ ಪರಂಪರೆ ಇದೆ. ಕರಾವಳಿ ಪ್ರದೇಶದ ಕಾರ್ಮಿಕರ ಚಳುವಳಿ ಭೂ ಮಸೂದೆ ಜಾರಿಗೆ ರೈತ ಚಳುವಳಿ ನಡೆಸಿ ಎಡಪಂಥೀಯ ರಾಜಕೀಯ ಚಳುವಳಿಗೆ ನೇತೃತ್ವ ಕೊಟ್ಟ ಪರಂಪರೆ, ಇತಿಹಾಸ ಗೌರವ ಸ್ಥಾನ ಹೆಂಚು ಕಾರ್ಮಿಕರಿಗೆ ಸಲ್ಲುತ್ತದೆ. ಇದೀಗ ಎಸ್.ಕೆ. ಟೈಲ್ಸ್ ವರ್ಕರ್ಸ್ ಯೂನಿಯನ್, ಉಡುಪಿ ಜಿಲ್ಲಾ ಹೆಂಚು ಕಾರ್ಮಿಕರ ಸಂಘವಾಗಿ

**ಪುಟ 10 ಕ್ಕೆ**

| ಕನಿಷ್ಟ ವೇತನ ದರ | | | |
|---|---|---|---|
| **ಕೆಲಸದ ವರ್ಗಿಕರಣ** | **ಮೂಲ ವೇತನ** | **ತುಟ್ಟಿ ಭತ್ಯೆ** | **ಒಟ್ಟು ವೇತನ** |
| 1)ಕುಶಲ ಕಾರ್ಮಿಕರು ವಲಯ 4 : ದಿನಕ್ಕೆ | ರೂ. 465.85 | ರೂ. 26.26 | ರೂ. 492.11 |
| 2)ಅರೆ ಕುಶಲ ಕಾರ್ಮಿಕರು ವಲಯ 4 : ದಿನಕ್ಕೆ | ರೂ. 423.50 | ರೂ. 26.26 | ರೂ. 449.76 |
| 3)ಅಕುಶಲ ಕಾರ್ಮಿಕರು ವಲಯ 4 : ದಿನಕ್ಕೆ | ರೂ. 385.00 | ರೂ. 26.26 | ರೂ. 411.26 |
| ಈ ಮೇಲಿನ ಕನಿಷ್ಟ ವೇತನ ಕಾರ್ಮಿಕರಿಗೆ ನ್ಯಾಯಬದ್ಧವಾಗಿ ಸಲ್ಲಬೇಕಾಗಿದೆ. | | | |

**ಬಜೆಟ್ಟು ಮೇಲು ಮೇಲೆ ಸಮೃದ್ಧವಾಗಿರುವಂತೆ ಕಾಣುತ್ತದೆ. ಇದು ಅದರ ಒಂದು ಮುಖ ಮಾತ್ರ. ಬಜೆಟ್ ಎನ್ನುವುದು ಅನುದಾನವನ್ನು ಇಲ್ಲೊಂದಿಷ್ಟು, ಅಲ್ಲೊಂದಿಷ್ಟು ಹಂಚುವ ಕಾರ್ಯಯೋಜನೆಯಲ್ಲ. ಬಜೆಟ್ಟ ಎನ್ನುವುದು ಹನಿ ನೀರಾವರಿಯಂತೆ, ತುಂತುರು ನೀರಾವರಿಯಂತೆ ಹಣ ವಿತರಣೆಯ ಚಟುವಟಿಕೆಯಾಗ'ಬಾರದು. ಅದೊಂದು ಬಂಡವಾಳ, ಹೂಡಿಕೆ, ಉತ್ಪಾದಕತೆ, ಕಾರ್ಯಕ್ಷಮತೆ, ಉಳಿತಾಯ, ಮಿತವ್ಯಯ ಮುಂತಾದ ಸಂಗತಿಗಳನ್ನು ಒಳಗೊಳ್ಳುವ ಒಂದು ಕಾರ್ಯಸಾಧನ. ಅದನ್ನು ಒಂದು 'ದತ್ತಿ–ದಾನ–ದಕ್ಷಿಣೆ' ದಸ್ತಾವೇಜನ್ನಾಗಿ ನೋಡಬಾರದು.**

**ಕರ್ನಾಟಕವು ಇನ್ನುಮೇಲೆ ಅಭಿವೃದ್ಧಿಯ ಗುಣಮಟ್ಟಕ್ಕೆ, ವೆಚ್ಚದ ಕಾರ್ಯಕ್ಷಮತೆಗೆ, ಪ್ರತಿರೂಪಾಯಿ ಹೂಡಿಕೆಯಿಂದ ಬರುವ ಪ್ರತಿಫಲದ ಬಗ್ಗೆ ಗಮನ ನೀಡಬೇಕು. ಬೆವರು, ಕಣ್ಣೀರು ಮತ್ತು ರಕ್ತ ಹರಿಸಿ ರಾಜ್ಯದ ದುಡಿಮೆಗಾರರು ನೀಡಿದ ತೆರಿಗೆ ಹಣವನ್ನು ಅತ್ಯಂತ ಉತ್ಪಾದಕ ರೀತಿಯಲ್ಲಿ ವ್ಯಯಿಸುವಂತಾಗಬೇಕು. ಭೌತಿಕ ಗುರಿ ಮತ್ತು ಸಾಧಿಸಿಕೊಂಡ ಗುರಿ ಎಂಬ ಓಬಿರಾಯನ ಕಾಲದ ಮೌಲ್ಯಮಾಪನ ಕ್ರಮವನ್ನು ಕೈಬಿಟ್ಟು ಪ್ರತಿ ರೂಪಾಯಿ ವೆಚ್ಚದಿಂದ ಬಂದ ಫಲೋತ್ಪತ್ತಿಯೇನು(ಔಟ್‌ಕಮ್ಸ್)ಎಂಬುದು ಬಜೆಟ್ ಮೌಲ್ಯಮಾಪನದ ಮಾನದಂಡವಾಗಬೇಕು. ಈ ಮಾಪನದಲ್ಲಿ ಕುಮಾರಸ್ವಾಮಿ ಅವರ ಬಜೆಟ್ ಪಾಸಾಗುವುದು ಕಷ್ಟ.**

# ಸಮೃದ್ಧತೆ ಮತ್ತು ಸಂದಿಗ್ಧತೆಯ ಕರ್ನಾಟಕ ಬಜೆಟ್ 2019–2020




**ಪ್ರೊ. ಟಿ. ಆರ್. ಚಂದ್ರಶೇಖರ**

ಬಜೆಟ್ ಎನ್ನುವುದು ಕೇವಲ ಅಂಕಿಸಂಖ್ಯೆಗಳ ಕೋಶವಲ್ಲ. ಇದು ಅಲ್ಪಾವಧಿಯಲ್ಲಿ ಅಭಿವೃದ್ಧಿಯ ದಿಕ್ಕು–ದಿಶೆಯನ್ನು ಸೂಚಿಸುವ ಒಂದು ಅಭಿವೃದ್ಧಿ ಸೂತ್ರ. ಬಜೆಟ್ ಎನ್ನುವುದು ಕೇವಲ ಹಣಕಾಸನ್ನು ಅನುದಾನದ ರೂಪದಲ್ಲಿ ವಿತರಿಸುವ ಚಟುವಟಿಕೆಯಲ್ಲ. ದೀರ್ಘಾವಧಿಯ ದೃಷ್ಟಿಯಿಂದ ಬಂಡವಾಳ ಹೂಡಿಕೆಯನ್ನು ನಿರ್ಧರಿಸುವ ಕಾರ್ಯತಂತ್ರವಾಗಿದೆ. ಅಭಿವೃದ್ಧಿಯನ್ನು ವರಮಾನದ ಜೊತೆಯಲ್ಲಿ ಇತರೆ ಸಂಗತಿಗಳಾದ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಮಹಿಳೆಯರ ಸ್ಥಿತಿಗತಿ, ಆಹಾರ ಭದ್ರತೆ, ಉದ್ಯೋಗ, ಪರಿಸರ ಮುಂತಾದವುಗಳ ಒಂದು ಸಂಯುಕ್ತ ಕ್ರಿಯೆಯನ್ನಾಗಿ ನೋಡುವುದು ಇಂದು ರೂಢಿಗೆ ಬಂದಿದೆ. ಅಭಿವೃದ್ಧಿಯ ಚಾಲಕ ಶಕ್ತಿಯಾದ ಬಜೆಟ್ಟನ್ನು ಹೀಗೆ ವಿಸ್ತೃತ ಚೌಕಟ್ಟಿನಲ್ಲಿ ಪರಿಶೀಲಿಸುವ ಅಗತ್ಯವಿದೆ. ಬಜೆಟ್ಟನ್ನು ಅಖಂಡ ಪ್ರಕ್ರಿಯೆಯಾಗಿ ನಿರ್ವಹಿಸುವ ಕ್ರಮ ವ್ಯಾಪಕವಾಗಿ ರೂಢಿಯಲ್ಲಿದೆ. ನಮ್ಮ ದೇಶವು ಪ್ರಜ್ಞಾಪೂರ್ವಕವಾಗಿ ಒಕ್ಕೂಟ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದರೂ ಕೇಂದ್ರ ಸರ್ಕಾರವು ಇತ್ತೀಚಿಗೆ ಅಖಂಡ ಕ್ರಮದಲ್ಲಿ ಬಜೆಟ್ಟನ್ನು ನಿರ್ವಹಿಸುತ್ತಿರುವ ಸಂಗತಿ ನಮ್ಮ ಮುಂದಿದೆ. ಕೇರಳ ರಾಜ್ಯದ ಮಹಾಪ್ರವಾಹದ ಗಂಡಾಂತರವನ್ನು ಎದುರಿಸುತಿದ್ದ ಸಂದರ್ಭದಲ್ಲಿ ಅದು ಹೇಗೆ ನಡೆದುಕೊಂಡಿತು ಎಂಬುದನ್ನು ಇಲ್ಲಿ ನೆನೆಯಬಹದು, ಎನ್. ಕೆ. ಸಿಂಗ್ ಅಧ್ಯಕ್ಷತೆಯ 15ನೆಯ ರಾಷ್ಟ್ರೀಯ ಹಣಕಾಸು ಆಯೋಗದ ಪರಿಶೀಲನಾರ್ಹ ಅಂಶಗಳಲ್ಲಿ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುವ ರೀತಿಯಲ್ಲಿ 2011ರ ಜನಗಣತಿಯನ್ನು ಆಧಾರ ಮಾಡಿಕೊಂಡು ಸಂಪನ್ಮೂಲ ವಿತರಣೆ ಸೂತ್ರವನ್ನು ರೂಪಿಸುವುದಕ್ಕೆ ಮುಂದಾಗಿರುವ ಕ್ರಮದಲ್ಲಿ ಇದನ್ನು ಕಾಣಬಹುದು, ನೀಟ್(ಎನ್ಈಈಟಿ) ರಾಷ್ಟ್ರೀಯ ಪರೀಕ್ಷೆಯ ಕ್ರಮದಲ್ಲಿಯೂ ಇದು ಢಾಳಾಗಿ ಕಾಣುತ್ತದೆ).

ಸಮ್ಮಿಶ್ರ ಸರ್ಕಾರದ ಎರಡನೆಯ ರೂ. 2.34 ಲಕ್ಷ ಕೋಟಿಯ 2019–2020ನೆಯ ಸಾಲಿನ ಬಜೆಟ್ಟನ್ನು ಫೆಬ್ರವರಿ 8 ರಂದು ಹಣಕಾಸು ಮಂತ್ರಿಗಳೂ ಆಗಿರುವ ಮುಖ್ಯಮಂತ್ರಿ ಕುಮಾರಸ್ವಾಮಿ ಮಂಡಿಸಿದ್ದಾರೆ. ಕಳೆದ ವರ್ಷದ ಬಜೆಟ್ಟಿಗಿಂತ ಇದು ಶೇ.12ರಷ್ಟು ಅಧಿಕವಾಗಿದೆ. ಕಾರ್ಯಕ್ರಮಗಳ ಮಹಾಪೂರವನ್ನೇ ಕುಮಾರಸ್ವಾಮಿಗಳು ಬಜೆಟ್ಟಿನಲ್ಲಿ ಅಡಗಿಸಿದ್ದಾರೆ. ಉದಾಹರಣೆಗೆ ಕೃಷಿ ಮತ್ತು ತತ್ಸಬಂಧಿ ವಲಯಕ್ಕೆ ಸರಿಸುಮಾರು 50 ಕಾರ್ಯಕ್ರಮಗಳನ್ನು ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಇದೇ ಕ್ರಮವನ್ನು ಎಲ್ಲ ವಲಯಗಳಲ್ಲಿಯೂ ಕಾಣಬಹುದು. ಕೃಷಿಗೆ ಬಜೆಟ್ಟಿನಲ್ಲಿ ಅನೇಕ ಉಪಯುಕ್ತ ಕಾರ್ಯಕ್ರಮಗಳಿರುವುದನ್ನು ಕಾಣಬಹುದು. ಅದರಲ್ಲೂ ಸರ್ಕಾರಗಳು ಮರೆತೆ ಬಿಟ್ಟಿದ್ದ ಒಣ




ಭೂಮಿ ಬೇಸಾಯಕ್ಕೆ ಮಹತ್ವದ ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ. ಒಣ ಬೇಸಾಯದ ಅಭಿವೃದ್ಧಿ ಎನ್ನುವುದು ಮೂಲತಃ ಸುಸ್ಥಿರಗತಿ ಸ್ವರೂಪದ್ದಾಗಿದೆ. ಕೆರೆಗಳ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ಬಜೆಟ್ಟಿನಲ್ಲಿ ಸೇರಿಸಿದ್ದಾರೆ. ಸಾಲಮನ್ನಾ ಜೊತೆಗೆ ಅತಿಸಣ್ಣ ಮತ್ತು ಸಣ್ಣ ರೈತರಿಗೆ ನೇರ ವರಮಾನ ವರ್ಗಾವಣೆ ಸೂತ್ರದಲ್ಲಿ ರೂ. 10,000 ನೀಡುವದು ಪ್ರಶಂಶನೀಯ ಕ್ರಮವಾಗಿದೆ. ಪ್ರತ್ಯೇಕ ಬೆಳೆ ವಿಮೆ, ಸಿರಿಧಾನ್ಯಕ್ಕೆ ಪ್ರೋತ್ಸಾಹ, ಕೃಷಿ ಉತ್ಪನ್ನಗಳ ಸಂಸ್ಕರಣ ಘಟಕಗಳ ಸ್ಥಾಪನೆ, ಬೆಲೆ ಕೊರತೆಯನ್ನು ತುಂಬಿ ಕೊಡುವ ಹೊಸ ಸೂತ್ರ, ಕೆರೆಗಳ ಪುನರುಜ್ಜೀವನ ಮುಂತಾದವು ಕೃಷಿ ಅಭಿವೃದ್ಧಿಗಾಗಿ ಬಜೆಟ್ಟಿನಲ್ಲಿ ಘೋಷಿಸಲಾಗಿದೆ.

ರೈತರಿಗೆ ಮಾತ್ರವಲ್ಲ. ಬಜೆಟ್ಟಿನಲ್ಲಿ ಕಾರ್ಮಿಕರಿಗೆ, ಕಟ್ಟಡ ನಿರ್ಮಾಣ ಕಾರ್ಮಿಕರಿಗೆ, ಹಿಂದುಳಿದ ವರ್ಗಗಳಿಗೆ, ಹಿಂದುಳಿದ ವರ್ಗಗಳ ಅಭಿವೃದ್ಧಿ ಮಂಡಳಿಗಳಿಗೆ, ಪ್ರಾದೇಶಿಕ ಸಮತೋಲನ ಕಾರ್ಯಕ್ರಮಗಳಿಗೆ(ಹೈದರಾಬಾದ್ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಗೆ ರೂ.1500 ಕೋಟಿ, ಡಾ. ಡಿ. ಎಂ. ನಂಜುಂಡಪ್ಪ ವಿಶೇಷ ಅಭಿವೃದ್ಧಿ ಯೋಜನೆಗೆ ರೂ.3010 ಕೋಟಿ, ಮಲೆನಾಡು, ಬಯಕಸೀಮೆ ಮತ್ತು ಕರಾವಳಿ ಅಭಿವೃದ್ಧಿ ಮಂಡಳಿಗಳಿಗೆ ರೂ.195 ಕೋಟಿ), ಮಹಿಳೆಯರಿಗೆ, ದಲಿತರಿಗೆ ಬರಪೂರ ಅನುದಾನ ಘೋಷಿಸಿದ್ದಾರೆ. ಉದಾಹರಣೆಗೆ ಕೇಂದ್ರ ಸರ್ಕಾರವು 2019–20ನೆಯ ಸಾಲಿಗೆ ತನ್ನ ಬಜೆಟ್ಟಿನಲ್ಲಿ ದೇಶದ 25 ಕೋಟಿಗೂ ಮೀರಿದ ಪ.ಜಾ. ಮತ್ತು ಪ.ಪಂ. ಜನರ ಕಲ್ಯಾಣಕ್ಕೆ ರೂ.1.26 ಲಕ್ಷ ಕೋಟಿ ಅನುದಾನ ನೀಡಿದ್ದರೆ ರಾಜ್ಯದ 1.5 ಕೋಟಿ ಪ.ಜಾ. ಮತ್ತು ಪ.ಪಂ. ಜನರ ಅಭಿವೃದ್ಧಿಗೆ ಕುಮಾರಸ್ವಾಮಿ ರೂ.30445 ಕೋಟಿ ಅನುದಾನ ನೀಡಿದ್ದಾರೆ. ರಾಜ್ಯದ ಒಟ್ಟು ಬಜೆಟ್ ವೆಚ್ಚದಲ್ಲಿ ಇದರ ಪಾಲು ಶೇ.12.82 ರಷ್ಟಾಗುತ್ತದೆ. ಆದರೆ ಕೇಂದ್ರದ್ದು ಕೇವಲ ಶೇ. 4.56 ರಷ್ಟಿದೆ. ನಮ್ಮ ರಾಜ್ಯದ ಅನುಪಾತದ ರೀತಿಯಲ್ಲಿ ಒಟ್ಟು ಬಜೆಟ್ಟಿನ ಶೇ 12 ರಷ್ಟನ್ನು ಕೇಂದ್ರ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ.ಗೆ ಅನುದಾನವನ್ನು ನೀಡಿದ್ದರೆ ಅವುಗಳಿಗೆ ಸುಮಾರು ರೂ. 3.34 ಲಕ್ಷ ಕೋಟಿ ದೊರೆಯುತ್ತಿತ್ತು.

ದಲಿತರಿಗೆ ಸಂಬಂಧಿಸಿದಂತೆ ಕೇಂದ್ರವು ರಾಜ್ಯ ಸರ್ಕಾರದಂತೆ ಉದಾರವಾಗಿಲ್ಲ. ಇದಿಷ್ಟೇ ಅಲ್ಲ. ಅದು ಪರಿಶಿಷ್ಟ ಜಾತಿ ವಿಶೇಷ ಯೋಜನೆ ಎನ್ನುವುದನ್ನು ಪರಿಶಿಷ್ಟ ಜಾತಿ ಕಲ್ಯಾಣ ಕಾರ್ಯಕ್ರಮವೆಂದೂ, ಬುಡಕಟ್ಟು ವಿಶೇಷ ಘಟಕ ಉಪಯೋಜನೆಯನ್ನು ಬುಡಕಟ್ಟು ಕಲ್ಯಾಣ ಕಾರ್ಯಕ್ರಮವೆಂದು ಶೀರ್ಷಿಕೆಗಳನ್ನು ಬದಲಾಯಿಸಿದೆ. ಕೇಂದ್ರ ಸರ್ಕಾರದ ಈ ಧೋರಣೆಯ ಮೂಲದಲ್ಲಿರುವ ಸಿದ್ಧಾಂತವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ದುರ್ಬಲರ, ಅಂಚಿನಲ್ಲಿರುವವರ, ವಂಚಿತರ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮಗಳು(ಸಕಾರಾತ್ಮಕ ತಾರತಮ್ಯ ಕ್ರಮ) ಬೇಕು ಎನ್ನುವುದರ ಬಗ್ಗೆ ಪ್ರಸ್ತುತ ಕೇಂದ್ರ ಸರ್ಕಾರಕ್ಕೆ ನಂಬಿಕೆಯಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಅಭಿವೃದ್ಧಿಯನ್ನು ಅದು ದತ್ತಿ–ದಾನ–ಉಂಬಳಿಯನ್ನಾಗಿ ನೋಡುತ್ತದೆ ವಿನಾ ಅದನ್ನು ಹಕ್ಕಿನ ಪರಿಭಾಷೆಯಲ್ಲಿ ನೋಡುವುದಕ್ಕೆ ಅದು ಸಿದ್ಧವಿಲ್ಲ. ಇದಲ್ಲದೆ ಅಲ್ಪಸಂಖ್ಯಾತ ವರ್ಗಕ್ಕೆ, ಪ್ರಮುಖವಾಗಿ ಹಿಂದುಳಿದ ವರ್ಗಗಳ ಮಠಗಳಿಗೆ, ಸಂಸ್ಥೆಗಳಿಗೆ, ಆಶ್ರಮಗಳಿಗೆ ಅನುದಾನವನ್ನು ಯಥೇಚ್ಛವಾಗಿ ನೀಡಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ವಿವಿಧ ರೀತಿಯ ಕಾರ್ಯಕ್ರಮಗಳ ಮೂಲಕ ಅಪಾರ ಅನುದಾನ ನೀಡಿದ್ದಾರೆ. ವಿಶೇಷ ವಸತಿ ಶಾಲೆಗಳನ್ನು ತೆರೆಯುವ ಕಾರ್ಯಕ್ರಮವಿದೆ. ವಸತಿ, ಶೌಚಾಲಯ, ಕೌಶಲ್ಯ ತರಬೇತಿ ಕಾರ್ಯಕ್ರಮ, ಮೂಲಭೂತ ಸೌಲಭ್ಯಗಳಾದ ರಸ್ತೆಗಳು, ಕುಡಿಯುವ ನೀರು, ನಗರಾಭಿವೃದ್ಧಿ, ಇಂಧನ, ಸೌರಶಕ್ತಿ – ಹೀಗೆ ಹತ್ತಾರು ಕಾರ್ಯಕ್ರಮಗಳ ಬಗ್ಗೆ ಒತ್ತು ಕೊಟ್ಟು ಬಜೆಟ್ ರೂಪಿಸಲಾಗಿದೆ.

ಕಳೆದ ಹತ್ತಾರು ವರ್ಷಗಳಿಂದ ರಾಜ್ಯವು 'ವಿತ್ತೀಯ ಶಿಸ್ತು' ಪಾಲಿಸಿಕೊಂಡು ಬರುತ್ತಿರುವುದು ಅದರ ಬಜೆಟ್ ನಿರ್ವಹಣೆಯ ಹೆಚ್ಚುಗಾರಿಕೆಯಾಗಿದೆ. ರೆವಿನ್ಯೂ ಖಾತೆಯಲ್ಲಿ ಮಿಗುತೆಯನ್ನು ಸಾಧಿಸಿಕೊಳ್ಳಲಾಗಿದೆ. ವಿತ್ತೀಯ ಕೊರತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ(ಎಸ್‌ಡಿಪಿ)ಶ 'ೇ.2.65ರಷ್ಟಿದೆ. ಕೇಂದ್ರಕ್ಕೆ ಇದನ್ನು ಪಾಲಿಸುವುದು ಸಾಧ್ಯವಾಗಿಲ್ಲ. ಅದರ ವಿತ್ತೀಯ ಕೊರತೆಯು 2018–19ನೆಯ ಸಾಲಿಗೆ ನಿಗದಿಪಡಿಸಿದ್ದ ಜಿಡಿಪಿಯ ಶೇ.3.3 ಕ್ಕೆ ಪ್ರತಿಯಾಗಿ ಅದು ಶೇ.3.4ಕ್ಕೇರಿದೆ. ಕರ್ನಾಟಕದ ಒಟ್ಟು ಸಾಲದ ಮೊತ್ತವು ವಿತ್ತೀಯ ಜವಾಬ್ದಾರಿ ಅಧಿನಿಯಮ ನಿಗದಿಪಡಿಸಿರುವ ಎಸ್‌ಡಿಪಿಯ ಶೇ.25ರ ಪ್ರಮಾಣಕ್ಕಿಂತ ಕಡಿಮೆಯಿದೆ.

ಬಜೆಟ್ಟು ಮೇಲುಮೇಲೆ ಸಮೃದ್ಧವಾಗಿರುವಂತೆ ಕಾಣುತ್ತದೆ. ಇದು ಅದರ ಒಂದು ಮುಖ ಮಾತ್ರ. ಬಜೆಟ್ ಎನ್ನುವುದು ಅನುದಾನವನ್ನು ಇಲ್ಲೊಂದಿಷ್ಟು, ಅಲ್ಲೊಂದಿಷ್ಟು ಹಂಚುವ ಕಾರ್ಯಯೋಜನೆಯಲ್ಲ. ಬಜೆಟ್ಟ ಎನ್ನುವುದು ಹನಿ ನೀರಾವರಿಯಂತೆ, ತುಂತುರು ನೀರಾವರಿಯಂತೆ ಹಣ ವಿತರಣೆಯ ಚಟುವಟಿಕೆಯಾಗಬಾರದು. ಅದೊಂದು ಬಂಡವಾಳ, ಹೂಡಿಕೆ, ಉತ್ಪಾದಕತೆ, ಕಾರ್ಯಕ್ಷಮತೆ, ಉಳಿತಾಯ, ಮಿತವ್ಯಯ ಮುಂತಾದ ಸಂಗತಿಗಳನ್ನು ಒಳಗೊಳ್ಳುವ ಒಂದು ಕಾರ್ಯಸಾಧನ. ಅದನ್ನು ಒಂದು 'ದತ್ತಿ–ದಾನ–ದಕ್ಷಿಣೆ' ದಸ್ತಾವೇಜನ್ನಾಗಿ ನೋಡಬಾರದು. ಕೇಂದ್ರವು ಚುನಾವಣಾ ಪ್ರಣೀತ ಬಜೆಟ್ ಮಂಡಿಸಿದ್ದರೆ ಕರ್ನಾಟಕವು 'ಜನಲೋಲುಪ' ಬಜೆಟ್ ಮಂಡಿಸಿರುವಂತೆ ಕಾಣುತ್ತದೆ. ಜನಲ 'ೋಲುಪತೆಯು(ಪಾಪ್ಯುಲಿಸವ್)ಕೆಟ್ಟದ್ದೇನಲ್ಲ. ಕೇರಳ ಮತ್ತು ತಮಿಳುನಾಡು ರಾಜ್ಯಗಳು ಲಾಗಾಯ್ತಿನಿಂದ ಜನಲೋಲುಪತೆ ಬಜೆಟ್‌ಗಳ ಮೂಲಕ ಮಾನವ ಅಭಿವೃದ್ಧಿಯಲ್ಲಿ ದೇಶದಲ್ಲಿ ಉನ್ನತಮಟ್ಟವನ್ನು ಸಾಧಿಸಿಕೊಂಡಿರುವ ನಿದರ್ಶನ ನಮ್ಮ ಮುಂದಿದೆ. ಆದರೆ ಬಜೆಟ್ಟಿನ ಕಾರ್ಯಕ್ಷಮತೆ, ಕಾರ್ಯನಿರ್ವಹಣೆ, ವೆಚ್ಚದ ಮೇಲುಸ್ತುವಾರಿ ಬಹಳ ಮುಖ್ಯ. ಕರ್ನಾಟಕದಲ್ಲಿ ಬಜೆಟ್ಟಿನಲ್ಲಿ ಘೋಷಿಸಲಾದ ಅನುದಾನ ಅನೇಕ ಸಂದರ್ಭಗಳಲ್ಲಿ ಪೂರ್ಣವಾಗಿ ವೆಚ್ಚವಾಗುತ್ತಿಲ್ಲ. ನಿದರ್ಶನವಾಗಿ ಸರ್ಕಾರ 2015–16 ರಿಂದ 2018–19ರ ಅವಧಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ(ಇದು ಸಂವಿಧಾನಾತ್ಮಕ ಸಂಸ್ಥೆ)ನೀಡಿದ ಅನುದಾನ ರೂ.4000 ಕೋಟಿ. ಇದರಲ್ಲಿ ವೆಚ್ಚವಾದುದು ಮಾತ್ರ ರೂ.2491 ಕೋಟಿ(ಶೇ.62.27). ಈ ಅವಧಿಯಲ್ಲಿ ಅನುಮೋದಿತ ಕಾಮಕಾರಿಗಳು 17541. ಆದರೆ ಪೂರ್ಣಗೊಂಡ ಕಾಮಗಾರಿಗಳು ಕೇವಲ 5520(ಶೇ.31.36). ಮೇಲಾಗಿ ಒಟ್ಟು ವೆಚ್ಚದಲ್ಲಿ ರಸ್ತೆ ಮತ್ತು ಸೇತುವೆಗಳಿಗೆ ವೆಚ್ಚ ಮಾಡಿದ ಪ್ರಮಾಣ ಶೇ.66.22(ವಿವರಗಳಿಗೆ ನೋಡಿ: ಕರ್ನಾಟಕ ಆರ್ಥಿಕ ಸಮೀಕ್ಷೆ, 2018–19, ಪು.714). ಕರ್ನಾಟಕದಲ್ಲಿ ಅಭಿವೃದ್ಧಿಯ ಸಮಸ್ಯೆ ಬಜೆಟ್ ಅನುದಾನವಲ್ಲ. ಅಭಿವೃದ್ಧಿ ಕಾರ್ಯಾನುಷ್ಠಾನ, ಅದರ ಮೇಲುಸ್ತುವಾರಿ ಮತ್ತು ಅದರಿಂದ ಉಂಟಾಗುವ ಫಲ. ಈ ಬಗ್ಗೆ ಬಜೆಟ್ಟಿನಲ್ಲಿ ಗಮನ ನೀಡಲಾಗಿಲ್ಲ. ಮೇಲೆ ನಾನು ನೀಡಿರುವುದು ಒಂದು ಉದಾಹರಣೆ ಮಾತ್ರ. ಇದು ಎಲ್ಲ ಕ್ಷೇತ್ರಗಳಲ್ಲಿಯೂ ವಿಜೃಂಭಿಸುತ್ತಿದೆ. ಬಜೆಟ್ಟೇನೋ ಸಮೃದ್ಧವಾಗಿದೆ. ಆದರೆ ಇಲ್ಲಿನ ಸಂದಿಗ್ಧತೆಯನ್ನು ಅರ್ಥ ಮಾಡಿಕೊಳ್ಳಬೇಕು. ಕರ್ನಾಟಕದ ಬಜೆಟ್ಟಿನ ಗಾತ್ರ ರೂ.234153 ಕೋಟಿ. ಇದರಲ್ಲಿ ಬಂಡವಾಳ ಖಾತೆಯಲ್ಲಿ ವೆಚ್ಚ ರೂ.42584 ಕೋಟಿ(ಶೇ.18.18). ಪ್ರತಿ ರೂಪಾಯಿ ವೆಚ್ಚದಿಂದ ವರ್ಷದ ಕೊನೆಗೆ ದೊರೆಯುವ ಪ್ರತಿಫಲವೇನು ಎಂಬುದು ಬಜೆಟ್ಟಿನ ಕಾರ್ಯಕ್ಷಮತೆಯ ಮಾಪನವಾಗಬೇಕು.

ನಮ್ಮ ರಾಜ್ಯವು ಎದುರಿಸುತ್ತಿರುವ ಒಂದು ದೊಡ್ಡ ಸಮಸ್ಯೆ ವಿಪರೀತ ಗತಿಯಲ್ಲಿ ನಡೆಯುತ್ತಿರುವ ನಗರೀಕರಣ. ಅದರಲ್ಲಿಯೂ ಬೆಂಗಳೂರಿನ ಅಘಾತಕಾರಿ ಬೆಳವಣಿಗೆ. ರಾಜ್ಯದ ಸುಮಾರು ಶೇ.16ರಷ್ಟು ಜನರು ಬೆಂಗಳೂರಿನಲ್ಲಿದ್ದಾರೆ. ರಾಜ್ಯದ ಎಲ್ಲ ನದಿಗಳ ನೀರು ಬೆಂಗಳೂರಿಗೆ ಬೇಕು. ನಾವು ಉತ್ಪಾದಿಸುವ ಒಟ್ಟು ವಿದುಚ್ಛಕ್ತಿಯಲ್ಲಿ ಬೆಂಗಳೂರು ನಗರ ಮತ್ತು ಗ್ರಾಮೀಣ ಜಿಲ್ಲೆಗಳು ಸಿಂಹಪಾಲನ್ನು(ಶೇ.31.26) ಅನುಭವಿಸುತ್ತಿದೆ. ಎಲ್ಲ ಶಿಕ್ಷಣ ಸಂಸ್ಥೆಗಳೂ ಬೆಂಗಳೂರಿನಲ್ಲಿರಬೇಕು. ಸರ್ಕಾರದ ಎಲ್ಲ ಇಲಾಖೆಗಳ ಕೇಂದ್ರ ಕಚೇರಿ, ನಿರ್ದೇಶನಾಲಯಗಳು, ಉಪಇಲಾಖೆಗಳು ಬೆಂಗಳೂರಿನಲ್ಲಿಯೇ ಇರಬೇಕು. ಇದನ್ನು ಎಷ್ಟು ಬೆಳೆಸುತ್ತೀರಿ? ಒಂದು ಪ್ರದೇಶಕ್ಕೆ 'ಧಾರಣಾ ಸಾಮರ್ಥ್ಯ' ಎನ್ನವುದಿರುತ್ತದೆ. ಬೆಂಗಳೂರಿನ ಧಾರಣಾ ಸಾಮರ್ಥ್ಯವು ಎಂದೋ ಮುಗಿದುಹೋಗಿದೆ. ಬಜೆಟ್ಟಿನಲ್ಲಿ ಮತ್ತೆ ಖಜಾನೆ ಹಣವನ್ನೆಲ್ಲ ಬೆಂಗಳೂರಿನ ಅಭಿವೃದ್ಧಿಗೆ ಸುರಿಯಲಾಗುತ್ತಿದೆ. ಬಜೆಟ್ಟಿನಲ್ಲಿ ವಿವಿಧ ಯೋಜನೆಗಳ ಬಾಬ್ತು

**ಪುಟ 10 ಕ್ಕೆ**

# ಫುಲ್ವಾಮಾದ ನಂತರ.....

**ರಾಜಕೀಯ ಸಂವಾದ ಮತ್ತು ಸಂವಿಧಾನದಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಮಾನ್ಯ ಮಾಡುವ ಮೂಲಕ ಮಾತ್ರವೇ ಶಾಂತಿ ಹಾಗೂ ಸಹಜ ಸ್ಥಿತಿಯತ್ತ ಸುದೀರ್ಘ ದಾರಿಯಲ್ಲಿ ಸಾಗಬಹುದಾಗಿದೆ. ಈ ಪ್ರಜಾಸತ್ತಾತ್ಮಕ ರಾಜಕೀಯ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳದೆ ಮೋದಿ ಸರಕಾರ ಕೇವಲ ಕುರುಡು ದೇಶಭಕ್ತಿಗೆ ಇಳಿಯುತ್ತಿದೆ ಮತ್ತು ಭಾವನೆಗಳನ್ನು ಪ್ರಚೋದಿಸುತ್ತದೆ ಎಂದೇ ಕಾಣಬರುತ್ತಿದೆ.**

**ಈ ನಡುವೆ, ಜಮ್ಮು ಮತ್ತು ಕಾಶ್ಮೀರದಲ್ಲಿರುವ ಹತ್ತಾರು ಸಾವಿರ ಸಶಸ್ತ್ರ ಪಡೆಗಳು ಮತ್ತು ಅರೆ-ಸೇನಾ ಪಡೆಗಳ ಯೋಧರು ಕಾಶ್ಮೀರಿ ಜನರ ವಿರುದ್ಧ ಸಂಘರ್ಷದಲ್ಲಿ ತೊಡಗಿ ಅದರಿಂದ ಸಾವು-ನೋವುಗಳಿಗೆ ಈಡಾಗುತ್ತಿದ್ದಾರೆ.**

**ಅತ್ತ ಕಣಿವೆಯಲ್ಲಿನ ಸಾಮಾನ್ಯ ಜನರು ಅನುಭವಿಸುತ್ತಿರುವ ಸಂಕಷ್ಟಗಳ ಬಗ್ಗೆಯಂತೂ ಹೇಳಲೇ ಬೇಕಾಗಿಲ್ಲ.**



*** ಪ್ರಕಾಶ್ ಕಾರಟ್**

ಫೆಬ್ರವರಿ 14 ರಂದು ಫುಲ್ವಾಮಾದಲ್ಲಿ ಭೀಕರ ದಾಳಿಯಲ್ಲಿ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) 40 ಯೋಧರ ಸಾವು ದೇಶದಾದ್ಯಂತ ಜನರಲ್ಲಿ ದುಃಖ ಮತ್ತು ಆಕ್ರೋಶವನ್ನು ಹುಟ್ಟುಹಾಕಿದೆ. ಹತಯೋಧರು 16 ರಾಜ್ಯಗಳಿಗೆ ಸೇರಿದವರಾಗಿದ್ದು ಅವರ ಅಂತ್ಯಸಂಸ್ಕಾರಗಳಲ್ಲಿ ಆಯಾಯ ಸ್ಥಳಗಳಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು.

ಈ ಇತ್ತೀಚಿನ ಅತ್ಯಾಚಾರಕ್ಕೆ ಜೈಷ್ ಎ-ಮೊಹಮದ್ (ಜೆಇಎಂ) ಸಂಘಟನೆ ಹೊಣೆಯಾಗಿರುವುದರಿಂದ ಜೆಇಎಂ ಮುಖ್ಯಸ್ಥ ಮಸೂದ್ ಅಜರ್ ಮತ್ತು ಇತರೆ ಜಿಹಾದಿ ಗುಂಪುಗಳಿಗೆ ಆಶ್ರಯ ನೀಡಿರುವುದರಲ್ಲಿ ಪಾಕಿಸ್ತಾನದ ಪಾತ್ರದ ಮೇಲೆ ಗಮನ ಕೇಂದ್ರೀಕೃತವಾಗಿದೆ. 2016ರಲ್ಲಿ ಪಠಾಣ್‌ಕೋಟ್ ಮತ್ತು ಉರಿಗಳಲ್ಲಿ ನಡೆದ ದಾಳಿಗಳಿಗೂ ಜೆಇಎಂ ಹೊಣೆಯಾಗಿತ್ತು. ಈ ವಿಚಾರದಲ್ಲಿ ತನ್ನ ತಪ್ಪನ್ನು ಒಪ್ಪಿಕೊಳ್ಳಲು ಪಾಕಿಸ್ತಾನ ಸಿದ್ಧವಾಗಿಲ್ಲ ಮತ್ತು ಇದಕ್ಕೆ ಸಾಕ್ಷಿ ಕೊಡುವಂತೆ ಅದು ಭಾರತವನ್ನೇ ಕೇಳುತ್ತಿದೆ. ಪಾಕಿಸ್ತಾನ ಸರಕಾರದ ಈ ರೀತಿಯ ತಪ್ಪಿಸಿಕೊಳ್ಳುವ ಧೋರಣೆ ಖಂಡನೀಯವಾಗಿದೆ.

ಇಂಥದ್ದೊಂದು ಸನ್ನಿವೇಶದಲ್ಲಿ ಮಸೂದ್ ಅಜರ್ ಮತ್ತು ಜೆಇಎಂ ವಿರುದ್ಧ ಕ್ರಮಗಳನ್ನು ಕೈಗೊಳ್ಳುವಂತೆ ರಾಜತಾಂತ್ರಿಕತೆ ಮೂಲಕ ಪಾಕಿಸ್ತಾನದ ಮೇಲೆ ಅಂತಾರಾಷ್ಟ್ರೀಯ ಒತ್ತಡ ಹೇರುವಂಥ ದೊಡ್ಡ ಜವಾಬ್ದಾರಿಯನ್ನು ಭಾರತ ಎದುರಿಸುತ್ತಿದೆ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ. ಈ ವಿಚಾರದಲ್ಲಿ ಗರಿಷ್ಠವಾದುದನ್ನು ಮಾಡಬಹುದಾದ ದೇಶ ಅಮೆರಿಕ. ಆದರೆ ಪಾಕಿಸ್ತಾನಿ ಸಶಸ್ತ್ರ ಪಡೆಗಳಿಗೆ ಹಣಕಾಸು ನೆರವು ಮತ್ತು ಶಸ್ತ್ರಾಸ್ತ್ರ ನೀಡಿರುವುದು ಹಾಗೂ ಅದರ ರಾಜಕೀಯ ಆಳ್ವಿಕೆಗೆ ಊರುಗೋಲಾಗಿರುವುದು ಅಮೆರಿಕವೇ. ಭಯೋತ್ಪಾದಕ ಗುಂಪುಗಳಿಗೆ ಆಶ್ರಯತಾಣಗಳನ್ನು ಒದಗಿಸುವುದನ್ನು ನಿಲ್ಲಿಸುವಂತೆ ಪಾಕಿಸ್ತಾನಕ್ಕೆ ಅಮೆರಿಕ ಈ ಬಾರಿ ಕೂಡ ಕರೆ ನೀಡಿರುವುದಾದರೂ ಈ ನಿಟ್ಟಿನಲ್ಲಿ ಅದು ಕ್ರಮಕೈಗೊಳ್ಳುವಂತೆ ಪಾಕಿಸ್ತಾನ ಸರಕಾರ ಮತ್ತು ಸೇನೆಯ ಮೇಲೆ ಒತ್ತಡ ಹೇರಲು ನಿರ್ದಿಷ್ಟವಾದುದೇನನ್ನೂ ಮಾಡಿಲ್ಲ.

ಅಫ್ಘಾನಿಸ್ತಾನದಿಂದ ಆದಷ್ಟು ಬೇಗ ತನ್ನ ಪಡೆಗಳನ್ನು ವಾಪಸ್ ಪಡೆಯಲು ಅನುಕೂಲವಾಗುವಂತೆ ತಾಲಿಬಾನ್ ಜೊತೆಗಿನ ಮಾತುಕತೆಗಳಲ್ಲಿ ಅಮೆರಿಕ ಅವಲಂಬಿಸಿರುವುದು ಪಾಕಿಸ್ತಾನವನ್ನು. ಇಂಥ ಸನ್ನಿವೇಶದಲ್ಲಿ, ಜಿಹಾದಿ ಗುಂಪುಗಳ ಮೇಲೆ ಪಾಕಿಸ್ತಾನಿ ಸರಕಾರ ಮತ್ತು ಸೇನೆ ಕಠಿಣ ಕ್ರಮಕೈಗೊಳ್ಳುವಂತೆ ಮಾಡುವ ವಿಚಾರದಲ್ಲಿ ಅಮೆರಿಕ ಮೃದು ಧೋರಣೆ ತಾಳದಂತೆ ಟ್ರಂಪ್ ಆಡಳಿತಕ್ಕೆ ಮೋದಿ ಸರಕಾರ ಸ್ಪಷ್ಟಪಡಿಸಬೇಕಿದೆ.

ಇದು ತುಂಬಾ ಮುಖ್ಯವಾಗುತ್ತದೆ. ಏಕೆಂದರೆ, ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಪರವಾದ ರಾಜಕೀಯ ಬದಲಾವಣೆಯೇನಾದರೂ ಆದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಗಡಿಯಾಚೆಯಿಂದ ಚಟುವಟಿಕೆಗಳನ್ನು ಹೆಚ್ಚಿಸಲು ಪಾಕಿಸ್ತಾನದಲ್ಲಿನ ಭಯೋತ್ಪಾದಕ ಗುಂಪುಗಳಿಗೆ ಉತ್ತೇಜನ ಸಿಕ್ಕಂತಾಗುತ್ತದೆ.

ಪಾಕಿಸ್ತಾನದ ನೆಲದಿಂದ ಭಯೋತ್ಪಾದನೆಗೆ ಇನ್ನೊಂದು ನೆರೆ ದೇಶ ಇರಾನ್ ಕೂಡ ಗುರಿಯಾಗಿರುವುದರಿಂದ ಪಾಕಿಸ್ತಾನಿ ನೆಲದಿಂದ ಭಯೋತ್ಪಾದನೆ ಹೊಮ್ಮುತ್ತಿರುವ ಅಪಾಯವನ್ನು ಜಗತ್ತಿಗೆ ತೋರಿಸಲು ಭಾರತೀಯ ಸರಕಾರ ಮಾಡುವ ಪ್ರಯತ್ನಗಳಿಗೆ ಹೆಚ್ಚು ಬಲ ಸಿಗಲಿದೆ. ಫುಲ್ವಾಮಾ ದಾಳಿಯ ಕೇವಲ ಒಂದು ದಿನದ ಮುಂಚೆ ಬಸ್ ಮೇಲೆ ನಡೆದ ಆತ್ಮಹತ್ಯಾ ಬಾಂಬ್ ದಾಳಿಯಲ್ಲಿ 27 ಇರಾನಿ ಸೈನಿಕರು ಮೃತಪಟ್ಟಿದ್ದರು. ಇದಕ್ಕೆ ಹೊಣೆಯಾದ ಜೈಷ್ ಅಲ್ ಅದಲ್ (ನ್ಯಾಯದ ಸೇನೆ)ಗೆ ಪಾಕಿಸ್ತಾನ ಸರಕಾರ ಮತ್ತು ಸೇನೆ ಬೆಂಬಲ ನೀಡುತ್ತಿವೆ ಎಂದು ಇರಾನ್ ಸೇನೆ ಆರೋಪಿಸಿತ್ತು. ಆದರೆ ಪಾಕಿಸ್ತಾನದ ನೆಲದಿಂದ ಹುಟ್ಟುವ ಭಯೋತ್ಪಾದನೆ ಚಟುವಟಿಕೆಗಳ ವಿರುದ್ಧದ ಹೋರಾಟದಲ್ಲಿ ಇರಾನ್‌ನೊಂದಿಗೆ ಕೈಜೋಡಿಸುವ ಭಾರತದ ಪ್ರಯತ್ನಗಳು ಇರಾನ್ ವಿರುದ್ಧದ ಅಮೆರಿಕದ ನಿರಂತರ ವೈರತ್ವದ ವಿರುದ್ಧ ದನಿಯೆತ್ತುವಲ್ಲಿ ಭಾರತದ ಅಸಮರ್ಥತೆಯಿಂದಾಗಿ ಅಡ್ಡಿ ಎದುರಿಸಲಿವೆ.

ಪಾಕಿಸ್ತಾನದ ಮೇಲೆ ಸೌದಿ ಅರೇಬಿಯಾ ಏನಾದರೂ ಪ್ರಭಾವ ಬೀರಬಹುದೇನೋ ಎಂಬ ಆಶಾವಾದ ಬೇಗನೆ ಹುಸಿಯಾಗಿದೆ. ಸೌದಿ ಅರೇಬಿಯಾದ ರಾಜಕುಮಾರ ಸಲ್ಮಾನ್ ಪಾಕಿಸ್ತಾನಕ್ಕೆ ಭೇಟಿ ನೀಡಿದ ವೇಳೆ ಹೊರಡಿಸಿದ ಸಂಯುಕ್ತ ಹೇಳಿಕೆ ನಿರಾಶಾದಾಯಕವಾಗಿತ್ತು. ವಿಶ್ವ ಸಂಸ್ಥೆಯ ಪಟ್ಟಿ ಮಾಡುವ ಕ್ರಮವನ್ನು ರಾಜಕೀಯಕರಣೊಳಿಸುವುದನ್ನು ನಿಲ್ಲಿಸುವುದು ಅಗತ್ಯ ಎಂಬುದಾಗಿ ಆ ಹೇಳಿಕೆ ತಿಳಿಸಿತ್ತು. ಮಸೂದ್ ಅಜರ್‌ನನ್ನು ಭಯೋತ್ಪಾದಕ ಪಟ್ಟಿಗೆ ಸೇರಿಸುವಂತೆ ಭಾರತವು ವಿಶ್ವ ಸಂಸ್ಥೆಯನ್ನು ಒತ್ತಾಯಿಸುತ್ತಿರುವುದಕ್ಕೆ ಸಂಬಂಧಪಟ್ಟಂತಹ ಹೇಳಿಕೆ ಅದಾಗಿತ್ತು. ಹೀಗಾಗಿ ಪಾಕಿಸ್ತಾನವನ್ನು ಓಲೈಸುತ್ತಿರುವ ಅಮೆರಿಕವೇ ಆಗಲಿ ಸೌದಿ ಅರೇಬಿಯಾವೇ ಆಗಲಿ ಜಿಹಾದಿ ಗುಂಪುಗಳ ವಿರುದ್ಧ ಕ್ರಮಕೈಗೊಳ್ಳುವಂತೆ ಪಾಕಿಸ್ತಾನದ ಮೇಲೆ ಒತ್ತಡ ಹೇರಬಹುದು ಎಂದು ನಿರೀಕ್ಷಿಸುವುದು ತಪ್ಪಾಗುತ್ತದೆ. ಪಾಕಿಸ್ತಾನದ ಜೊತೆ ನಿಕಟ ಬಾಂಧವ್ಯ ಹೊಂದಿರುವ ಇನ್ನೊಂದು ದೇಶವೆಂದರೆ ಚೀನಾ. ಕ್ಸಿನ್‌ಜಿಯಾಂಗ್ ಪ್ರಾಂತ್ಯದಲ್ಲಿನ ಜಿಹಾದಿ ಚಟುವಟಿಕೆಗಳ ಬಗ್ಗೆ ಅಪಾರ ಕಳವಳ ಹೊಂದಿದ್ದರೂ ಮತ್ತು ಕರಾಚಿಯಲ್ಲಿನ ತನ್ನ ಕಾನ್ಸುಲೇಟ್ ಕಚೇರಿ ಮೇಲೆ ನಡೆದ ದಾಳಿಯ ಹಿನ್ನೆಲೆಯಲ್ಲಿ ಪಾಕಿಸ್ತಾನದ ಒಳಗೆ ನಡೆಯುತ್ತಿರುವ ಭಯೋತ್ಪಾದನೆ ಚಟುವಟಿಕೆಗಳ ಬಗ್ಗೆಯೂ ಕಳವಳ ವ್ಯಕ್ತಪಡಿಸಿದರೂ ಚೀನಾವು ಈ ವಿಚಾರದಲ್ಲಿ ಒಂದು ನಿಲವು ತಾಳಲು ಇದಕ್ಕಿಂತ ಮುಂದೆ ಹೋಗುತ್ತಿಲ್ಲ.

ಭಾರತದೊಳಗೆ, ಭಯೋತ್ಪಾದಕ ಹಿಂಸಾಚಾರದ ವಿರುದ್ಧ ಜನಗಳು ಒಂದಾಗಿರುವಾಗ ಈ ಒಗ್ಗಟ್ಟನ್ನು ಮುರಿಯಲು ಮತ್ತು ಕಾಶ್ಮೀರಿಗಳ್ನು ಹಾಗೂ ಅವ್ಯಕ್ತ ರಾಷ್ಟ್ರ-ವಿರೋಧಿಗಳನ್ನು ಹುಡುಕಲು ಬಿಜೆಪಿ ಮತ್ತು ಹಿಂದುತ್ವ ಶಕ್ತಿಗಳು ಪ್ರಯತ್ನಿಸುತ್ತಿವೆ. ಭಜರಂಗದಳ ಮತ್ತಿತರ ಸಂಘಟನೆಗಳು ವಿವಿಧೆಡೆ ಕಾಶ್ಮೀರಿ ವಿದ್ಯಾರ್ಥಿಗಳು, ವರ್ತಕರು ಮತ್ತು ವ್ಯಾಪಾರಿಗಳ ಮೇಲೆ ನಡೆಸಿದ ದಾಳಿಗಳು, ಡೆಹ್ರಾಡೂನ್ ಮೊದಲಾದೆಡೆ ಕಾಶ್ಮೀರಿ ವಿದ್ಯಾರ್ಥಿಗಳನ್ನು ನಾಚಿಕೆಯಿಲ್ಲದೆ ಹೊರಗಟ್ಟಿದ್ದು ಇವೇ ಮೊದಲಾದವು ಕಾಶ್ಮೀರಿ ಮುಸ್ಲಿಮರನ್ನು ದೇಶದ್ರೋಹಿಗಳು ಮತ್ತು ಭಯೋತ್ಪಾದಕರ ಹಿತೈಷಿಗಳು ಎಂದು ಬಿಂಬಿಸುವ ಪ್ರಯತ್ನಗಳಾಗಿವೆ. ಇದರಿಂದಾಗಿ ಸಮಸ್ಯೆಯು ಬೇರಿರುವ ಕಾಶ್ಮೀರ ಕಣಿವೆಯ ಜನರನ್ನು ಇನ್ನಷ್ಟು ಅನ್ಯರಾಗಿಸಿದಂತಾಗುತ್ತದೆ.

ಸ್ವತಃ ಪ್ರಧಾನಿಯವರ ನೇತೃತ್ವದಲ್ಲಿ ಇಡೀ ಬಿಜೆಪಿ ನಾಯಕತ್ವ ಪಾಕಿಸ್ತಾನದ ವಿರುದ್ಧ ಪ್ರತೀಕಾರ ಮತ್ತು ಪ್ರತಿದಾಳಿ ನಡೆಸುವುದಕ್ಕೆ ಕರೆ ಕೊಡುವ ಭಾಷಣಗಳನ್ನು ಮಾಡುತ್ತಿದೆ. ಪರಿಸ್ಥಿತಿಯನ್ನು ಎದುರಿಸಲು ಎಲ್ಲರೂ ಒಗ್ಗಟ್ಟಾಗಬೇಕೆಂದು ಪ್ರಧಾನಿ ಕರೆ ನೀಡಿದ್ದಾರೆ; ಆದರೆ ಅಸ್ಸಾಂನಲ್ಲಿ ಮಾಡಿದ ಭಾಷಣವೊಂದರಲ್ಲಿ ಪಕ್ಷ ರಾಜಕಾರಣ ಮಾಡುವಲ್ಲಿ ಬಿಜೆಪಿ ಅಧ್ಯಕ್ಷ ಅಮಿತ್ ಷಾ ತಡ ಮಾಡಿಲ್ಲ. ಯೋಧರ ತ್ಯಾಗ ವ್ಯರ್ಥವಾಗುವುದಿಲ್ಲ. ಯಾಕೆಂದರೆ ಕೇಂದ್ರದಲ್ಲಿರುವುದು ಬಿಜೆಪಿ ಸರಕಾರವೇ ಹೊರತು ಕಾಂಗ್ರೆಸ್ ಸರಕಾರವಲ್ಲ ಎಂದು ಅವರು ಭಾಷಣದಲ್ಲಿ ಹೇಳಿದರು. ಕುರುಡು ದೇಶಭಕ್ತಿಯ ಪ್ರದರ್ಶನಕ್ಕೆ ಇಳಿದಿರುವುದು ಮತ್ತು ಪ್ರತೀಕಾರಕ್ಕೆ ಕರೆಗಳು ಬರುತ್ತಿರುವುದು ಒಂದು ರೀತಿಯ ಗಡಿಯಾಚೆ-ಈಚೆ ಮಿಲಿಟರಿ ಕಾರ್ಯಾಚರಣೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂಬುದನನು ಸೂಚಿಸುತ್ತಿದೆ. ಆದರೆ ಆಳುವ ಪಕ್ಷಕ್ಕೆ ಚುನಾವಣಾ ಗಳಿಕೆಗಳಿಗೆ ಇದೊಂದು ಉತ್ತೇಜನೆ ಬಿಟ್ಟು, ಮಿಲಿಟರಿ ಕಾರ್ಯಾಚರಣೆಯು ಗಡಿಯಾಚೆಯಿಂದ ಭಯೋತ್ಪಾದನೆಯನ್ನು ದಮನಿಸುವ ವ್ಯೂಹಾತ್ಮಕ ಉದ್ದೇಶವನ್ನು ಈಡೇರಿಸಿಕೊಳ್ಳಬಹುದೇ ಎನ್ನುವುದು ಅನುಮಾನಾಸ್ಪದವಾಗಿದೆ.

ಒಂದು ರೀತಿಯ ಮಿಲಿಟರಿ ಮಧ್ಯಪ್ರವೇಶ ಆಗಬೇಕೆಂಬ ಒತ್ತಾಯವನ್ನು ಸೂಕ್ತ ಎಚ್ಚರಿಕೆಯೊಂದಿಗೆ ಪರಿಶೀಲಿಸಬೇಕಾಗುತ್ತದೆ. 2016ರ 'ಮಿಂಚಿನ ಪ್ರಹಾರ'(ಸರ್ಜಿಕಲ್ ಸ್ಟ್ರೈಕ್) ಸೇರಿದಂತೆ ಗಡಿಯಲ್ಲಿ ಈ ಹಿಂದೆ ನಡೆಸಿದ ಕಾರ್ಯಾಚರಣೆಗಳು ಹೆಚ್ಚಿನ ಫಲ ನೀಡಿಲ್ಲ. ಹೆಚ್ಚು ಪ್ರಖರತೆಯಿಲ್ಲದ ಒಂದು 'ಸೀಮಿತ ಯುದ್ಧ' ನಡೆಸಬೇಕೆನ್ನುವ ಮಾತುಗಳು ಅತ್ಯಂತ ಬೇಜವಾಬ್ದಾರಿಯುತವಾದುದು. ಇಂಥ ಯಾವುದೇ ಕ್ರಮವು ಹೇಳಲಸಾಧ್ಯವಾದ ಪರಿಣಾಮಗಳಿಗೆ ನಾಂದಿಯಾಗಲಿದೆ.

2016 ಸೆಪ್ಟೆಂಬರ್‌ನ ಮಿಂಚಿನ ದಾಳಿಯ ನಂತರದಲ್ಲಿ ಕಾಶ್ಮೀರ ಕಣಿವೆಯಲ್ಲಿನ ಪರಿಸ್ಥಿತಿ ಹದಗೆಟ್ಟಿದೆ ಎನ್ನುವುದು ಕಟು ವಾಸ್ತವವಾಗಿದೆ. ಉಗ್ರಗಾಮಿಗಳ ದಾಳಿ 2014ರಲ್ಲಿ 222 ಇದ್ದದ್ದು 2018ರಲ್ಲಿ 614ಕ್ಕೆ ಏರಿದೆ. 2014ರಲ್ಲಿ 47 ಭದ್ರತಾ ಪಡೆಗಳ ಯೋಧರು ಸಾವನ್ನಪ್ಪಿದ್ದರು, ಅದು 2017ರಲ್ಲಿ 80 ಮತ್ತು 2018ರಲ್ಲಿ 91ಕ್ಕೆ ಏರಿದೆ.

ಇನ್ನೂ ಕಳವಳಕಾರಿ ಸಂಗತಿಯೆಂದರೆ 2000ನೇ ಇಸವಿಯ ನಂತರದಲ್ಲಿ ಇದೇ ಮೊದಲ ಬಾರಿಗೆ 2018ರಲ್ಲಿ ವಿದೇಶಿ ಉಗ್ರಗಾಮಿಗಳಿಗಿಂತ ಹೆಚ್ಚು ಸ್ಥಳೀಯ ಉಗ್ರಗಾಮಿಗಳು ಹತರಾಗಿದ್ದಾರೆ. ಈ ವರ್ಷ ಕೊಲ್ಲಲ್ಪಟ್ಟ 246 ಉಗ್ರರ ಪೈಕಿ 150 ಮಂದಿ ಸ್ಥಳೀಯರು ಹಾಗೂ 90 ಮಂದಿ ವಿದೇಶಿಯರು. ಇದು ಕಣಿವೆಯ ಜನರಲ್ಲಿ ಮಡುಗಟ್ಟಿರುವ ಆಳವಾದ ಪರಕೀಯ ಭಾವವನ್ನು ಹಾಗೂ ಯುವಜನರಿಗೆ ಉಗ್ರಗಾಮಿತ್ವದೆಡೆಗಿನ ಆಕರ್ಷಣೆಯನ್ನು ಸೂಚಿಸುತ್ತದೆ. ಸಮಸ್ಯೆಯ ಕೇಂದ್ರ ಅಡಗಿರುವುದು ಇಲ್ಲೇ ಹಾಗೂ ಫುಲ್ವಾಮಾದಲ್ಲಿ ಆಗಿರುವುದು ಅದರ ಕೆಡುಕಿನ ಅಭಿವ್ಯಕ್ತಿ.

ಆದ್ದರಿಂದ ಕಾಶ್ಮೀರ ಮತ್ತು ಸಮಸ್ಯೆಯ ರಾಜಕೀಯ ಪರಿಹಾರಕ್ಕೆ ಗಮನವನ್ನು ಕೇಂದ್ರೀಕರಿಸಬೇಕಿರುವುದು ಈಗಿನ ಅಗತ್ಯವಾಗಿದೆ. ಕಾಶ್ಮೀರಿ ಜನರ ಸಮಸ್ಯೆಗಳು ಮತ್ತು ಬೇಡಿಕೆಗಳಿಗೆ ಸ್ಪಂದಿಸುವ ರಾಜಕೀಯ ಪ್ರಕ್ರಿಯೆಯಿಲ್ಲದೆ ಸಮಸ್ಯೆಯನ್ನು ಸಶಸ್ತ್ರ ಪಡೆಗಳ ಬಲಪ್ರಯೋಗದಿಂದಷ್ಟೇ ಎದುರಿಸಲು ಮುಂದಾಗುವುದರಿಂದ ಪರಿಸ್ಥಿತಿ ಇನ್ನಷ್ಟು ಸಂಕೀರ್ಣಗೊಳ್ಳುತ್ತದೆ. ಉಗ್ರಗಾಮಿ ಹಿಂಸಾಚಾರ ಮತ್ತು ಅದಕ್ಕೆ ಪ್ರತಿಯಾಗಿ ಭದ್ರತಾ ಪಡೆಗಳ ಪ್ರತಿ ಕಾರ್ಯಾಚರಣೆಗಳ ವಿಷ ಚಕ್ರ ಅವ್ಯಾಹತವಾಗಿ ಮುಂದುವರಿಯುತ್ತದೆ.

ಕಾಶ್ಮೀರದಲ್ಲಿನ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸುವ ದಿಸೆಯಲ್ಲಿ ರಾಜಕೀಯ ಪ್ರಕ್ರಿಯೆ ಆರಂಭಿಸುವಲ್ಲಿ ನರೇಂದ್ರ ಮೋದಿ ಸರಕಾರ ತೀವ್ರ ವಿಫಲಗೊಂಡಿದೆ. ರಾಜ್ಯದಲ್ಲಿ ಪಿಡಿಪಿಯೊಂದಿಗೆ ಸಮ್ಮಿಶ್ರ ಸರಕಾರದಲ್ಲಿ ಬಿಜೆಪಿ ಕೂಡ ಭಾಗಿದಾರ ಪಕ್ಷವಾಗಿದ್ದರಿಂದ ರಾಜಕೀಯ ಪ್ರಕ್ರಿಯೆ ಆರಂಭಿಸಲು ಅದಕ್ಕೆ ಉತ್ತಮ ಅವಕಾಶ ಇತ್ತು. ಆ ಅವಕಾಶವನ್ನು ವ್ಯರ್ಥಗೊಳಿಸಿದ್ದು ಮಾತ್ರವಲ್ಲದೆ ಅದನ್ನು ಜಮ್ಮು ಮತ್ತು ಕಾಶ್ಮೀರ ನಡುವಿನ ವಿಭಜನೆಯನ್ನು ಇನ್ನಷ್ಟು ಕೋಮುವಾದಗ್ರಸ್ತಗೊಳಿಸಲು ಮತ್ತು ನಾಗರಿಕ ಪ್ರತಿಭಟನೆಕಾರರ ಮೇಲೆ ದಬ್ಬಾಳಿಕೆ ಹರಿಬಿಡಲು ಬಳಸಿಕೊಂಡರು.

ರಾಜಕೀಯ ಸಂವಾದ ಮತ್ತು ಸಂವಿಧಾನದಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಮಾನ್ಯ ಮಾಡುವ ಮೂಲಕ ಮಾತ್ರವೇ ಶಾಂತಿ ಹಾಗೂ ಸಹಜ ಸ್ಥಿತಿಯತ್ತ ಸುದೀರ್ಘ ದಾರಿಯಲ್ಲಿ ಸಾಗಬಹುದಾಗಿದೆ.

ಈ ಪ್ರಜಾಸತ್ತಾತ್ಮಕ ರಾಜಕೀಯ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳದೆ ಮೋದಿ ಸರಕಾರ ಕೇವಲ ಕುರುಡು ದೇಶಭಕ್ತಿಗೆ ಇಳಿಯುತ್ತಿದೆ ಮತ್ತು ಭಾವನೆಗಳನ್ನು ಪ್ರಚೋದಿಸುತ್ತದೆ ಎಂದೇ ಕಾಣಬರುತ್ತಿದೆ. ಈ ನಡುವೆ, ಜಮ್ಮು ಮತ್ತು ಕಾಶ್ಮೀರದಲ್ಲಿರುವ ಹತ್ತಾರು ಸಾವಿರ ಸಶಸ್ತ್ರ ಪಡೆಗಳು ಮತ್ತು ಅರೆ-ಸೇನಾ ಪಡೆಗಳ ಯೋಧರು ಕಾಶ್ಮೀರಿ ಜನರ ವಿರುದ್ಧ ಸಂಘರ್ಷದಲ್ಲಿ ತೊಡಗಿ ಅದರಿಂದ ಸಾವು-ನೋವುಗಳಿಗೆ ಈಡಾಗುತ್ತಿದ್ದಾರೆ. ಅತ್ತ ಕಣಿವೆಯಲ್ಲಿನ ಸಾಮಾನ್ಯ ಜನರು ಅನುಭವಿಸುತ್ತಿರುವ ಸಂಕಷ್ಟಗಳ ಬಗ್ಗೆಯಂತೂ ಹೇಳಲೇ ಬೇಕಾಗಿಲ್ಲ

**ಅನು: ವಿಶ್ವ**




ವ್ಯಂಗ್ಯಚಿತ್ರ: ಸಂದೀಪ್ ಅದ್ವರ್ಯು, ಟೈಂಸ್ ಆಫ್ ಇಂಡಿಯ




ವ್ಯಂಗ್ಯಚಿತ್ರ: ಸುಹೇಲ್ ನಕ್ಶ್‌ಬಂದಿ



**ಕೊಟ್ಟ ವಚನಕ್ಕೆ ಬದ್ಧವಾಗದೆ ವಚನ ಭ್ರಷ್ಟವಾದ ಮಹಾರಾಷ್ಟ್ರದ ಬಿಜೆಪಿ ಸರ್ಕಾರಕ್ಕೆ ಸವಾಲು ಹಾಕಿ ನಡೆದ ರೈತರ ಮತ್ತು ಆದಿವಾಸಿಗಳ 2ನೇ ಲಾಂಗ್ ಮಾರ್ಚ್ ಮತ್ತೋಮ್ಮೆ ಚಾರಿತ್ರಿಕ ದಾಖಲೆಯನ್ನ ಸೃಷ್ಠಿಸಿತ್ತು. ಜನತೆಯ ಭಾಗವಹಿಸುವಿಕೆ ದೊರೆತ ಬಾರಿ ಜನ ಬೆಂಬಲದಿಂದಾಗಿ ಸರ್ಕಾರ ಕೂಡಲೇ ಮಾತುಕತೆಗೆ ಧಾವಿಸಬೇಕಾಗಿ ಬಂದದ್ದು ಬೇಡಿಕೆಗಳನ್ನ ಈಡೇರಿಸಲು ಲಿಖಿತ ಒಪ್ಪಂದ ಮಾಡಿಕೊಂಡಿದ್ದು ಯಶಸ್ಸಿನ ಹೆಗ್ಗುರುತು.**

## ಮಹಾರಾಷ್ಟ್ರ:

# ವಚನ ಭ್ರಷ್ಟತೆಯ ವಿರುದ್ಧ ಲಾಂಗ್ ಮಾರ್ಚ್

ರೈತರು ಮತ್ತು ಆದಿವಾಸಿಗಳಿಗೆ ಕೊಟ್ಟ ಭರವಸೆಗಳನ್ನು ವರುಷವಾದರೂ ಈಡೇರಿಸಲಿಲ್ಲ. ಅವರೇ ಬರೆದು ಕೊಟ್ಟ ಭರವಸೆಗಳನ್ನು ಆಗಾಗ ನೆನಪಿಸಿದರೂ ನಿರ್ಲಕ್ಷ್ಯ ತೋರಿದರು. ರಾಜ್ಯದಾದ್ಯಂತ ಬರಗಾಲದ ಬಿಸಿ ಏರುತ್ತಿದೆ. ಜೀವನ ನಿರ್ವಹಣೆ ಕಷ್ಟವಾಗುತ್ತಿದೆ. ಸರಕಾರದ ವಚನ ಭ್ರಷ್ಟತೆಯ ವಿರುದ್ಧ ಮತ್ತೇ ಮಹಾರಾಷ್ಟ್ರದ ರೈತರು, ಆದಿವಾಸಿಗಳು ಸಂಘರ್ಷದ ಮಹಾಯಾತ್ರೆಗೆ ಸನ್ನದ್ಧರಾದರು. ಈ ಬಾರಿ ಹಿಂದಿನದಿಕ್ಕಿಂತಲೂ ಗುಣದಲ್ಲೂ, ಪ್ರಮಾಣದಲ್ಲೂ ದೊಡ್ಡದಿರಬೇಕು, ಶಕ್ತಯುತವಾಗಿರಬೇಕು. ತಮ್ಮ ಕೇಳಿಕೆಗಳನ್ನು, ಸಂಕಟಗಳಿಗೆ ಪರಿಹಾರವನ್ನು ಕೊಡುವವರೆಗಲ್ಲೇನೇ ಆದರೂ ಮುಂಬೈಯಿಂದ ಕದಲಬಾರದು ಎಂಬುದು ಸಂಕಲ್ಪ.

ತಮ್ಮ ಬೇಡಿಕೆಗಳಿಗಾಗಿ 2018 ಮಾರ್ಚ್ 6 ರಿಂದ 12 ರವರೆಗೆ ನಾಸಿಕ್‌ನಿಂದ ಮುಂಬೈನತ್ತ ರೈತರ ಲಾಂಗ್ ಮಾರ್ಚ್ ನಡೆದಿತ್ತು. ಇದು ಮುಂಬೈನ, ಮಹಾರಾಷ್ಟ್ರದ ಹಾಗೂ ಇಡೀ ದೇಶದ ಗಮನವನ್ನು ಸೆಳೆದಿತ್ತು. ಅಲ್ಲಿನ ನಾಗರೀಕರು ಸ್ವಯಂ ಪ್ರೇರಿತರಾಗಿ ನಡೆದು ಬಂದವರನ್ನೆಲ್ಲಾ ಸ್ವಾಗತಿಸಿ ವಿವಿಧ ರೀತಿಯಲ್ಲಿ ಸಹಾಯ ಹಸ್ತ ಚಾಚಿ ಸೌಹಾರ್ಧತೆಯನ್ನು ಸಾರಿದ್ದರು. ಆರಂಭದಲ್ಲಿ ನಿರ್ಲಕ್ಷದಿಂದ ಇದ್ದ ಸರಕಾರ ಸಾಗರದ ಅಲೆಯೋಪಾಧಿಯ ಪ್ರತಿಕ್ರಿಯೆಯನ್ನು ಕಂಡ ಬಿಜೆಪಿ ನೇತೃತ್ವದ ಫಡ್ನಾವೀಸ್ ಸರಕಾರ ಮಾತುಕತೆಗೆ ಮುಂದಾಗಿ ಬೇಡಿಕೆಗಳನ್ನು ಈಡೇರಿಸುವ ಲಿಖಿತ ಭರವಸೆಯನ್ನು ನೀಡಿತು. ಆದರೆ ಎಷ್ಟು ನೆನಪಿಸಿದರೂ ಅವನ್ನು ಮರೆತು ಬಿಟ್ಟಿತು! ಜಾರಿಯ ಬಗ್ಗೆ ನಿಯತಕಾಲಿಕವಾಗಿ ವಿಮರ್ಶೆ ನಡೆಸಬೇಕು ಎಂಬ ನಿರ್ಧಾರವನ್ನು ಜಾರಿ ಮಾಡಲಿಲ್ಲ! ಇಂತಹ ಜನದ್ರೋಹ ಮತ್ತು ವಚನ ಭ್ರಷ್ಟತೆಯ ವಿರುದ್ಧ ಮತ್ತೊಂದು ಸುತ್ತಿನ ಮಹಾ ಸಮರಕ್ಕೆ ರೈತ–ಆದಿವಾಸಿಗಳು ಸನ್ನದ್ಧರಾದರು.

ಈ ಬಾರಿಯೂ ಮಹಾ ಯಾತ್ರೆ ನಾಸಿಕ್ ನಿಂದ ಮುಂಬೈನತ್ತಲೇ. ಕಳೆದ ಬಾರಿ 25,000 ಜನರಿದ್ದರೆ ಈ ಬಾರಿ 50,000. ಅದಕ್ಕಾಗಿ ನಡೆದ ತಯಾರಿಯೂ ವಿಸ್ತೃತ, ವಿಶೇಷ. ಸಭೆ, ಸಮಾವೇಶಗಳಲ್ಲಿ ಕಂಡು ಬಂದದ್ದು ಕುಗ್ಗದ ಉತ್ಸಾಹ, ರಣೋತ್ಸಾಹ. ಸರಕಾರಕ್ಕೆ ಎಚ್ಚರಿಸಿದರೂ ಜುಮ್ ಎನ್ನಲಿಲ್ಲ! ಬದಲಾಗಿ ಅಡೆ ತಡೆಗಳನ್ನು ಒಡ್ಡಿತು!

ಅಂದು ಫೆಬ್ರವರಿ 13. ಅಹಮದ್‌ನಗರದಲ್ಲಿ ರೈತರ ಬೃಹತ್ ಸಮಾವೇಶ. ವಿವಿಧ ಪ್ರದೇಶಗಳಿಂದ ಜನ ಜಮಾಯಿಸುತ್ತಿದ್ದಾರೆ. ಅದು ಶಾಂತಿಯುತ ಸಮಾವೇಶ. ಅಗತ್ಯವಿರುವ ಪೋಲೀಸ್ ಪರವಾನಗಿಯನ್ನೂ ಅಖಿಲ ಭಾರತ ಕಿಸಾನ್ ಸಭಾ ತೆಗೆದುಕೊಂಡಿದೆ. ಆದರೆ ? ಪೋಲಿಸರ ಕಿರಿ ಕಿರಿ ನಿಲ್ಲಲಿಲ್ಲ. ಕಳೆದ ದಿನಗಳಿಂದ ಕಿಸಾನ್ ಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಅಜಿತ್ ನವಲೆ ಯವರ ಮೇಲೆ ಕೇಸ್ ದಾಖಲಿಸಿದರು. ಬಂಧಿಸುವ ಪ್ರಯತ್ನವೂ ನಡೆಯಿತು. ಈ ಲಾಂಗ್ ಮಾರ್ಚ್‌ನಲ್ಲಿ ಭಾಗವಹಿಸ ಕೂಡದು ಎಂದು ಅನೇಕ ಕಡೆಗಳಲ್ಲಿ ಸ್ಥಳೀಯ ಕಾರ್ಯಕರ್ತರನ್ನು ಬೆದರಿಸುವ ಪ್ರಯತ್ನಗಳೂ ನಡೆದವು. ರೈತರು ಬರುವುದನ್ನು ತಡೆಯುವ ಪ್ರಯತ್ನವೂ ನಡೆಯಿತು. ವಾಹನಗಳೀಗೆ ಅಡ್ಡಗಟ್ಟಲಾಯಿತು. ಆದರೆ ಥಾಣೆ–ಪಾಲ್‌ಘಾರ್ ಜಿಲ್ಲೆಗಳಿಂದ ರೈತರ ತಂಡಗಳು ದಂಡೋಪಾದಿಯಲ್ಲಿ ಬಂದರುಟ್ಟಿದರ ಹಿಂದೆ ಯಾರಿದ್ದರು ಎಂಬುದು. . ಗೊತ್ತಲ್ಲ?! ಹೀಗೆ ರಾಜ್ಯದ ಪ್ರಮುಖ ಜಿಲ್ಲೆಗಳಿಂದ ಹರಿದು ಬಂದ ಜನ ಸಾಗರ ಮುಂಬೈ ತಲುಪುವಾಗ ಹಿಂದಿನ ವರುಷದ ಎರಡರಷ್ಟು ಅಂದರೆ 50,000 ದಾಟಿಯಾಗಿತ್ತು.

**ಈ ಬಾರಿಯ ಮಾರ್ಚ್‌ನ ಉದ್ದೇಶಗಳು ಪ್ರಧಾನವಾಗಿ ಮೂರು:**

ಬಿಜೆಪಿ ನೇತೃತ್ವದ ರಾಜ್ಯ ಮತ್ತು ಕೇಂದ್ರ ಸರಕಾರಗಳ ವಚನ ಭ್ರಷ್ಟತೆಯನ್ನು ಪ್ರತಿಭಟಿಸುವುದು. ಆ ದ್ರೋಹವು ಕಾರ್ಷಿಕ ಬಿಕ್ಕಟ್ಟನ್ನು ಮತ್ತಷ್ಟೂ ತೀವ್ರಗೊಳಿಸಿದೆ. ಈ ಹಿನ್ನೆಲೆಯಲ್ಲಿ ಈ ಮಹಾ ಯಾತ್ರೆ ಹೊರಟಿತ್ತು.

ಸರಕಾರ ಕೊಟ್ಟ ಮಾತನ್ನು ಉಳಿಸಿಕೊಳ್ಳಲಿಲ್ಲ. ಬೇಡಿಕೆಗಳ ಈಡೇರಿಕೆ ಅಷ್ಟಕಷ್ಟೇ. ಅರಣ್ಯ ಹಕ್ಕುಗಳ ಕಾಯ್ದೆ ಜಾರಿಯಾಗಲಿಲ್ಲ. ಪ್ಯಾಕೇಜ್ ಹೇಳಿದ್ದು 34,000 ಕೋಟಿಯಾದರೂ, ನೀಡಿದ್ದು 17,700 ಕೋಟಿ. ಸಾಲ ಮನ್ನಾವೂ ಆಗಲಿಲ್ಲ. ಬೆಂಬಲಿತ ಬೆಲೆ, ಪೆನ್‌ಷನ್ ಹೆಚ್ಚಳದ ಬೇಡಿಕೆಯೂ ಈಡೇರಲಿಲ್ಲ.

ಎರಡನೆಯದಾಗಿ ಬರದ ತೀವ್ರ ಹೆಚ್ಚಳ. ಕುಡಿಯುವ ನೀರು, ಮೇವು, ಆಹಾರ ಧಾನ್ಯಗಳ ಕೊರತೆ, ಕೆಲಸವಿಲ್ಲದಿರುವುದು ಹೀಗೆ ಹಲವು ಹತ್ತು ಸಮಸ್ಯೆಗಳು. ಬರ ಪರಿಹಾರದ ಯಾವ ಕಾರ್ಯಕ್ರಮಗಳೂ ಪರಿಣಾಮಕಾರಿಯಾಗಿಲ್ಲ.ನದಿಗಳ ನೀರಿನ ಬಳಕೆಯ ಯೋಜನೆಗಳ ಜಾರಿಗೆ ಇಚ್ಛಾ ಶಕ್ತಿಯೂ ಇಲ್ಲ.

ಮೂರನೆಯದು 2014 ರಲ್ಲಿ ಮೋದಿಯವರು ಅವರ 400 ಚುನಾವಣಾ ಬಹಿರಂಗ ಸಭೆಗಳಲ್ಲಿ ಕೃಷಿ ಕೂಲಿಕಾರರು, ರೈತರು ಇತರೆ ದುಡಿಯುವ ಜನ ಸಮುದಾಯಗಳಿಗೆ ಭಾರೀ ಭರವಸೆಗಳನ್ನು ನೀಡಿದ್ದರು. ಆ ಬಳಿಕ ನಾ ಪತ್ತೆ. ಡಾ.ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಜಾರಿಯ ಭರವಸೆ ಮರೆತೇ ಬಿಟ್ಟಿದ್ದಾರಲ್ಲ. ಸಾಲ ಮನ್ನಾ ಹೇಳಿದು ಭಾರಿ. ಆದರೆ ನೀಡಿದ ರೂ.6000 ಎಲ್ಲಿಗಾದೀತು. ಅದೂ 5 ಎಕ್ರೆ ಭೂಮಿ ಒಳಗಿದ್ದರೆ. ಅಂದರೆ ದಿನಕ್ಕೆ ರೂ.3.33 ರಂತೆ! ಇದೆಲ್ಲಾ ಗಾಯದ ಮೇಲೆ ಮತ್ತೇ ಬರೆ ಎಳೆದು ಉಪ್ಪು ಸವರಿದಂತೆ. ಹೀಗೆ ಭೂಮಿ ಪ್ರಶ್ನೆಗಳು, ಅರಣ್ಯ ಹಕ್ಕು ಕಾಯ್ದೆ ಜಾರಿಯಲ್ಲಿ ವಿಫಲತೆ, ಮತ್ತೊಂದೆಡೆ ಕಾರ್ಪೋರೇಟ್ ಕಂಪನಿಗಳಿಗಾಗಿ ಮನ ಬಂದಂತೆ ಭೂ ಸ್ವಾಧೀನ, ಮನ್‌ರೇಗಾ ಜಾರಿ ಮುಂತಾದ ಪ್ರಶ್ನೆಗಳು ಬೇಡಿಕೆಗಳಾಗಿದ್ದವು.

ಈ ಬೃಹತ್ ಪಾದಯಾತ್ರೆ ಫೆಬ್ರವರಿ 20 ರಂದು ನಾಸಿಕ್ ನಿಂದ ಹೊರಟಿತು. ಅದು ಖ್ಯಾತ ಚಿಂತಕ, ಹೋರಾಟಗಾರ ಹಂತಕರ ಗುಂಡಿಗೆ ಬಲಿಯಾದ ಕಾಮ್ರೇಡ್ ಗೋವಿಂದ ಪನ್ಸಾರೆ ಯವರು ಹುತಾತ್ಮರಾದ ದಿನ. ಲಾಂಗ್ ಮಾರ್ಚ್ ಮುಂಬೈ ತಲುಪಲು ಉದ್ದೇಶಿದ್ದ ದಿನ ಮಾರ್ಚ್ 27 ಕ್ರಾಂತಿಕಾರಿ ಚಂದ್ರಶೇಖರ್ ಅಜಾದ್ ಹುತಾತ್ಮರಾದ ದಿನ. ಮೊದಲ ದಿನ ಲಾಂಗ್ ಮಾರ್ಚ್‌ನ ನೇತೃತ್ವವನ್ನು ಎ.ಐ.ಕೆ.ಎಸ್. ಪ್ರಧಾನ ಕಾರ್ಯದರ್ಶಿ ಹನನ್ ಮುಲ್ಲಾ ವಹಿಸಿದ್ದರು. ಎರಡನೆಯ ದಿನ ಆರಂಭಗೊಂಡಾಗ ಸರಕಾರದಿಂದ ಏನೂ ಪ್ರತಿಕ್ರಿಯೆ ಇರಲಿಲ್ಲ.

**ಆದರೆ. . .?!**

ಈ ಎರಡನೆಯ ಮಹಾಯಾತ್ರೆಯಲ್ಲಿ ಹರಿದು ಬಂದ ಜನಸಾಗರ, ಎಲ್ಲೆಡೆ ದೊರೆತ ಭಾರೀ ಪ್ರತಿಕ್ರಿಯೆ, ಉಂಟಾಗುತ್ತಿದ್ದ ಒತ್ತಡ ಇವನ್ನೆಲ್ಲಾ ಗಮನಿಸಿದ ಸರಕಾರ ಇನ್ನೂ ತಡ ಮಾಡಿದರೆ ತನಗೆ ತಿರುಗು ಬಾಣವಾಗಲಿದೆ, ತೀವ್ರ ಮುಖ ಭಂಗವನ್ನೂ ಅನುಭವಿಸಿಬೇಕಾಗಿವುದೆಂದು ನಾಯಕತ್ವವನ್ನು ಮಾತುಕತೆಗೆ ಕರೆಯಿತು. ಮುಖ್ಯಮಂತ್ರಿಗಳ ಪರವಾಗಿ ಸಚಿವ ಗಿರೀಶ್ ಮಹಾಜನ್ ರನ್ನು ಮಾತುಕತೆಗೆ ಕಳಿಸಿತು. ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದಾಗಿ ಹೇಳಿದ್ದಲ್ಲದೇ ನಿರ್ದಿಷ್ಟವಾಗಿ ಲಿಖಿತವಾಗಿ ನೀಡಿತು. ಇದು ನಿಜಕ್ಕೂ ದೊಡ್ಡ ವಿಜಯ. •





# 370ನೇ ವಿಧಿ ರದ್ದಾಗಬಾರದೇಕೆ?

ನಿತ್ಯಾನಂದಸ್ವಾಮಿ

**ಕಾಶ್ಮೀರವನ್ನು ಭಾರತದ ಒಂದು ಅಂಗವಾಗಿ ಉಳಿಸಿಕೊಳ್ಳಲು ಸಾಧ್ಯವಾಗಬೇಕಾದರೆ ರಾಜ್ಯಕ್ಕೆ ಸಂವಿಧಾನದ ಚೌಕಟ್ಟಿನೊಳಗೆ ಗರಿಷ್ಠ ಸ್ವಾಯತ್ತತೆ ನೀಡಬೇಕು. ಹಾಗೆಯೇ ರಾಜ್ಯದೊಳಗಿನ ಮೂರು ಪ್ರತ್ಯೇಕ ಪ್ರದೇಶಗಳಿಗೂ ಪ್ರಾದೇಶಿಕ ಸ್ವಾಯತ್ತತೆ ನೀಡಬೇಕು. ಇದರಿಂದ ಮಾತ್ರ ಜಮ್ಮು ಕಾಶ್ಮೀರ ಜನತೆಯ ವಿಶ್ವಾಸವನ್ನು ಮರಳಿ ಗಳಿಸಲು ಸಾಧ್ಯ. ಆದರೆ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರ, ತನ್ನ ಹಿಂದುತ್ವ ಸಿದ್ಧಾಂತಕ್ಕೆ ಅನುಗುಣವಾಗಿ ಸಂವಿಧಾನದ 370 ನೇ ವಿಧಿಯನ್ನೇ ರದ್ದು ಮಾಡಬೇಕೆಂದು ಪ್ರತಿಪಾದಿಸುತ್ತದೆ.**

ಜಮ್ಮು ಕಾಶ್ಮೀರದ ಪುಲ್ವಾಮಾದಲ್ಲಿ ಭಯೋತ್ಪಾದಕನೊಬ್ಬ ನಡೆಸಿದ ಆತ್ಮಹತ್ಯಾ ದಾಳಿ ಭಾರತದ 40 ಕ್ಕೂ ಹೆಚ್ಚು ಸಿಆರ್‌ಪಿಎಫ್ ಯೋಧರನ್ನು ಬಲಿತೆಗೆದುಕೊಂಡ ಬರ್ಬರ ಕೃತ್ಯವನ್ನು ಎಲ್ಲಾ – ದೇಶಬಾಂಧವರು ಒಂದಾಗಿ ಖಂಡಿಸಿದ್ದಾರೆ. ಹಿಂದುಗಳು ಮಾತ್ರವಲ್ಲ ಮುಸಲ್ಮಾನರು, ಕ್ರೈಸ್ತರು ಸಹ ಈ ಹೇಯ ಕೃತ್ಯವನ್ನು ಖಂಡಿಸುವುದರಲ್ಲಿ ಹಿಂದೆ ಬೀಳಲಿಲ್ಲ. ಬಲಪಂಥೀಯರು, ಎಡಪಂಥೀಯರು, ಎಲ್ಲರೂ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ಪಾಕಿಸ್ತಾನ ಹಿಂದೆಂದಿಗಿಂತಲೂ ಈ ಸಲ ಹೆಚ್ಚು ಖಂಡನೆಗೆ ಒಳಗಾಗಿದೆ. ಪಾಕಿಸ್ತಾನಕ್ಕೆ ನೀಡಲಾದ ಪರಮಾಪ್ತ ಸ್ಥಾನಮಾನವನ್ನು ಭಾರತ ಹಿಂದಕ್ಕೆ ಪಡೆದಿದೆ. ಪಾಕಿಸ್ತಾನದಿಂದ ಆಮದು ಆಗುತ್ತಿರುವ ಎಲ್ಲಾ ವಸ್ತುಗಳ ಮೇಲಿನ ಸೀಮಾ ಸುಂಕವನ್ನು 200 % ರಷ್ಟು ಏರಿಸಲಾಗಿದೆ. ಇದರಿಂದಾಗಿ ಪಾಕಿಸ್ತಾನದಿಂದ ಭಾರತಕ್ಕೆ ಆಗುತ್ತಿದ್ದ ವಾರ್ಷಿಕ ಸುಮಾರು 3500 ಕೋಟಿ ರೂ. ಮೌಲ್ಯದ ಆಮದು ನಿಂತು ಹೋಗಲಿದೆ.

ಆದರೆ ಪ್ರತಿಕಾರದ ಕೂಗು ನಿಂತಿಲ್ಲ. ಇನ್ನೂ ಹೆಚ್ಚು ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಲಾಗುತ್ತಿದೆ. 'ಜನರ ರಕ್ತ ಕುದಿಯುತ್ತಿದೆ' ಎಂದು ಸ್ವತಃ ಪ್ರಧಾನಿ ಮೋದಿ ಬಹಿರಂಗ ಹೇಳಿಕೆ ನೀಡಿದ್ದು ಉರಿಯುತ್ತಿರುವ ಬೆಂಕಿಗೆ ತುಪ್ಪ ಸುರಿದಂತಾಗಿದೆ. ಜನರ ಭಾವನೆಗಳನ್ನು ಕೆರಳಿಸಿ ಅದರ ರಾಜಕೀಯ ಲಾಭ ಪಡೆಯುವ ಪ್ರಯತ್ನ ನಡೆಯುತ್ತಿದೆ. ಸರ್ಜಿಕಲ್ ಸ್ಟ್ರೈಕ್‌ಗಿಂತ ತೀವ್ರವಾದ ಕ್ರಮ ಕೈಗೊಂಡು ಪಾಕಿಸ್ತಾನ ವಿರುದ್ಧ ಸೇಡು ತೀರಿಸಿಕೊಳ್ಳಬೇಕೆಂಬ ಯುದ್ಧೋನ್ಮಾದದ ಮಾತು ಪ್ರತಿಧ್ವನಿಸುತ್ತಿದೆ. ಯುದ್ಧವೆಂದರೆ ಕ್ರಿಕೆಟ್ ಟೂರ್ನಮೆಂಟ್ ಎಂದು ಭಾವಿಸಿದ್ದಾರೆ ಈ ಅತಿರೇಖವಾದಿಗಳು. ಯುದ್ಧದಿಂದ ನಮ್ಮ ವೀರ ಯೋಧರ ಮಡದಿಯರು ವಿಧವೆಯರಾಗುವುದನ್ನು ಬಯಸುತ್ತಾರೆ ಈ ಕ್ರೂರ ಮನಸ್ಸಿನವರು. ಅಮಾಯಕರ ರಕ್ತ ಹರಿಸಲು ಪ್ರಚೋದಿತರಾಗುತ್ತಿದ್ದಾರೆ ಇವರು.

ದೇಶದ ವಿವಿಧ ವಿಶ್ವ ವಿದ್ಯಾಲಯಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ಜಮ್ಮು ಕಾಶ್ಮೀರದಿಂದ ಬಂದು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಹುಡುಕಿ ಹುಡುಕಿ ಅವರ ಮೇಲೆ ಹಲ್ಲೆ ಮಾಡಲಾಗುತ್ತಿದೆ. ಭಾರತದ ವಿದ್ಯಾರ್ಥಿಗಳ ಮೇಲೆಯೇ ಭಾರತೀಯರು ಹಲ್ಲೆ ಮಾಡುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳ ದುರ್ಬಳಕೆ, ನಕಲಿ ವಿಡಿಯೋಗಳು, ಸುಳ್ಳು ಸುದ್ದಿಗಳನ್ನು ಹರಡುವ ಮೂಲಕ ಸಮಾಜದಲ್ಲಿ ದ್ವೇಷವನ್ನು ಹಬ್ಬಿಸುತ್ತಿವೆ. ಡೆಹ್ರಾಡೂನ್ ನಗರದಲ್ಲಿ ಬಜರಂಗ ದಳ ಮತ್ತು ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ಕಾಶ್ಮೀರಿ ವಿದ್ಯಾರ್ಥಿಗಳನ್ನು ಹೊಡೆದು ಓಡಿಸಿದ್ದಾರೆ. ಕಾಶ್ಮೀರಿ ವಿದ್ಯಾರ್ಥಿಗಳ ಮೇಲೆ ಹಾಗೂ ವರ್ತಕರ ಮೇಲೆ ದೇಶದ ಇತರ ಭಾಗಗಳಲ್ಲಿಯೂ ಹಲ್ಲೆಗಳು ವರದಿಯಾಗಿವೆ. ಕಾಶ್ಮೀರಿ ನಿವಾಸಿಗಳ ಮೇಲೆ ಹಲ್ಲೆ ನಡೆದ ಕಾರಣಕ್ಕಾಗಿ ಜಮ್ಮುವಿನಲ್ಲಿ ಕರ್ಫ್ಯೂ ಜಾರಿಮಾಡಲಾಗಿದೆ. ಸಂವಿಧಾನದ 370ನೇ ವಿಧಿಯ ದುರ್ಬಳಕೆ ಆಗುತ್ತಿದೆ ಎಂಬ ಆರೋಪ ಹೊರಿಸಿ ಅದರ ರದ್ದತಿಗೆ ಇದು ಸಕಾಲ ಎಂಬ ಅಭಿಪ್ರಾಯವನ್ನು ಹರಿಬಿಡಲಾಗುತ್ತಿದೆ.



**ವಿಧಿ 370 ರ ಹಿನ್ನೆಲೆ:**

ಕಾಶ್ಮೀರ ರಾಜ್ಯದಲ್ಲಿ ಮೂರು ವಿಭಿನ್ನ ಪ್ರದೇಶಗಳಿವೆ. 1) ಸುಮಾರು 55 ಲಕ್ಷ ಜನಸಂಖ್ಯೆ ಹೊಂದಿರುವ ಕಾಶ್ಮೀರ ಕಣಿವೆ 2) ಸುಮಾರು 44 ಲಕ್ಷ ಜನಸಂಖ್ಯೆ ಹೊಂದಿರುವ ಜಮ್ಮು ಪ್ರದೇಶ ಮತ್ತು 3) ಸುಮಾರು 3 ಲಕ್ಷ ಜನಸಂಖ್ಯೆ ಹೊಂದಿರುವ ಲಡಕ್ ಪ್ರದೇಶ.

ದೇಶ ಸ್ವತಂತ್ರವಾಗುವಾಗ ಜಮ್ಮು ಕಾಶ್ಮೀರದಲ್ಲಿ ಒಂದು ಹಿಂದು ಸಂಸ್ಥಾನವಿತ್ತು. ರಾಜಾ ಹರಿಸಿಂಗ್ ಆಳುತ್ತಿದ್ದ. ಆತ ಭಾರತದೊಡನೆ ತನ್ನ ಸಂಸ್ಥಾನವನ್ನು ವಿಲೀನಗೊಳಿಸಲು ಉತ್ಸುಕನಾಗಿರಲಿಲ್ಲ. ಅವನು ತನ್ನ ಅರಸೊತ್ತಿಗೆಯನ್ನು ಸ್ವತಂತ್ರವಾಗಿ ಉಳಿಸಿಕೊಳ್ಳಲು ಬಯಸಿದ್ದನು. ಆ ದಿನಗಳಲ್ಲಿ ಶೇಖ್ ಅಬ್ದುಲ್ಲಾರವರ ನೇತೃತ್ವದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಪಾಳೆಗಾರಿ ಆಳ್ವಿಕೆಯ ವಿರುದ್ಧ ಹೋರಾಟ ನಡೆಸುತ್ತಿತ್ತು. ಈ ಹೋರಾಟವು ಅಂದಿನ ಪಾಳೆಗಾರಿ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಭಾಗವಾಗಿತ್ತು. 'ಕಾಶ್ಮೀರ ಬಿಟ್ಟು ತೊಲಗಿರಿ' ಎಂಬ ಘೋಷಣೆಯನ್ನು ಎತ್ತಿಕೊಂಡು ಹೋರಾಟ ಮಾಡುತ್ತಿದ್ದಾಗ ಅವರನ್ನು ಬಂಧಿಸಿ ಜೈಲಿನಲ್ಲಿ ಇಡಲಾಯಿತು. ಜೈಲಿನಲ್ಲಿ ಇದ್ದುಕೊಂಡೆ ಅವರು ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದರು.

ಇದೇ ಸಮಯದಲ್ಲಿ ಪಾಕಿಸ್ತಾನದ ದಾಳಿಕೋರರು ಮುಖ್ಯವಾಗಿ ವಾಯುವ್ಯ ಸರಹದ್ದಿನ ಪಠಾಣರು ದಂಡೆತ್ತಿ ಬಂದು ಶ್ರೀನಗರದ ಹೊರವಲಯವನ್ನು ತಲುಪಿದಾಗ, ರಾಜಾ ಹರಿಸಿಂಗ್ ಭಾರತದ ಸಹಾಯ ಕೋರಿ ಭಾರತದೊಡನೆ ವಿಲೀನಗೊಳ್ಳಲು ಒಪ್ಪಿಗೆ ಸೂಚಿಸುವ ಕರಾರು ಪತ್ರಕ್ಕೆ ಸಹಿ ಹಾಕಿದರು. ನ್ಯಾಷನಲ್ ಕಾನ್ಫರೆನ್ಸ್ ಬೆಂಬಲಿಗರಾಗಿದ್ದ ಕಾಶ್ಮೀರ ಕಣಿವೆಯ ಜನತೆ ಭಾರತದ ಸೈನ್ಯದ ನೆರವಿನೊಂದಿಗೆ ಪಾಕಿಸ್ತಾನಿ ದಾಳಿಕೋರರನ್ನು ಹಿಮ್ಮೆಟ್ಟಿಸಿದರು. ಈ ವಿಶಿಷ್ಟ ಹಿನ್ನೆಲೆಯ ಕಾರಣಕ್ಕಾಗಿ ಸಂವಿಧಾನ ರಚನಾ ಸಭೆಯು 370ನೇ ವಿಧಿಯನ್ನು ಸಂವಿಧಾನದಲ್ಲಿ ಸೇರ್ಪಡೆ ಮಾಡಿತು. 370 ನೇ ವಿಧಿಯು ಜಮ್ಮು ಕಾಶ್ಮೀರ ರಾಜ್ಯಕ್ಕೆ ಬೇರೆ ರಾಜ್ಯಗಳಿಂದ ಭಿನ್ನವಾದ ವಿಶೇಷ ಸ್ಥಾನಮಾನವನ್ನು ನೀಡಿತು.

370ನೇ ವಿಧಿಗೆ ಅನುಗುಣವಾಗಿ ಜಮ್ಮು ಕಾಶ್ಮೀರಕ್ಕೆ ಪ್ರತ್ಯೇಕವಾದ ಸಂವಿಧಾನವನ್ನು ರಚಿಸುವ ಅವಕಾಶವನ್ನು ಒದಗಿಸಲಾಯಿತು. ಜಮ್ಮು ಕಾಶ್ಮೀರದ ಸಂವಿಧಾನದ ಪ್ರಕಾರ ರಾಜ್ಯಕ್ಕೆ ಒಬ್ಬ ರಾಷ್ಟ್ರಪತಿ, ಒಬ್ಬ ಪ್ರಧಾನಮಂತ್ರಿ ಮತ್ತು ಪ್ರತ್ಯೇಕ ಧ್ವಜವನ್ನು ಹೊಂದುವ ಅಧಿಕಾರ ನೀಡಲಾಯಿತು. ಜಮ್ಮು ಕಾಶ್ಮೀರ ರಾಜ್ಯಕ್ಕೆ ಹೆಚ್ಚಿನ ಸ್ವಾಯತ್ತತೆ ನೀಡಲಾಯಿತಲ್ಲದೆ ರಕ್ಷಣೆ, ವಿದೇಶಾಂಗ ನೀತಿ ಮತ್ತು ಸಂಪರ್ಕ ಕುರಿತಾದ ಭಾರತ ಸರ್ಕಾರದ ಕಾನೂನುಗಳು ಮಾತ್ರ ಜಮ್ಮು ಕಾಶ್ಮೀರಕ್ಕೆ ಅನ್ವಯವಾಗಿಸಿ ಉಳಿದ ವಿಷಯಗಳಿಗೆ ಸಂಬಂಧಪಟ್ಟ ಅಧಿಕಾರ ಜಮ್ಮು ಕಾಶ್ಮೀರ ಶಾಸಕಾಂಗಕ್ಕೆ ವಹಿಸಿಕೊಡಲಾಯಿತು.



ಜಮ್ಮು ಕಾಶ್ಮೀರ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡುವುದನ್ನು ಒಪ್ಪಲಾಯಿತಾದರೂ ಅದರ ಸಮರ್ಪಕ ಅನುಷ್ಠಾನ ಆಗಲೇ ಇಲ್ಲ. ಶೇಖ್ ಅಬ್ದುಲ್ಲಾ (ಜಮ್ಮು ಕಾಶ್ಮೀರ ರಾಜ್ಯದ ಪ್ರಧಾನಿ) ಅವರಿಗೂ ಕೇಂದ್ರ ಸರ್ಕಾರಕ್ಕೂ ನಡುವೆ ಭಿನ್ನಾಭಿಪ್ರಾಯಗಳು ಬೆಳೆದು ಬಂದವು. ಶೇಖ್ ಅಬ್ದುಲ್ಲಾ ಕಾಶ್ಮೀರವನ್ನು ಪ್ರತ್ಯೇಕಗೊಳಿಸಲು ಪ್ರಯತ್ನ ಪಡುತ್ತಿದ್ದಾರೆ ಎಂಬ ಆರೋಪದ ಮೇಲೆ ಅವರನ್ನು 1958 ರಲ್ಲಿ ಬಂಧಿಸಲಾಯಿತು. 1964 ರಲ್ಲಿ ಅವರ ಬಿಡುಗಡೆಯಾದರೂ 1965 ರಲ್ಲಿ ಮತ್ತೆ ಅವರನ್ನು ಬಂಧಿಸಲಾಯಿತು. ಇದರಿಂದಾಗಿ ಜನರಲ್ಲಿ ಅತೃಪ್ತಿ ತೀವ್ರವಾಯಿತು.

ಶೇಖ್ ಅಬ್ದುಲ್ಲಾ ಸರ್ಕಾರ ರಾಜ್ಯದಲ್ಲಿ ಭೂಸುಧಾರಣೆಗಳನ್ನು ಜಾರಿಮಾಡಿತು. ದೇಶದಲ್ಲೇ ಅದೊಂದು ಮೊತ್ತ ಮೊದಲ ಸ್ವಾಗತಾರ್ಹ ಕ್ರಮವಾಗಿತ್ತು. ಆದರೆ, ಮುಂದೆ ಭಾರತೀಯ ಜನಸಂಘವಾಗಿ ಪರಿವರ್ತನೆ ಹೊಂದಿದ ಪ್ರಜಾ ಪರಿಷತ್ 370 ನೇ ವಿಧಿ ಹಾಗೂ ದೆಹಲಿ ಒಪ್ಪಂದದ ವಿರುದ್ಧ ಹೋರಾಟ ಆರಂಭಿಸಿ ಕೋಮುವಾದಿ ವಿಷಬೀಜಗಳನ್ನು ಬಿತ್ತತೊಡಗಿತು.

**ಸ್ವಾಯತ್ತತೆಯ ನಿರಾಕರಣೆ:**

ಕಾಶ್ಮೀರದ ಅನಂತರದ ಚರಿತ್ರೆ ವಿಶ್ವಾಸದ್ರೋಹದ, ಸ್ವಾಯತ್ತತೆಯ ನಿರಾಕರಣೆಯ ಚರಿತ್ರೆಯಾಗಿದೆ. ಜಮ್ಮು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಗುರುತಿಸಿ ಮಾನ್ಯ ಮಾಡಲು ಭಾರತದ ಆಳುವ ವರ್ಗಗಳು ಪ್ರಯತ್ನಪಡಲೇ ಇಲ್ಲ.

ದೇಶ ವಿಭಜನೆಯಾದ ಸಮಯದಲ್ಲಿ ಭಯಂಕರವಾದ ಮತೀಯ ಬೆಂಕಿ ಭಾರತದ ವಾಯುವ್ಯ ಪ್ರದೇಶವನ್ನು ಆವರಿಸಿತು. 1947 ಅಕ್ಟೋಬರ್ ನಲ್ಲಿ ಜಮ್ಮು ಕೋಮು ದಳ್ಳುರಿಗೆ ಸಿಕ್ಕಿಕೊಂಡು ನಲುಗಿತು. ಆದರೆ ಕಾಶ್ಮೀರ ಕಣಿವೆ ಶಾಂತವಾಗಿತ್ತು. ಇದಕ್ಕೆ ಮುಖ್ಯವಾದ ಕಾರಣ,



ಕಾಶ್ಮೀರ ಜನರ ವಿಶಿಷ್ಟ ಸಂಸ್ಕೃತಿ ಮತ್ತು ಸಾಮಾಜಿಕ ಕಣ್ಣೋಟ. ಕಾಶ್ಮೀರ ಕಣಿವೆಯ ನಿವಾಸಿಗಳು ಬಹುತೇಕವಾಗಿ ಮುಸಲ್ಮಾನರಾಗಿದ್ದರೂ ಅವರು ಬಹುತೇಕವಾಗಿ ಧಾರ್ಮಿಕ ಸಹಿಷ್ಣುತೆ ಉಳ್ಳವರು ಮತ್ತು ಸೂಫಿಗಳ ಪ್ರಭಾವಕ್ಕೆ ಒಳಗಾದವರು. ಕಾಶ್ಮೀರಿ ಪಂಡಿತರ ಸಣ್ಣ ಗುಂಪು ಬಹುಸಂಖ್ಯಾತ ಮುಸ್ಲಿಂ ಸಮುದಾಯದ ಜೊತೆಯಲ್ಲಿ ಅನ್ಯೋನ್ಯವಾಗಿ ಇದ್ದವರು. ಮಹಾರಾಜನ ವಿರುದ್ಧದ ಚಳುವಳಿಯು ಧರ್ಮಾತೀತವಾಗಿತ್ತು. ಪಾಕಿಸ್ತಾನಿ ದಾಳಿಕೋರರನ್ನು ಅವರು ತಮ್ಮ ಅಸ್ಮಿತೆಗೆ ಬೆದರಿಕೆವೊಡ್ಡಲು ಬಂದವರು ಎಂದು ಪರಿಗಣಿಸಿ ಅವರ ವಿರುದ್ಧ ಒಂದಾಗಿ ಹೋರಾಡಿದರು. ಭಾರತ ನೀಡಿದ ಸಹಾಯ ಹಸ್ತಕ್ಕೆ ಮನಸೋತು ಭಾರತದೊಂದಿಗೆ ಇರಲು ನಿರ್ಧರಿಸಿದರು. ಆದರೆ ಯಾವಾಗ ಭಾರತ ಸರ್ಕಾರ ಕೊಟ್ಟ ಭರವಸೆಗಳನ್ನು ಈಡೇರಿಸಲು ವಿಫಲವಾಯಿತೋ ಅಂದಿನಿಂದ ಅವರಲ್ಲಿ ಪರಕೀಯತೆ ಬೆಳೆಯಲಾರಂಭಿಸಿತು.

ಬದಲಾದ ಪರಿಸ್ಥಿತಿಗೆ ತಕ್ಕಂತೆ 370ನೇ ವಿಧಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲು ಕಾಶ್ಮೀರದ ಜನತೆ ಸ್ವಸಂತೋಷದಿಂದ ಒಪ್ಪಿತು. ಉದಾಹರಣೆಗೆ, ಜಮ್ಮು ಕಾಶ್ಮೀರದ ಚುನಾವಣೆಗಳನ್ನು ಭಾರತದ ಚುನಾವಣಾ ಆಯೋಗದ ವ್ಯಾಪ್ತಿಗೆ ಒಳಪಡಿಸುವುದು, ನ್ಯಾಯಾಂಗ ವ್ಯವಸ್ಥೆಯನ್ನು ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ತರುವುದಕ್ಕೆ ಅವರು ವಿರೋಧ ವ್ಯಕ್ತಪಡಿಸಲಿಲ್ಲ. ಆದರೆ 370 ವಿಧಿಯನ್ನು ದುರ್ಬಲಗೊಳಿಸಿ, ಉಲ್ಲಂಘಿಸುವುದನ್ನು ಅವರು ವಿರೋಧಿಸಿದರು. ಇದೆಲ್ಲವನ್ನು ದೆಹಲಿ ಸರ್ಕಾರ ತಾನು ನೇಮಿಸಿದ ರಾಜ್ಯಪಾಲ ಜಗ್‌ಮೋಹನ್ ಎಂಬಾತನ ಮೂಲಕ ಮಾಡುತ್ತಾ ಹೋಯಿತು. ಇದರ ಪರಿಣಾಮವಾಗಿ ವಿಶೇಷ ಸ್ಥಾನಮಾನ ಹೊಂದಿದ್ದ ಜಮ್ಮುಕಾಶ್ಮೀರಕ್ಕೆ ಇತರ ರಾಜ್ಯಗಳು ಹೊಂದಿರುವ ಸ್ಥಾನಮಾನವೂ ಸಿಗದಂತಾಯಿತು.

ಭಾರತದೊಂದಿಗೆ ಜಮ್ಮುಕಾಶ್ಮೀರದ ಜನತೆಯ ಅತೃಪ್ತಿಯ ಪೂರ್ಣ ಲಾಭ ಪಾಕಿಸ್ತಾನ ಪಡೆಯುತ್ತಾ ಬಂತು. ಇಸ್ಲಾಂ ಮೂಲಭೂತವಾದಿ ಭಯೋತ್ಪಾದಕ ಸಂಘಟನೆಗಳು ಪ್ರಬಲವಾದವು. ಪಾಕಿಸ್ತಾನ ಪರವಾದ ಭಯೋತ್ಪಾದಕ ಸಂಘಟನೆಗಳಿಗೆ ಕಾಶ್ಮೀರಿ ಯುವಕರು ಹೆಚ್ಚು ಹೆಚ್ಚಾಗಿ ಆಕರ್ಷಿತರಾಗತೊಡಗಿದರು.

**ಪುಟ 10 ಕ್ಕೆ**

## 370ನೇ ವಿಧಿ ರದ್ದಾಗಬಾರದೇಕೆ?......... ಪುಟ 9 ರಿಂದ

**ಕೋಮುವಾದಿ ವಿಭಜನೆ :**

ವಾಜಪೇಯಿ ಸರ್ಕಾರದ ಅವಧಿಯಲ್ಲಿ ಭಾರತ – ಪಾಕಿಸ್ತಾನ ಮಾತುಕತೆ ಆರಂಭವಾಯಿತು. ಯುಪಿಎ ಸರ್ಕಾರದ ಅವಧಿಯಲ್ಲಿ ಅದು ಮುಂದುವರೆಯಿತು. ಆದರೆ ಭಾರತ ಸರ್ಕಾರ ಯಾವುದೇ ರಾಜಕೀಯ ಪರಿಹಾರವನ್ನು ಮುಂದಿಡಲು ಮುಂದಾಗಲಿಲ್ಲ. 2006–07 ರಲ್ಲಿ ಕೆಲವು ವಿಶ್ವಾಸ ಮೂಡಿಸುವ ಕೆಲಸಗಳು ಜರುಗಿದವು. ಉದಾಹರಣೆಗೆ : ಶ್ರೀನಗರ–ಮುಜಾಫರ್‌ಬಾದ್ ರಸ್ತೆಯನ್ನು ತೆರೆಯಲಾಗಿದ್ದು; ಪೂಂಚ್–ರಾವಲ್‌ಕೋಟ್ ಬಸ್ ಸಂಚಾರ ಆರಂಭಿಸಿದ್ದು–ಎಲ್ಲರೂ ಇದನ್ನು ಸ್ವಾಗತಿಸಿದ್ದರು. ಆದರೆ 2008 ರಲ್ಲಿ ನಡೆದ ಮುಂಬೈ ಭಯೋತ್ಪಾದಕ ದಾಳಿಯಿಂದ ಶಾಂತಿ ಪ್ರಕ್ರಿಯೆಗೆ ದೊಡ್ಡ ಹಿನ್ನಡೆಯಾಯಿತು.

ಜಮ್ಮು ಪ್ರದೇಶದಲ್ಲಿ ತಾರತಮ್ಯ ಎಸಗಲಾಗುತ್ತದೆ ಎಂಬ ಪ್ರಚಾರ ದೇಶದ ಗಮನ ಸೆಳೆಯಲಾರಂಭಿಸಿತು. ಆರೆಸ್ಸೆಸ್ ಇದರ ಲಾಭ ಪಡೆಯಿತು. ರಾಜ್ಯವನ್ನು ಮತೀಯ ಆಧಾರದಲ್ಲಿ 3 ಭಾಗಗಳಾಗಿ ವಿಂಗಡಿಸಬೇಕು ಎಂದು ಅದು ಪ್ರಚಾರ ಮಾಡಿತು. 1990 ರಲ್ಲಿ ಕಾಶ್ಮೀರಿ ಪಂಡಿತರು ಕಾಶ್ಮೀರ ಕಣಿವೆಯನ್ನು ತ್ಯಜಿಸಿ ಜಮ್ಮುನಲ್ಲಿ ಬಂದು ನೆಲೆಸಿದ್ದನ್ನು ಆರೆಸ್ಸೆಸ್ ಬಳಸಿಕೊಂಡಿತು. ಅಮರನಾಥ್ ಕ್ಷೇತ್ರದ ವಿವಾದವನ್ನೂ ಬಳಸಿಕೊಳ್ಳಲಾಯಿತು. ಕಾಶ್ಮೀರ ಕಣಿವೆಯಲ್ಲಿ ಇಸ್ಲಾಂ ಮೂಲಭೂತವಾದಿ ಸಂಘಟನೆಗಳ ಚಟುವಟಿಕೆಗಳು ತೀವ್ರಗೊಳ್ಳುತ್ತಿರುವುದು ಪರಿಸ್ಥಿತಿಯನ್ನು ಆತಂಕಕಾರಿಯಾಗಿಸಿತು.

ಕಾಶ್ಮೀರವನ್ನು ಭಾರತದ ಒಂದು ಅಂಗವಾಗಿ ಉಳಿಸಿಕೊಳ್ಳಲು ಸಾಧ್ಯವಾಗಬೇಕಾದರೆ ರಾಜ್ಯಕ್ಕೆ ಸಂವಿಧಾನದ ಚೌಕಟ್ಟಿನೊಳಗೆ ಗರಿಷ್ಠ ಸ್ವಾಯತ್ತೆ ನೀಡಬೇಕು. ಹಾಗೆಯೇ ರಾಜ್ಯದೊಳಗಿನ ಮೂರು ಪ್ರತ್ಯೇಕ ಪ್ರದೇಶಗಳಿಗೂ ಪ್ರಾದೇಶಿಕ ಸ್ವಾಯತ್ತತೆ ನೀಡಬೇಕು. ಇದರಿಂದ ಮಾತ್ರ ಜಮ್ಮು ಕಾಶ್ಮೀರ ಜನತೆಯ ವಿಶ್ವಾಸವನ್ನು ಮರಳಿ ಗಳಿಸಲು ಸಾಧ್ಯ. ಆದರೆ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರ, ತನ್ನ ಹಿಂದುತ್ವ ಸಿದ್ಧಾಂತಕ್ಕೆ ಅನುಗುಣವಾಗಿ ಸಂವಿಧಾನದ 370 ನೇ ವಿಧಿಯನ್ನೇ ರದ್ದು ಮಾಡಬೇಕೆಂದು ಪ್ರತಿಪಾದಿಸುತ್ತದೆ.

ಪುಲ್ವಾಮಾ ಹತ್ಯಾಕಾಂಡದಿಂದ ಭಾರತ–ಪಾಕಿಸ್ತಾನ ಸಂಬಂಧಗಳು ಮತ್ತೆ ತೀವ್ರವಾಗಿ ಜರ್ಜರಿತವಾಗಿವೆ. ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸುವ ಕಾಲ ಮುಗಿತು ಎಂದು ಪ್ರಧಾನಿ ಮೋದಿಯವರೇ ಹೇಳುತ್ತಿದ್ದಾರೆ. ಶಾಂತಿ ಬಯಸುವವರಿಗೆ, ನೈಜ ಅಭಿವೃದ್ಧಿ ಬಯಸುವರಿಗೆ ನೆರೆಯ ದೇಶಗಳೊಂದಿಗೆ ಅನ್ಯೋನ್ಯವಾಗಿ ಇರುವುದು ಮುಖ್ಯವಾಗಬೇಕು. ಮಾತುಕತೆ ದೌರ್ಬಲ್ಯದ ಕುರುಹು ಎಂದು ತಿಳಿಯುವುದು ಮೂರ್ಖತನ. ದ್ವೇಷವನ್ನು ಶೌರ್ಯ ಎಂದು ಪರಿಗಣಿಸುವುದು ತಪ್ಪು. ಚುನಾವಣೆಗಳು ಹತ್ತಿರ ಬರುವಾಗ ತಮ್ಮ ವೈಫಲ್ಯವನ್ನು ಮರೆಮಾಚಲು ಇಂತಹ ನಾಟಕೀಯ ಶೌರ್ಯ ಪ್ರದರ್ಶನ ಮಾಡುತ್ತಿದ್ದಾರೆ ಎಂಬುದು ಚಿಕ್ಕ ಮಕ್ಕಳಿಗೂ ಅರ್ಥ ಆಗುತ್ತದೆ. ಭದ್ರತಾ ಪಡೆಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ ಎಂಬ ಮಾತು ಅವಿವೇಕತನದ್ದು. ಜಮ್ಮು ಕಾಶ್ಮೀರದಲ್ಲಿ ಭದ್ರತಾ ಪಡೆಗಳಿಂದ ಆಗಿರುವ ಅತಿರೇಕಗಳು ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯಿಂದಾಗಿಯೇ ಅಂದು ಪಾಕಿಸ್ತಾನಕ್ಕೆ ಸೇರದೆ ಭಾರತದಲ್ಲಿ ಬದುಕ ಬಯಸಿದ ಕಾಶ್ಮೀರಿ ಜನತೆ ಇಂದು ಪರಕೀಯತೆಯನ್ನು ಅನುಭವಿಸುವಂತಾಗಿದೆ ಎಂಬುದನ್ನು ಯಾರೂ ಮರೆಯಬಾರದು. ಜಮ್ಮು ಕಾಶ್ಮೀರದ ಯುವ ಜನರ ವಿಶ್ವಾಸಗಳಿಸಲು ಅವರಿಗಾಗಿ ಉದ್ಯೋಗ ಸೃಷ್ಟಿಸಲು ವಿಶೇಷ ಆದ್ಯತೆ ನೀಡಬೇಕು. ಜಮ್ಮು ಪ್ರದೇಶದ ಜನರ ನೈಜ ಸಮಸ್ಯೆಗಳಿಗೆ ರಾಜಕೀಯ ಪರಿಹಾರ ಒದಗಿಸಬೇಕು. ಕಾಶ್ಮೀರಿ ಪಂಡಿತರು ಗೌರವಯುತವಾಗಿ ಕಾಶ್ಮೀರಕ್ಕೆ ಮರಳಿ ಬಂದು ನೆಲೆಸಲು ಕ್ರಮಕೈಗೊಳ್ಳಬೇಕು.

ಕಾಶ್ಮೀರಿಗಳ ಮೇಲೆ ನಡೆಯುತ್ತಿರುವ ಹಲ್ಲೆ, ಮಾನಭಂಗ, ಅತ್ಯಾಚಾರ, ಸಾಮೂಹಿಕ ಹತ್ಯೆ ನಿಲ್ಲಬೇಕು. ಅಮಾಯಕರ ಬಂಧನ ನಿಲ್ಲಿಸಿ ಕಾರಾಗ್ರಹಗಳಲ್ಲಿ ಬಂಧಿಸಿಟ್ಟಿರುವ ಅಮಾಯಕ ಯುವಕರನ್ನು ಬಿಡುಗಡೆ ಮಾಡಬೇಕು. ಮಿಲಿಟರಿ ಹಿನ್ನೆಲೆಯುಳ್ಳ ವ್ಯಕ್ತಿಯೊಬ್ಬನನ್ನು ರಾಜ್ಯಪಾಲರಾಗಿ ನೇಮಿಸುವ ಮೋದಿ ಆಲೋಚನೆ ಅಪಾಯಕಾರಿಯಾಗಿದೆ. 1989 ರ ರಾಜ್ಯಪಾಲ ಜಗಮೋಹನ್ ಕಾಲದ ಅನಾಹುತ ಮರೆಯಲಾಗದು. ರಾಜಕೀಯ ಪ್ರಭುದ್ಧತೆಯುಳ್ಳ, ಸೆಕ್ಯುಲರ್ ವ್ಯಕ್ತಿಯೊಬ್ಬರು ಜಮ್ಮು ಕಾಶ್ಮೀರದ ರಾಜ್ಯಪಾಲರಾಗಿ ನೇಮಕಗೊಳ್ಳುವುದು ಅಗತ್ಯವಾಗಿದೆ.

ಪರಿಸ್ಥಿತಿ ತಿಳಿಗೊಂಡ ನಂತರ ಪಾಕಿಸ್ತಾನದೊಂದಿಗೆ ಮಾತುಕತೆ ಆರಂಭಿಸಲು ಮುಂದಾಗಬೇಕು. ಎರಡೂ ರಾಷ್ಟ್ರಗಳ ನಡುವೆ ಇರುವ ಯಾವುದೇ ವಿವಾದವನ್ನು ಕುರಿತು ಚರ್ಚಿಸಲು ಹಿಂದೇಟು ಹಾಕಬಾರದು. ಎರಡೂ ದೇಶಗಳ ಜನತೆಯ ನಡುವೆ ಸಂಬಂಧ, ಸಂಪರ್ಕವನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಳ್ಳಬೇಕು. ಯುದ್ಧದಂತಹ ಕ್ರಮಗಳಿಂದ ಯಾವುದೇ ಸಮಸ್ಯೆಗೆ ಪರಿಹಾರ ದೊರೆಯದು. ಶಾಂತಿ, ಸೌಹಾರ್ದತೆ ಹಾಗೂ ಪರಸ್ಪರ ವಿಶ್ವಾಸದ ಮಾತುಕತೆಯಲ್ಲೇ ಇದೆ ಪರಿಹಾರ. ಪ್ರತಿಕಾರದಲ್ಲಿ ಧಕ್ಕದು ಪರಿಹಾರ. ಸಂವಿಧಾನದ 370 ನೇ ವಿಧಿ ರದ್ದಾಗಬೇಕಾಗಿಲ್ಲ. ಅದು ಪ್ರತ್ಯೇಕತೆಯನ್ನು ಬೆಂಬಲಿಸುವುದಿಲ್ಲ. ಅದು ರಾಜ್ಯಗಳಿಗೆ ಸ್ವಾಯತ್ತತೆಯನ್ನು ನೀಡುತ್ತದೆ. ನಾಗಾಲ್ಯಾಂಡ್, ಮಿಜೋರಾಂ ಮೊದಲಾದ ರಾಜ್ಯಗಳಲ್ಲಿ ಅಂತಹ ವಿಧಿ ಜಾರಿಯಲ್ಲಿವೆ. ಇತರ ರಾಜ್ಯಗಳಿಗೂ ಅಂತಹ ವಿಧಿಗಳನ್ನು ಅನ್ವಯಿಸಿದರೆ ನಮ್ಮ ಗಣರಾಜ್ಯ ಬಲಗೊಳ್ಳುತ್ತದೆ.

## ಆದಿವಾಸಿಗಳ ಪರವಾಗಿ ಏಕಿಲ್ಲ?...... ಪುಟ 2 ರಿಂದ

"ಕಳೆದ ಐದು ವರ್ಷಗಳಲ್ಲಿ ನಿಮ್ಮ ಸರಕಾರ ಅರಣ್ಯ ಹಕಕುಗಳ ಕಾಯ್ದೆ ಕೊಟ್ಟಿರುವ ರಕ್ಷಣೆಯನ್ನು ದುರ್ಬಲಗೊಳಸಲು ಮತ್ತು ನಿರ್ಮೂಲಗೊಳಿಸಲು ಹಲವು ಕಾನೂನುಗಳನ್ನು ಪಾಸು ಮಾಡಿಸಿದೆ. ಗಣಿಗಾರಿಕೆ ಕಾಯ್ದೆಗೆ ಮತ್ತು ಪರಿಹಾರಾತ್ಮಕ ಅರಣ್ಯೀಕರಣ ಕಾಯ್ದೆಗೆ ತಿದ್ದುಪಡಿಗಳು, ಅರಣ್ಯ ಮತ್ತು ಪರಿಸರ ಇಲಾಖೆಯ ಅರಣ್ಯ ಹಕ್ಕುಗಳ ಕಾಯ್ದೆಯನ್ನು ದುರ್ಬಲಗೊಳಿಸುವ ಹಲವು ಅಧಿಸೂಚನೆಗಳು ಇವುಗಳಲ್ಲಿ ಸೇರಿವೆ. ಎನ್‌ಡಿಎ ಅಡಿಯಲ್ಲಿರುವ ರಾಜ್ಯ ಸರಕಾರಗಳು ಭೂಸ್ವಾಧೀನ, ಮರುವಸತಿ ಮತ್ತು ಮರುನೆಲೆ ಕಾಯ್ದೆ, 2013ನ್ನು ದುರ್ಬಲಗೊಳಿಸುವ ತಿದ್ದುಪಡಿಗಳನ್ನು ಅಂಗೀಕರಿಸಿವೆ." ಎಂಬ ಸಂಗತಿಯನ್ನೂ ಈ ಪತ್ರದಲ್ಲಿ ಪ್ರಧಾನಿಗಳಿಗೆ ನೆನಪಿಸಲಾಗಿದೆ.

ಸುಪ್ರಿಂ ಕೋರ್ಟಿನಲ್ಲಿನ ಅರ್ಜಿಗಳಲ್ಲಿ ಹಿಂದಿನ ಎನ್‌ಡಿಎ ಸರಕಾರವೂ ಆದಿವಾಸಿಗಳ ಹಕ್ಕುಗಳನ್ನು ರಕ್ಷಿಸುವಲ್ಲಿ ವಿಫಲವಾಗಿದೆ. ಮೇ 2002ರಲ್ಲಿ ಆ ಎನ್‌ಡಿಎ ಸರಕಾರದ ಆದೇಶದಿಂದಾಗಿ ಲಕ್ಷಾಂತರ ಆದಿವಾಸಿಗಳನ್ನು ಒಕ್ಕಲೆಬ್ಬಿಸಲಾಯಿತು. 2004ರಲ್ಲಿ ಯುಪಿಎ ಸರಕಾರ ಮೂಡಿಬಂದಾಗ, ಪ್ರಸಕ್ತ ಅರಣ್ಯ ಹಕ್ಕುಗಳ ಕಾಯ್ದೆಯನ್ನು 2005ರಲ್ಲಿ ಆದಿವಾಸಿಗಳಿಗೆ ಚಾರಿತ್ರಿಕವಾಗಿ ಮಾಡಿರುವ ಅನ್ಯಾಯಗಳನ್ನು ಸರಿಪಡಿಸಲಾಯಿತು. ಆ ಕುರಿತ ಮಸೂದೆಯನ್ನು ಪರಿಶೀಲಿಸಿದ ಸಂಸತ್ತಿನ ಸೆಲೆಕ್ಟ್ ಕಮಿಟಿಯಸದಸ್ಯರಾಗಿದ್ದ ಬೃಂದಾ ಕಾರಟ್ ಈ ಹಿನ್ನೆಲೆಯನ್ನು ಪ್ರಧಾಮಿಗಳ ಗಮನಕಕೆ ತರುತ್ತ "ಆದಿವಾಸಿಗಳಿಗೆ ಯಾವುದೇ ಹಕ್ಕುಗಳನ್ನು ಕೊಡುವುದರ ವಿರುದ್ಧ ವಾದಿಸಿರುವ ಬಲಿಷ್ಟ ಲಾಬ್ಬಿಗಳ ಕುರಿತು ನನಗೆ ವೈಯಕ್ತಿಕವಾಗಿ ಗೊತ್ತಿದೆ. ಸಂಸತ್ತು ಈ ತಪ್ಪುವಾದಗಳನ್ನು ಬದಿಗೊತ್ತಿತು ಮತ್ತು ಕಾನೂನ್ನು ಅಂಗೀಕರಿಸಿತು. ಆ ಹೆಜ್ಜೆಯಿಂದ ಹಿಂದಕ್ಕೆ ಹೋಗಲು ನಾವು ಬಿಡಲಾರೆವು" ಎಂದು ಪ್ರಧಾನ ಮಂತ್ರಿಗಳಿಗೆ ಹೇಳಿದ್ದಾರೆ.

"ಬೇರೆ ಹಲವು ವಿಷಯಗಳ ಮೇಲೆ ಸುಗ್ರೀವಾಜ್ಞೆಗಳ ವಿಧಾನವನ್ನು ಅಂಗೀಕರಿಸಿರುವ ನಿಮ್ಮ ಸರಕಾರ ಆದಿವಾಸಿಗಳು ಮತ್ತು ಪಾರಂಪರಿಕ ಅರಣ್ಯವಾಸಿಗಳಿಗೆ ಒಕ್ಕಲೆಬ್ಬಿಸುವುದರಿಂದ ರಕ್ಷಣೆ ಕೊಡಲು ತಕ್ಷಣವೇ ಸುಗ್ರೀವಾಜ್ಞೆ ಹೊರಡಿಸದಿದ್ದರೆ ಅದೊಂದು ಅವರಿಗೆ ಮಾಡುವ ದೊಡ್ಡ ಅನ್ಯಾಯವಾಗುತ್ತದೆ" ಎಂದು ತಮ್ಮ ಪತ್ರವನ್ನು ಕೊನೆಗೊಳಿಸುತ್ತ ಬೃಂದಾ ಕಾರಟ್ ಪ್ರಧಾನಿಗಳಿಗೆ ಹೇಳಿದ್ದಾರೆ.

## ಸಮೃದ್ಧತೆ ಮತ್ತು ಸಂದಿಗ್ಧತೆಯ ಬಜೆಟ್...... ಪುಟ 6 ರಿಂದ

ಬೆಂಗಳೂರಿಗೆ ಬಜೆಟ್ಟಿನಲ್ಲಿ ಸರಿಸುಮಾರು ರೂ.10,000 ಕೋಟಿ ಹಣ ನೀಡಲಾಗುತ್ತಿದೆ. ಬಜೆಟ್ಟನಲ್ಲಿ ಬೆಂಗಳೂರಿನ ಬೆಳವಣಿಗೆಯನ್ನು ಹೇಗೆ ಪ್ರೋತ್ಸಾಹಿಸಬೇಕು ಎಂಬುದಕ್ಕೆ ಪ್ರತಿಯಾಗಿ ಅದರ ರಾಕ್ಷಸ ಸದೃಶ ಬೆಳವಣಿಗೆಯನ್ನು ತಡೆಯುವುದು ಹೇಗೆ ಎಂಬುದರ ಬಗ್ಗೆ ಗಮನ ನೀಡಬೇಕಾಗಿತ್ತು. ಮುಂದಿನ ಬಜೆಟ್ಟಿನಲ್ಲಾದರೂ ಸರ್ಕಾರ ಬೆಂಗಳೂರಿನ ಬೆಳವಣಿಗೆಯನ್ನು ತಡೆಯುವುದರ ಬಗ್ಗೆ ಯೋಚಿಸಬೇಕು. ಕರ್ನಾಟಕದ ಜನಸಂಖ್ಯೆಯ ಬೆಳವಣಿಗೆಯು ಸ್ಥಿರಗತಿಯನ್ನು ಸಾಧಿಸಿಕೊಂಡಿದೆ. ನಮ್ಮ ರಾಜ್ಯದ ಜನಸಂಖ್ಯೆಯಲ್ಲಿ 2001 ರಿಂದ 2011ರಲ್ಲಿ ಹೆಚ್ಚುವರಿಯಾಗಿ ಸೇರಿದ ಜನರ ಸಂಖ್ಯೆ 82.45 ಲಕ್ಷ. ಇದು 2011–2021ರಲ್ಲಿ 40 ರಿಂದ 50 ಲಕ್ಷ ಮೀರಲಿಕ್ಕಿಲ್ಲ. ಉದಾಹರಣೆಗೆ ಸಿಟಿಜನ್‌ಶಿಫ್ ರಿಜಿಸ್ಟ್ರೇಷನ್ ಸಿಸ್ಟಮ್ 2016ರ ಪ್ರಕಾರ 2016ರಲ್ಲಿ ರಾಜ್ಯದಲ್ಲಿ ನೋಂದಣಿಯಾದ ಜನನಗಳ ಸಂಖ್ಯೆ 11.07 ಲಕ್ಷ ಮತ್ತು ಮರಣಗಳ ಸಂಖ್ಯೆ 4.20 ಲಕ್ಷ. ನಿವ್ವಳ ಜನಸಂಖ್ಯೆ ಏರಿಕೆ 6.87 ಲಕ್ಷ. ಒಟ್ಟಾರೆ ವಾರ್ಷಿಕ ಏರಿಕೆ ಸರಾಸರಿ 6 ಲಕ್ಷವೆಂದಿಟ್ಟುಕೊಂಡರೆ ಕರ್ನಾಟಕದ ಜನಸಂಖ್ಯೆಯಲ್ಲಿನ ಏರಿಕೆ 2011 ರಿಂದ 2021ರಲ್ಲಿ 65 ರಿಂದ 70 ಲಕ್ಷವಾಗಬಹುದು. ಒಟ್ಟಾರೆ ಅದರ ಜನಸಂಖ್ಯೆ 7 ಕೋಟಿ ಮೀರಲಿಕ್ಕಿಲ್ಲ. ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಂದಾಜಿನ ಪ್ರಕಾರ ಕರ್ನಾಟಕದ ಜನಸಂಖ್ಯೆ 2021ರಲ್ಲಿ 7.19 ಕೋಟಿ. ಇದನ್ನೆಲ್ಲ ಏಕೆ ಹೇಳಬೇಕಾಯಿತೆಂದರೆ ಕರ್ನಾಟಕವು ಇನ್ನುಮೇಲೆ ಅಭಿವೃದ್ಧಿಯ ಗುಣಮಟ್ಟಕ್ಕೆ, ವೆಚ್ಚದ ಕಾರ್ಯಕ್ಷಮತೆಗೆ, ಪ್ರತಿರೂಪಾಯಿ ಹೂಡಿಕೆಯಿಂದ ಬರುವ ಪ್ರತಿಫಲದ ಬಗ್ಗೆ ಗಮನ ನೀಡಬೇಕು. ಬಜೆಟ್ಟಿನಲ್ಲಿ ಕೇವಲ ಅಷ್ಟು ಅನುದಾನ ಕೊಡಲಾಗಿದೆ, ಇಷ್ಟು ಸಬ್ಸಿಡಿ ನೀಡಲಾಗಿದೆ ಎಂದು ಬೀಗಿದರೆ ಸಾಕಾಗುವುದಿಲ್ಲ. ಬೆವರು, ಕಣ್ಣೀರು ಮತ್ತು ರಕ್ತ ಹರಿಸಿ ರಾಜ್ಯದ ದುಡಿಮೆಗಾರರು ನೀಡಿದ ತೆರಿಗೆ ಹಣವನ್ನು ಅತ್ಯಂತ ಉತ್ಪಾದಕ ರೀತಿಯಲ್ಲಿ ವ್ಯಯಿಸುವಂತಾಗಬೇಕು. ಭೌತಿಕ ಗುರಿ ಮತ್ತು ಸಾಧಿಸಿಕೊಂಡ ಗುರಿ ಎಂಬ ಓಬಿರಾಯನ ಕಾಲದ ಮೌಲ್ಯಮಾಪನ ಕ್ರಮವನ್ನು ಕೈಬಿಟ್ಟು ಪ್ರತಿ ರೂಪಾಯಿ ವೆಚ್ಚದಿಂದ ಬಂದ ಫಲೋತ್ಪತ್ತಿಯೇನು(ಔಟ್‌ಕಮ್) ಎಂಬುದು ಬಜೆಟ್ ಮೌಲ್ಯಮಾಪನದ ಮಾನದಂಡವಾಗಬೇಕು. ಈ ಮಾಪನದಲ್ಲಿ ಕುಮಾರಸ್ವಾಮಿ ಅವರ ಬಜೆಟ್ ಪಾಸಾಗುವುದು ಕಷ್ಟ. ಈ ಸಂಧಿಗ್ಧತೆಗಳ ಕಡೆ ಗಮನ ನೀಡಿದರೆ ಬಜೆಟ್ಟು ಸಮೃದ್ಧವಾಗಿ ಜನರಿಗೆ ಬದುಕನ್ನು ನೀಡಬಲ್ಲದು. ಬಜೆಟ್ ಎನ್ನುವುದು ಕೇವಲ ಅನುದಾನದ ಸಂಗತಿಯಲ್ಲ. ಅದೊಂದು ಅಭಿವೃದ್ಧಿಯ ಚಾಲಕ ಶಕ್ತಿ. ಇದರ ಬಗ್ಗೆ ನಮ್ಮ ಸರ್ಕಾರ ಗಮನಹರಿಸಿದರೆ ಕುಮಾರಸ್ವಾಮಿ ಅವರ ಸಮೃದ್ಧ ಬಜೆಟ್ಟು ಜನರ ಬದುಕನ್ನು ಸಮೃದ್ಧಗೊಳಿಸೀತು–ಸುಖಮಯವಾಗಿಸೀತು.

## ಹೋರಾಟದ ಹಾದಿಯಲ್ಲಿ ಹೆಂಚು ಕಾರ್ಮಿಕರು..... ಪುಟ 5 ರಿಂದ

ಪ್ರತ್ಯೇಕ ಅಸ್ತಿತ್ವದಲ್ಲಿದೆ. ಕಚ್ಚಾ ವಸ್ತುಗಳ ಧಾರಣೆ ಏರಿಕೆ ಹಾಗೂ ಉತ್ತಮ ಗುಣಮಟ್ಟದ ಆವೆ ಮಣ್ಣು ಸಿಗದಿರುವುದು, ಹೆಂಚು ಮಾರುಕಟ್ಟೆ ಕುಸಿತದಿಂದ ಕೈಗಾರಿಕೆ ಸಂಕಷ್ಟದಲ್ಲಿದೆ. ಈ ಹಿನ್ನೆಲೆಯಲ್ಲಿ ಕರಾವಳಿ ಜಿಲ್ಲೆಯಾದ್ಯಂತ ಸುಮಾರು 60ಕ್ಕೂ ಹೆಚ್ಚು ಹೆಂಚಿನ ಕಾರ್ಖಾನೆಗಳು ಮುಚ್ಚಿಕೊಂಡು ಕೇವಲ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿ ಕೇವಲ 11 ಹೆಂಚು ಕೈಗಾರಿಕೆಗಳು ಮಾತ್ರ ಉಳಿದುಕೊಂಡಿದೆ.

ಗ್ರಾಮಾಂತರ ಪ್ರದೇಶದ ಬಡ ರೈತ, ಕೃಷಿಕೂಲಿಕಾರರು ನಗರ ಪ್ರದೇಶಕ್ಕೆ ಬಂದು ಹೆಂಚು ಕೈಗಾರಿಕೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಬಹುತೇಕ ಹೆಂಚು ಕಾರ್ಖಾನೆ ಜೀವನಾಡಿ ಎನಿಸಿರುವ ಕುಂದಾಪುರದ ಹೆಂಚುಗಳಿಗೆ ಮಹಾರಾಷ್ಟ್ರ, ಕೇರಳ, ಗೋವಾ ರಾಜ್ಯಗಳಲ್ಲಿ ಉತ್ತಮ ಬೇಡಿಕೆಯಿದ್ದರೂ ಗುಜರಾತ್ ರಾಜ್ಯದ ಹೆಂಚು ಮಾರುಕಟ್ಟೆಯ ಸ್ಪರ್ಧೆ ಎದುರಿಸಬೇಕಾಗಿದೆ.

ಕರ್ನಾಟಕ ಸರ್ಕಾರದ ಸಚಿವಾಲಯ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕ: 30/12/2017 ರನ್ವಯವಾಗುವಂತೆ ಪರಿಷ್ಕೃತ ಕನಿಷ್ಟ ವೇತನ ದರಗಳನ್ನು ಪಾವತಿಸಲು ಕನಿಷ್ಟ ವೇತನ ಕಾಯ್ದೆ 1948ರ ಕಲಂ ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ. ಆದರೆ ಈಗ ಹೆಂಚು ಉದ್ಯೋಗ ಸಂಕಷ್ಟದಲ್ಲಿರುವಾಗ ಕೈಗಾರಿಕೆ ಪರವಾಗಿ ಉಡುಪಿ ಜಿಲ್ಲಾ ಹೆಂಚು ಕಾರ್ಮಿಕರ ಸಂಘ ಹಗಲಿಗೆ ಹಗಲು ಕೊಟ್ಟಿರುವುದನ್ನು ಮರೆತಿರುವ ಮಾಲಿಕರು ಕಾನೂನಾತ್ಮವಾಗಿ ಕೊಡಬೇಕಾದ ಹಕ್ಕಿನ ಕನಿಷ್ಟ ಕೂಲಿ ನಿರಾಕರಿಸುತ್ತಿರುವ ಮಾಲಕರ ಧೋರಣೆ ವಿರೋಧಿಸಿದ ಹೆಂಚು ಕಾರ್ಮಿಕರಿಗೆ ಕೆಲಸ ನಿರಾಕರಿಸುವ ಮೂಲಕ ಮಾಲಕರು ಹಠಮಾರಿ ಧೋರಣೆ ಅನುಸರಿಸುತ್ತಿದ್ದಾರೆ. ಕಾರ್ಮಿಕರನ್ನು ಅನಿವಾರ್ಯವಾಗಿ ಮುಷ್ಕರಕ್ಕೆ ದೂಡಿದ ಮಾಲಕರು ದೌರ್ಜನ್ಯ ಎಸಗಿದ್ದಾರೆ. ಹೆಂಚು ಉದ್ಯಮ ಅಸ್ತವ್ಯಸ್ತಗೊಂಡಿದೆ. ಕುಂದಾಪುರದ ಎಲ್ಲಾ 11 ಹೆಂಚು ಕಾರ್ಖಾನೆಯ 1600 ಮಂದಿ ಕಾರ್ಮಿಕರು ಏಕಕಾಲಕ್ಕೆ ಧರಣಿ ಸತ್ಯಾಗ್ರಹ ನಡೆಸುತ್ತಿದ್ದು ಬೇಡಿಕೆ ಈಡೇರಿಕೆಗೆ ಅಗ್ರಹಿಸಿದ್ದಾರೆ. ಸ್ಥಳೀಯ ಶಾಸಕರು ಹೆಂಚು ಉದ್ಯಮ ಹೊಂದಿದವರಾಗಿದ್ದು, ಕಾರ್ಮಿಕರ ಸಂಕಷ್ಟ ಅರಿತವರು, ಅವರು ಕನಿಷ್ಟ ಕೂಲಿ ಸಹಿತ ಇನ್ನಿತರ ಸೌಕರ್ಯ ನೀಡಲು ಹಿಂದೇಟು ಹಾಕುತ್ತಿರುವುದು ಖಂಡನೀಯ. ಬೇಡಿಕೆ ಈಡೇರದ ಹೊರತು ಮುಷ್ಕರದಿಂದ ಹಿಂದಕ್ಕೆ ಸರಿಯುವುದಿಲ್ಲ, ಈ ಹಿನ್ನೆಲೆಯಲ್ಲಿ ಫೆಬ್ರವರಿ 25 ರಂದು ಬೃಹತ್ ರ‍್ಯಾಲಿ, ಸಾರ್ವಜನಿಕ ಸಭೆ ಜರುಗಿಸಿ ಸಹಾಯಕ ಕಮಿಷನರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸುವ ಹೋರಾಟದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಉಡುಪಿ ಜಿಲ್ಲಾ ಹೆಂಚು ಕಾರ್ಮಿಕರ ಸಂಘದ ವಿ. ನರಸಿಂಹ (ಅಧ್ಯಕ್ಷ), ಎಚ್. ನರಸಿಂಹ (ಪ್ರಧಾನ ಕಾರ್ಯದರ್ಶಿ), ಪ್ರಕಾಶ ಕೋಣಿ (ಕೋಶಾಧಿಕಾರಿ) ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರದ ಸಚಿವಾಲಯ ಕರ್ನಾಟಕ ರಾಜ್ಯಾದ್ಯಂತ "ಹೆಂಚು ಕೈಗಾರಿಕೆ (Tile Industry)" ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಈ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕ: 30–12–2017 ರಿಂದ ಅನ್ವಯವಾಗುವಂತೆ ಈ ಕೆಳಕಂಡ ಕನಿಷ್ಟ ವೇತನ ದರಗಳನ್ನು ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಟ ವೇತನ ದರಗಳನ್ನು ಪಾವತಿಸಲು, ಕನಿಷ್ಟ ವೇತನ ಕಾಯ್ದೆ 1948ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

**–ವೆಂಕಟೇಶ್ ಕೋಣಿ**

# ಶಿಕ್ಷಣ ಕ್ಷೇತ್ರದಲ್ಲಿ ಮೋದಿಯವರ ವಿಫಲತೆ

**ಎಂ.ಜಿ. ವೆಂಕಟೇಶ್**



2014 ರ ಲೋಕಸಭಾ ಚುನಾವಣೆಯಲ್ಲಿ ಮೋದಿಯವರಿಗೆ ನಿಚ್ಚಳ ಬಹುಮತ ನೀಡಿ ಒಳ್ಳೆಯ ದಿನಗಳು ಬರುವುದೆಂದು ಕಾದಿದ್ದವರಿಗೆ ನಾಲಿಗೆ ಕಚ್ಚಿಕೊಂಡಂತಿರಬಹುದು. ಅವರ 2014 ರ ಪ್ರಣಾಳಿಕೆಯ ಪ್ರಕಾರ 25 ಕೋಟಿ ಉದ್ಯೋಗ ಅವಕಾಶದಿಂದ ನಿರುದ್ಯೋಗವನ್ನು ಹಿಮ್ಮೆಟ್ಟಿಸಬಹುದೆಂದು ತಿಳಿಯಲಾಗಿತ್ತು. ಅದರಂತೆ 2014 ರಿಂದ ಪ್ರತಿವರ್ಷ 2 ಕೋಟಿ ಉದ್ಯೋಗ ಸೃಷ್ಠಿಸುವುದಾಗಿ ಹೇಳಿಕೊಂಡಿತ್ತು. ಆದರೆ ವಾಸ್ತವತೆ ಭಿನ್ನವಾಗಿದ್ದು 110 ಲಕ್ಷ ಉದ್ಯೋಗ 2018 ರಲ್ಲೇ ನಷ್ಟವಾಗಿದೆ. ರಾಷ್ಟ್ರೀಯ ಅಂಕಿ ಅಂಶಗಳ ಪ್ರಕಾರ 2017 – 18 ರಲ್ಲಿನ ವರದಿಯಂತೆ ಈ ಪ್ರಮಾಣದ ನಿರುದ್ಯೋಗ 4 ದಶಕಗಳಲ್ಲೇ ಇರಲಿಲ್ಲ.

ಆದರೆ ಈ ವರದಿಯನ್ನು ಪ್ರಕಟಿಸಿಲ್ಲ. ಸರ್ಕಾರದ ಹುದ್ದೆಗಳಲ್ಲೇ 25 ಲಕ್ಷ ಖಾಲಿಯಿದ್ದು ಸರ್ಕಾರಕ್ಕೆ ಅದನ್ನು ತುಂಬುವ ಇಚ್ಛೆಯಿಲ್ಲ. ಆರ್ಥಿಕ ತಜ್ಞ ಹೇಳುತ್ತಿರುವುದನ್ನು ಸರ್ಕಾರ ಒಪ್ಪದೇ ಬೋಗಳೆ ಆರ್ಥಿಕತೆಯನ್ನೇ ಮುಂದುವರೆಸಿದ್ದಾರೆ. ಎಲ್ಲ ಸತ್ಯಗಳನ್ನು ಮರೆಮಾಚುತ್ತಿದ್ದಾರೆ.

ಭಾರತವನ್ನು ತರುಣ ದೇಶವೆಂದು ಪರಿಗಣಿಸಲಾಗಿದೆ. ಇಲ್ಲಿರುವ ಶೇ. 50% ಜನಸಂಖ್ಯೆ 25 ವರ್ಷಗಳಿಗಿಂತ ಕಡಿಮೆಯಿರುವವರು ಮತ್ತು 65% ಜನಸಂಖ್ಯೆ 35 ವರ್ಷಕ್ಕಿಂತ ಕಡಿಮೆಯಿರುವವರು. 2020 ರ ವೇಳೆಗೆ ಸರಾಸರಿ ವರ್ಷ 25 ಇರಲಿದೆ. ಸರ್ಕಾರ ಸಾಮಾಜಿಕ ಭದ್ರತೆಗಳಿಗೆ ಧನವಿನಿಯೋಗದ ಕೊರತೆ ಮಾಡುತ್ತಿರುವುದರಿಂದ ಜನರ ಕೊಳ್ಳುವ ತಿನ್ನುವ ಸಾಮರ್ಥ್ಯ ಕಡಿಮೆಯಾಗಲಿದೆ. ಜನರಲ್ಲಿ ಕೊಳ್ಳುವ ಶಕ್ತಿ ಕಡಿಮೆಯಾಗಿರುವುದರಿಂದ ವಸ್ತುಗಳ ಉತ್ಪಾದನೆ ಕುಸಿಯುತ್ತಿದೆ. ಕೈಗಾರಿಕೆ ಬೆಳೆದಿದ್ದರೆ ಉದ್ಯೋಗ ಸೃಷ್ಟಿಯಾಗುತ್ತಿತ್ತು. ಬದಲಿಗೆ ಅಸಂಘಟಿತ ಕ್ಷೇತ್ರಗಳಲ್ಲಿ 1,52,000 ಕಾರ್ಮಿಕರು ಅನಾಣ್ಯೀಕರಣದ ಮೂರು ತಿಂಗಳಲ್ಲೇ ಕೆಲಸ ಕಳೆದುಕೊಂಡಿದ್ದಾರೆ. ರೈತರ ಆತ್ಮಹತ್ಯೆ ಹೆಚ್ಚಾಗಿದೆ. ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಂತೆ 100 ದಿನಗಳು ಇಲ್ಲವಾಗಿದೆ. ಹಳ್ಳಿಗಳಿಂದ ನಗರಗಳಿಗೆ ವಲಸೆ ಬರುವವರ ಸಂಖ್ಯೆ ಹೆಚ್ಚಾಗಿದೆ. ಉದ್ಯೋಗದ ಪರಿಸ್ಥಿತಿ ಎಷ್ಟು ಹಾಳಾಗಿದೆಯೆಂದರೆ ತಮಿಳುನಾಡಿನಲ್ಲಿ 14 ಗುಡಿಸುವ ಹುದ್ದೆಗೆ 4600 ಇಂಜನೀಯರ್‌ಗಳು ಅರ್ಜಿ ಸಲ್ಲಿಸಿದ್ದಾರೆ. ಈ ರೀತಿಯ ಹತಾಶೆ ಮನೋಭಾವದಿಂದ ಯುವ ಜನತೆಯನ್ನು ಧಾರ್ಮಿಕ ಮೂಲಭೂತವಾದಿಗಳು ದುರುಪಯೋಗ ಮಾಡಿಕೊಳ್ಳಬಹುದಲ್ಲ. ಯುವಜನರನ್ನು ದ್ವೇಷಿಸುವ ಘೋಷಣೆಗಳಿಗೆ ಬದಲಾಗಿ ಭಾರತ ವಿದ್ಯಾರ್ಥಿ ಫೆಡರೇಶನ್ ಘೋಷಣೆಯಂತೆ ಧರ್ಮದ ಹೆಸರಿನಲ್ಲಿ ಒಡೆಯದೇ ಉದ್ಯೋಗದ ಹೆಸರಿನಲ್ಲಿ ಜೋಡಿಸಿ ಎಂದು ಒಗ್ಗೂಡಿಸಬೇಕಿದೆ.

ಕಳೆದ ಐದು ವರ್ಷಗಳಲ್ಲಿ ಎಲ್ಲ ವರ್ಗದ ಜನರು ಸಂಕಷ್ಟಗಳಿಗೆ ಒಳಗಾಗಿದ್ದರೂ ಬ್ಯಾಂಕ್‌ಗಳನ್ನು ಲೂಟಿ ಮಾಡಿರುವ ಶ್ರೀಮಂತರು ತಲೆಮರೆಸಿಕೊಂಡಿದ್ದರೂ ಅವರ ಲಕ್ಷಾಂತರ ಕೋಟಿ ಸಾಲ ಮೋದಿಯವರ ಸರ್ಕಾರ ಮನ್ನಾ ಮಾಡಿದ್ದೆ. ಎನ್‌ಡಿಎ ಆಳ್ವಿಕೆಯಲ್ಲಿ ವಿದ್ಯಾರ್ಥಿಗಳು ಅತ್ಯಂತ ಶೋಷಣೆಗೆ ಒಳಗಾಗಿದ್ದಾರೆ. ಆರ್‌ಎಸ್‌ಎಸ್–ಬಿಜೆಪಿಯವರ ನೀತಿಯಂತೆ ಇಡೀ ಸಮಾಜವನ್ನೇ ಕೋಮುವಾದಿಯನ್ನಾಗಿಸಿ 'ಹಿಂದುರಾಷ್ಟ್ರ' ಸ್ಥಾಪಿಸುವ ಹುನ್ನಾರವಿದೆ. ಕ್ಯಾಂಪಸ್‌ಗಳಲ್ಲಿನ ಪ್ರಜಾಪ್ರಭುತ್ವ ಮಾಯವಾಗಿದ್ದು ಭಯ ಮತ್ತು ಬೇಹುಗಾರಿಕಾ ವ್ಯವಸ್ಥೆ ಶಿಕ್ಷಣ ಸಂಸ್ಥೆಗಳನ್ನು ಆವರಿಸಿದೆ. ಮುಕ್ತ ಚರ್ಚೆ ಮಾಯವಾಗಿದೆ. ರೋಹಿತ್ ವೇಮುಲಾ ರವರ ಸಾಂಸ್ಥಿಕಾ ಕೊಲೆಗೆ ಕಾರಣರಾದ ಅಪರಾಧಿಗಳು ನಿರ್ಭೀತರಾಗಿದ್ದಾರೆ. ಜೆಎನ್‌ಯು ವಿದ್ಯಾರ್ಥಿ ನಜೀಮ್ ಅಹ್ಮದ್ ಎಬಿವಿಪಿ ದಾಳಿಗೆ ಒಳಗಾಗಿ ಇನ್ನು ಪತ್ತೆಯಾಗಿಲ್ಲ. ಸಾರ್ವಜನಿಕವಾಗಿದ್ದ ವಿಶ್ವವಿದ್ಯಾನಿಲಯಗಳನ್ನು ಖಾಸಗಿಯವರ ತೆಕ್ಕೆಗೆ ಹಾಕುವ ಇಚ್ಛಾ ಪೂರ್ವಕ ಕೆಲಸವಾಗಿದ್ದು ಅಕಾಡೆಮಿಕ್ ವಾತಾವರಣವನ್ನು ಕಟ್ಟಿಹಾಕಲಾಗಿದೆ.

ಇತ್ತೀಚಿನ ಸಚಿವ ಪಿಯೂಶ್ ಗೋಯಲ್‌ರವರ ಕೇಂದ್ರ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರದ ಬಗ್ಗೆ ಎರಡು ಸಾಲಿದ್ದು ಕಳೆದ ವರ್ಷದ ಬಜೆಟ್‌ಗಿಂತ ಕೇವಲ 10% ಹೆಚ್ಚಿದೆ. ಇದು ಜಿಡಿಪಿಯ 3.3% ರಷ್ಟಿದ್ದು ಬಿಜೆಪಿಯ 2014 ರ ಪ್ರಣಾಳಿಕೆಯಲ್ಲಿದ್ದ 6% ಗಿಂತ ಕಡಿಮೆಯಿದೆ. ಉನ್ನತ ಶಿಕ್ಷಣಕ್ಕಾಗಿ ಮೀಸಲಿದ್ದ 2750 ಕೋಟಿ ಪೈಕಿ ಕಳೆದ ವರ್ಷದಲ್ಲಿ ವೆಚ್ಚವಾಗಿರುವುದು ಕೇವಲ 250 ಕೋಟಿ.

ಒಂದು ಕಡೆ ಮೀಸಲಾತಿ ಇಲ್ಲದ ವರ್ಗಕ್ಕೆ 10% ಮೀಸಲಾತಿ ಕೊಡುವುದಾಗಿ ಬೊಬ್ಬೆ ಹೊಡೆಯುತ್ತಲೇ ವಿದ್ಯಾರ್ಥಿಗಳ ನೆರವಿಗಾಗಿರುವ ನಿಧಿ 2600 ಕೋಟಿಗಿಂತ 2306 ಕೋಟಿಗೆ ಇಳಿದಿದೆ. ಪ್ರಧಾನಮಂತ್ರಿ ವಿದ್ಯಾರ್ಥಿನಿಯರ ಹಾಸ್ಟೆಲ್‌ಗಾಗಿ ಕಳೆದ ವರ್ಷ 30 ಕೋಟಿ ಈಗ 13 ಕೋಟಿಗೆ ಇಳಿದಿದ್ದು ಮಹಿಳಾ ಸಬಲೀಕರಣದ ಜಂಬ ಹೊಡೆಯುವ ಸರ್ಕಾರದ ನಿಜರೂಪವಾಗಿದೆ. ಐಐಟಿ, ಯುಜಿಸಿ, ಐಸಿಟಿಯು ಮುಂತಾದ ಸಂಸ್ಥೆಗಳಿಗೂ ಬಜೆಟ್ ಕಡಿತ ಮಾಡಲಾಗಿದೆ. ಹಣದುಬ್ಬರ ಸಹಿತ ವಿದ್ಯಾರ್ಥಿಗಳಿಗೆ ಸಂಶೋಧಕರಿಗೆ ಸಂಕಷ್ಟ ತಂದಿದೆ.

ಶಿಕ್ಷಣ ಸಾಮಾಜಿಕ–ಆರ್ಥಿಕ ಚಲನೆಗೆ ಸಾಧ್ಯವಾಗಿದ್ದು ಶೋಷಿತ ವರ್ಗಗಳಿಗೆ ವರದಾನ ಆದರೆ ಮನುವಾದಿ ಸರ್ಕಾರ ನಿರ್ಲಕ್ಷಕ್ಕೆ ಒಳಗಾಗಿದ್ದ ಸಮುದಾಯಗಳಿಗೆ ಮಾರಕವಾಗಿದೆ. ರೋಹಿತ್ ವೇಮುಲಾರವರ ಮರಣಶಾಸನದಲ್ಲಿ "ನನಗೆ 7 ತಿಂಗಳ ಸ್ಕಾಲರ್‌ಶಿಪ್ ಹಣವಾದ 1,75,000/– ಬರಬೇಕಿದೆ. ಅದನ್ನು ನನ್ನ ಕುಟುಂಬಕ್ಕೆ ತಲುಪುವಂತೆ ನೋಡಿಕೊಳ್ಳಿ". ದಲಿತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಹಣ ದೊರೆಯದೆ ಹತಾಶರಾಗುತ್ತಿರುವುದು ಸರ್ಕಾರದ ನೀತಿಗೆ ಕೈಗನ್ನಡಿ. ಈಗ ನಡೆಯುತ್ತಿರುವ ಹಂಗಾಮಿ ಫಾಕಲ್ಟಿಯಿಂದ ವಿಧ್ಯಾಭ್ಯಾಸ ಮತ್ತು ಸಂಶೋಧನೆ ಮಟ್ಟ ಕುಸಿಯುತ್ತಿದೆ.

ಕೇಂದ್ರ ಸರ್ಕಾರ ಸ್ವಾಯುತ್ತತೆಯ ಹೆಸರಿನಲ್ಲಿ ಸ್ವಯಂ ಸಂಪನ್ಮೂಲಗಳನ್ನು ಕ್ರೋಡಿಕರಿಸುವ ಕೋರ್ಸ್‌ಗಳನ್ನು ಪ್ರಾರಂಭಿಸಲು ಹಸಿರು ನಿಶಾನೆ ತೋರಿದೆ. ಸರ್ಕಾರ ಸ್ವಾಯುತ್ತತೆಯಿಂದ ಹೆಚ್ಚಿನ ಅಕಾಡೆಮಿಕ್ ಹೆಚ್ಚಿನ ಸ್ವಾತಂತ್ರ ಮತ್ತು ಹೊಸದನ್ನು ಕಂಡುಹಿಡಿಯುವುದನ್ನು ಪ್ರೇರೇಪಿಸುವುದು ಎಂದೂ ವಾದಿಸಿದರೂ ಈ ರೀತಿಯ ಸ್ವಾಯುತ್ತತೆ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಅಸಮರ್ಪಕ ಅಧಿಕಾರ ದೊರೆತು, ಫೀಸು ಹೆಚ್ಚಿಸುವುದು, ಆಡಳಿತ ವೆಚ್ಚ ನಿರ್ಬಂದಂತಹ ಸ್ಥಿತಿ ಉಂಟಾಗುತ್ತಿದೆ. ಇದರಿಂದ ಕ್ಯಾಂಪಸ್‌ಗಳು ಕ್ಯಾಟಿಂಜಲ್ ಆಲೋಚನೆ. ಮುಕ್ತವಾಗಿ ಪ್ರಶ್ನಿಸುವ ಮತ್ತು ಪ್ರಜಾಪ್ರಭುತ್ವದ ಶವಾಗಾರಗಳಾಗಲಿದೆ.

ನಮ್ಮ ದೇಶದ ಶಿಕ್ಷಣ ವ್ಯವಸ್ಥೆ ಫೆಡರಲ್ ವ್ಯವಸ್ಥೆಗೆ ಮಾರಕವಾಗಿದೆ. ನೀಟ್ ನಂತಹ ಪರಿಕ್ಷೆಯಿಂದ ತಮಿಳುನಾಡು ವಿದ್ಯಾರ್ಥಿಗಳು ಹೊರಗುಳಿಯುವಂತಹ ವ್ಯವಸ್ಥೆ ನಿರ್ಮಾಣವಾಗಿದೆ. ಶಾಲಾ ಶಿಕ್ಷಣ ದುರ್ಬರ ಸ್ಥಿತಿಯಲ್ಲಿದೆ. 9 ಕೋಟಿ ಮಕ್ಕಳು ಶಾಲೆಗೆ ಇನ್ನೂ ಹೋಗುತ್ತಿಲ್ಲ ಇದು ವಿಶ್ವದಲ್ಲೇ ಹೆಚ್ಚು. ಗುಜರಾತ್‌ನಲ್ಲಿ ಒಟ್ಟು 32,000 ಸ್ಕೂಲ್‌ಗಳ ಪೈಕಿ 12,000 ಸಾವಿರ ಸರ್ಕಾರಿ ಶಾಲೆಗಳಿದ್ದು ಅಲ್ಲಿ ಕೇವಲ 1 ಅಥವಾ 2 ಅಧ್ಯಾಪಕರಿದ್ದಾರೆ. ಬುಡಕಟ್ಟು ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಫ್ ಸಿಗುತ್ತಿಲ್ಲ ಮತ್ತು ಅವರಿಗಾಗಿ ಇರುವ ಹಾಸ್ಟೆಲ್‌ಗಳ ಸ್ಥಿತಿ ಶೋಚನೀಯ. ಈ ವಿಷಯಗಳನ್ನು ಚರ್ಚಿಸಲಾಗುವುದಿಲ್ಲ. ಬದಲಿಗೆ ಪಟೇಲ್ ಮೂರ್ತಿಗಾಗಿ 2989 ಕೋಟಿ ವೆಚ್ಚ ಮಾಡಲಾಗಿದೆ. ಆ ವೆಚ್ಚದಲ್ಲಿ 2 ಐಐಟಿಗಳನ್ನು ಅಥವಾ 5 ಐಐಎಂ ಅಥವಾ 1 ಐಐಎಎಂಸ್ ಕಟ್ಟಿಸಬಹುದಿತ್ತು. ಎನ್‌ಡಿಎ ಘೋಷಣೆ 'ಮಗಳನ್ನು ಉಳಿಸಿ, ಮಗಳನ್ನು ಓದಿಸಿಗಾಗಿ ಮಾಡುವ ವೆಚ್ಚ ಆ ವಿಷಯದಲ್ಲಿ ನೀಡುವ ಜಾಹೀರಾತಿಗಿಂತ ಕಡಿಮೆ.

ಕೋಮುವಾದದಿಂದ ನಮ್ಮ ಜಾತ್ಯಾತೀತ ವ್ಯವಸ್ಥೆಗೆ ಧಕ್ಕೆಯಾಗಿದೆ. ಪಠ್ಯಕ್ರಮವನ್ನು ಬಿಜೆಪಿ ಆಡಳಿತವಿರುವ ಪ್ರದೇಶದಲ್ಲಿ ವಿಜ್ಞಾನ ಮತ್ತು ಚರಿತೆಯ ಜಾಗವನ್ನು ಮಿಥ್ಯೆಗಳ ಮತ್ತು ಪುರಾಣಗಳು ಆಕ್ರಮಿಸುತ್ತಿದೆ. ಚಾರಿತ್ರಿಕ ಸತ್ಯಗಳನ್ನು ತಿರುಚಿ ಪರಿಕ್ಷೆಗಳಲ್ಲಿ ಪ್ರಶ್ನೆಗಳನ್ನು ಕೇಳಲಾಗುತ್ತಿದೆ. ಇತ್ತೀಚಿನ ವಿಜ್ಞಾನ ಕಾಂಗ್ರೆಸ್‌ನಲ್ಲಿ ಆರ್‌ಎಸ್‌ಎಸ್ ಬೆಂಬಲಿಗರ ಸರ್ಕಸ್ ನಡೆದಿದ್ದು ಅವೈಜ್ಞಾನಿಕ ಚಿಂತನೆಗಳನ್ನು ಪ್ರತಿಪಾದಿಸಿ, ಐನ್‌ಸ್ಟೈನ್ ಸಾಪೇಕ್ಷಾ ಸಿದ್ಧಾಂತವನ್ನು ಮತ್ತು ನ್ಯೂಟನ್ ಗುರುತ್ವಾಕರ್ಷಣಾ ನಿಯಮವನ್ನು ಹೀಗಳೆದಿದ್ದಾರೆ.

ಇಂದು ಸಮರ ಎರಡು ಕಡೆಯಿಂದ ನಡೆಯಲಿದ್ದು ವಿದ್ಯಾರ್ಥಿಗಳು ವಿದ್ಯಾರ್ಥಿಪರ ಆಗ್ರಹಿಸುವ ನೀತಿಗಳಿಗಾಗಿ ನಡೆಯಬೇಕಿದೆ. ಶಿಕ್ಷಣ ನೀತಿಯನ್ನು ವಿದ್ಯಾರ್ಥಿಗಳು ಅಕಾಡೆಮಿಕ್ ಚಿಂತಕರು ಅಧ್ಯಾಪಕರು ರೂಪಿಸಬೇಕೇ ಹೊರತು ಆರ್‌ಎಸ್‌ಎಸ್ ನವರ ಆದೇಶದ ಮೇಲೆ ಅಲ್ಲ. ರೈತ ಮತ್ತು ಕಾರ್ಮಿಕರ ಐತಿಹಾಸಿಕ ಜಾಥಾ ನಂತರ ರಾಜಧಾನಿಯಲ್ಲಿ ಫೆಬ್ರವರಿ 18 ಮತ್ತು 19 ರಂದು ಪಾರ್ಲಿಮೆಂಟ್ ಚಲೋ ಕಾರ್ಯಕ್ರಮವನ್ನು ದೇಶದಾದಂತ್ಯ ಬಂದಿರುವ ವಿದ್ಯಾರ್ಥಿಗಳು ನಡೆಸಿದ್ದಾರೆ. "ಕೆಜಿಯಿಂದ ಪಿಜಿ ವರೆಗೆ ಉಚಿತ ಶಿಕ್ಷಣ" "ಪಾಠಶಾಲೆಗಳೇ ಹೊರತು ಗೋಶಾಲೆಗಳಲ್ಲ" 'ಶಿಕ್ಷಣ ಉಳಿಸಿ' "ಪ್ರಜಾಪ್ರಭುತ್ವ ಉಳಿಸಿ" ಮುಖ್ಯ ಘೋಷಣೆಗಳಾಗಲಿದೆ. ಈ ನಡೆ ಪರ್ಯಾಯ ಶಿಕ್ಷಣ ದೃಷ್ಟಿಕೋನದ ಮುಖಾಂತರ ಉತ್ತಮ ಭಾರತ ನಿರ್ಮಾಣದ ಕಡೆಗೆ ಸಾಗಲಿದೆ. •






## ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿದ್ಯಾರ್ಥಿಗಳ ಪ್ರತಿಭಟನೆ : SFI ಬೆಂಬಲ

ಬೆಂಗಳೂರು ಡಾ. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ನ ದುರ್ಬಲ ಆಡಳಿತದ ವಿರುದ್ಧ ವಿದ್ಯಾರ್ಥಿಗಳು ದೀಢರ್ ಪ್ರತಿಭಟನೆ ನಡೆಸುತ್ತಿದ್ದಾರೆ.

ಪರೀಕ್ಷಾ ನಿಯಂತ್ರಕರಾದ ಮಣಿಕಾ ಗಿರಿನಾಥ್ (ಐಎಎಸ್ ಅಧಿಕಾರಿ ಕುಶಾಲ್ ಗಿರಿನಾಥ್ ಅವರ ಪತ್ನಿ)

ಮಾನಸಿಕವಾಗಿ ವಿದ್ಯಾರ್ಥಿಗಳಿಗೆ ಚಿತ್ರಹಿಂಸೆ ನೀಡುತ್ತಿದ್ದಾರೆ. ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಬೆದರಿಕೆ ಹಾಕುತ್ತಿದ್ದಾರೆ ಇದನ್ನು ಖಂಡಿಸಿ ಸ್ಕೂಲ್ ಆಫ್ ಎಕನಾಮಿಕ್ಸ್ ವಿಭಾಗದ ಮುಂದೆ ಪ್ರತಿಭಟನೆ ನಡೆಸುತ್ತಿದೆ. ಪ್ರತಿಭಟನೆಯನ್ನು ಬೆಂಬಲಿಸಿ SFI ರಾಜ್ಯ ಮುಖಂಡ ಭೀಮನಗೌಡ ಮಾತನಾಡಿದರು. •



# 12 ಕಾರ್ಪೋರೇಟ್ ಕುಳಗಳ ಸಾಲಹೊರೆ 10 ರಾಜ್ಯಗಳ ರೈತರ ಸಾಲಮನ್ನಾದ 2 ಪಟ್ಟು!

## ಕಾರ್ಪೋರೇಟ್ ವಲಯದ 'ನೋವು'ಗಳ ಬಗ್ಗೆ ಸಹಾನುಭೂತಿ, ಕೃಷಿ ವಲಯದಲ್ಲಿ 'ದುಂದುಗಾರಿಕೆ'ಯ ಆರೋಪ!

2017-18ರ ಹಣಕಾಸು ವರ್ಷದಲ್ಲಿ ಮತ್ತು ಇದುವರೆಗೆ 10 ರಾಜ್ಯ ಸರಕಾರಗಳು ಒಟ್ಟು 1,84,800 ಕೋಟಿ ರೂ.ಗಳಷ್ಟು ರೈತರ ಸಾಲಗಳ ಮನ್ನಾದ ಘೋಷಣೆ ಮಾಡಿವೆ. ಕಾರ್ಪೊರೇಟ್ ಮಾಧ್ಯಮಗಳು ಇದರಿಂದ ದೇಶದ ಆರ್ಥಿಕ ವ್ಯವಸ್ಥೆಗೆ ಭಾರೀ ಏಟು ಬೀಳುತ್ತಿದೆ ಎಂದು ಎದೆ ಬಡಿದುಕೊಳ್ಳುತ್ತಿವೆ. ಆದರೆ ಇದೇ ಅವಧಿಯಲ್ಲಿ 12 ಅತಿ ದೊಡ್ಡ ಕಾರ್ಪೊರೇಟ್ ಬ್ಯಾಂಕ್ ಸುಸ್ತಿದಾರರ ಮರುಪಾವತಿಯಾಗದ ಸಾಲಗಳಿಂದ ದೇಶದ ಖಜಾನೆಗೆ ಇದರ ದುಪ್ಪಟ್ಟು, ಅಂದರೆ, 3,45,000 ಕೋಟಿ ರೂ. ನಷ್ಟವಾಗಿದೆ ಎಂದು ಇಬ್ಬರು ಅಧ್ಯಯನಕಾರರು ಹೇಳಿದ್ದಾರೆ (ಪ್ರೊ. ರೋಹಿತ್ ಪ್ರಸಾದ್ ಮತ್ತು ಗೌರವ್ ಗುಪ್ತ, ಇಂಡಿಯಾಸ್ಪೆಂಡ್, ಫೆ.18). ದೇಶದ ಅತಿ ದೊಡ್ಡ 10 ಕಾರ್ಪೊರೇಟ್‌ಗಳ ಒಟ್ಟು ಸಾಲವಂತೂ ನಾಲ್ಕು ಪಟ್ಟು, ಅಂದರೆ 7,31, 000 ಕೋಟಿ ರೂ.ಗಳು!

**ಈ ನಡುವೆ, 12 ಬ್ಯಾಂಕುಗಳ 'ಮರುಬಂಡವಾಳೀಕರಣ'ಕ್ಕೆಂದು 48,239 ಕೊಟಿ ರೂ. ನೀಡುವುದಕ್ಕೆ ಸರಕಾರ ಮಂಜೂರಾತಿ ನೀಡಿದೆ ಎಂಬ ಸುದ್ದಿ ಬಂದಿದೆ.** ರೈತರ ಸಾಲಮನ್ನಾದ ಬಗ್ಗೆ ಹೌಹಾರುವ ಮಂದಿ ಈ 'ಮರುಬಂಡವಾಳೀಕರಣ'ವನ್ನು ಸ್ವಾಗತಿಸುತ್ತಾರೆ. ಆದರೆ ಈ ಹಣವೂ ಖಜಾನೆಯಿಂದ ಬರುವಂತದ್ದಾದ್ದರಿಂದ ಕಾರ್ಪೊರೇಟ್‌ಗಳು ಬ್ಯಾಂಕುಗಳಿಗೆ ಮಾಡಿರುವ ನಷ್ಟವನ್ನು ತುಂಬಲೆಂದು ದೇಶದ ಖಜಾನೆಗೆ ಮಾಡುತ್ತಿರುವ ನಷ್ಟವಲ್ಲವೇ ಎಂದು ಈ ಅಧ್ಯಯನಕಾರರು ಪ್ರಶ್ನಿಸುತ್ತಾರೆ. ಇದಕ್ಕೆ ಮೊದಲು ಕಾರ್ಪೊರೇಟ್‌ಗಳ ಸುಸ್ತಿ ಸಾಲಗಳಿಂದ ಸುಸ್ತಾಗಿರುವ 20 ಸಾರ್ವಜನಿಕ ವಲಯದ ಬ್ಯಾಂಕುಗಳ 'ಮರುಬಂಡವಾಳೀಕರಣ'ಕ್ಕೆ ನವಂಬರ್ 2018ರ ವರೆಗೆ 1,28,000 ಕೋಟಿ ರೂ.ಗಳನ್ನು ನೀಡಲಾಗಿತ್ತು(ಬಿಸಿನೆಸ್ ಟುಡೇ, ಡಿ.19)

ಅಂದರೆ ಕಾರ್ಪೊರೇಟ್ ಕುಳಗಳ ಬಾಕಿ ಸಾಲಗಳನ್ನು ವಸೂಲಿ ಮಾಡಲಾಗದ, ಅಥವ ಹಿಂಜರಿವ ಅಚ್ಛೇ ದಿನ್ ಸರಕಾರ ಅಕ್ಟೋಬರ್ 2017ರಲ್ಲಿ ಈ 'ಮರುಬಂಡವಾಳೀಕರಣ'ದ ಘೋಷಣೆ ಮಾಡಿದ ಮೇಲೆ ಇದುವರೆಗೆ ಆ ಹೆಸರಿನಲ್ಲಿ ಸುಮಾರು ರೈತರ ಸಾಲಮನ್ನಾದಷ್ಟೇ ಮೊತ್ತವನ್ನು ದೇಶದ ಖಜಾನೆಯಿಂದ ಕೊಡಮಾಡಿದಂತಾಗಿದೆ!

ಈ ಬ್ಯಾಂಕುಗಳ ಅತಿ ದೊಡ್ಡ 10 ಕಾರ್ಪೊರೇಟ್ ಸಾಲಗಾರರಿಗೆ ಅವು ಮಾರ್ಚ್ 2015ರಲ್ಲಿ 7,00,000 ಕೋಟಿ ರೂ.ಗಳ ಸಾಲ ನೀಡಿದ್ದವು. ಅದು ಕೈಗಾರಿಕೆಗಳಿಗೆ ನೀಡಿದ ಒಟ್ಟು ಸಾಲಗಳ 27%. ಮಾರ್ಚ್ 2017ರ ವೇಳೆಗೆ ಒಟ್ಟು ಬ್ಯಾಂಕ್ 'ಕೆಟ್ಟ' ಸಾಲಗಳ, ಅಂದರೆ ಮರುಪಾವತಿಯಾಗುವ ನಿರೀಕ್ಷೆಯಿಲ್ಲದ ಸಾಲಗಳ ಮೊತ್ತ 8,00,000 ಕೋಟಿ ರೂ.ಗಳಾಗಿದ್ದರೆ, ಮಾರ್ಚ್ 2018ರ ವೇಳೆಗೆ ಅದು 10,03,000 ಕೋಟಿಗೇರಿತು. ದೊಡ್ಡ ಸಾಲಗಾರರ 'ಕೆಟ್ಟ' ಸಾಲಗಳ ಪ್ರಮಾಣ ವರ್ಷೇ-ವರ್ಷೇ ಏರುತ್ತಿದೆ. ಮಾರ್ಚ್ 2017ರಲ್ಲಿ ಅದು 70% ಇತ್ತು ಎನ್ನುತ್ತಾರೆ ಈ ಇಬ್ಬರು ಅಧ್ಯಯನಕಾರರು.

ಇಷ್ಟೇ ಅಲ್ಲ, ಈ ಕೆಟ್ಟ ಸಾಲಗಳಲ್ಲಿ 25% ಕೇವಲ 12 ದೊಡ್ಡ ಕಾರ್ಪೊರೇಟ್‌ಗಳದ್ದಾಗಿದ್ದು ಅವನ್ನು ವಸೂಲಿಗೆ ಅಥವ ಇತ್ಯರ್ಥಕ್ಕೆ (ಅಂದರೆ ಬ್ಯಾಂಕುಗಳು ಎಷ್ಟು ಕಳಕೊಳ್ಳಬೇಕು ಎಂದು ನಿರ್ಧರಿಸಲು!) ರಾಷ್ಟ್ರೀಯ ಕಂಪನಿ ಕಾಯ್ದೆ ಟ್ರಿಬ್ಯುನಲ್‌ಗೆ ಕಳಿಸಲಾಯಿತು. ಇವುಗಳಲ್ಲಿ 4 ನ್ನು ಇತ್ಯರ್ಥಮಾಡಲಾಗಿದ್ದು, ಅವುಗಳ ಬಾಕಿಯ ಸುಮಾರು 52% ಮಾತ್ರ ವಸೂಲಾಗಿದೆ. ಇನ್ನು ಉಳಿದ 8 ದೊಡ್ಡ ಕಾರ್ಪೊರೇಟ್‌ಗಳ ಒಟ್ಟು ಸಾಲ ಬಾಕಿ 3,00,000 ಕೋಟಿ ರೂ. ಅಂದರೆ, ಆರಂಭದಲ್ಲಿ ಹೇಳಿದಂತೆ 10 ರಾಜ್ಯಗಳ ರೈತರ ಸಾಲಮನ್ನಾದ ದುಪ್ಪಟ್ಟು!

ಇವೆಲ್ಲದರಲ್ಲಿ ಸರಕಾರದ ಧೋರಣೆಗಳದ್ದು ಪ್ರಮುಖ ಪಾತ್ರ ಎಂದು ಈ ಅಧ್ಯಯನಕಾರರಿಗೆ ಕಂಡಿದೆ. ಆಹಾರ ಬೆಲೆಗಳನ್ನು ತಡೆದಿಡಲು ರೈತರ ಮೇಲೆ ಮತ್ತು ಬಳಕೆದಾರರ ಮೇಲೆ ಮಿತಿಗಳನ್ನು ಹಾಕುವ ಧೋರಣೆಗಳನ್ನು ಸರಕಾರ ಅನುಸರಿಸಿದೆ. ಇದರಿಂದಾಗಿ ಭಾರತೀಯ ರೈತರು 2014ರಿಂದ 2016ರ ನಡುವೆ 1,65,000 ಕೋಟಿ ರೂ.ಗಳನ್ನು ಕಳಕೊಂಡಿದ್ದಾರೆ ಎಂದು ಒ.ಇ.ಸಿ.ಡಿ.(ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿಯ ಅಂತರ್‍ರಾಷ್ಟ್ರೀಯ ಸಂಘಟನೆ) ಲೆಕ್ಕ ಹಾಕಿದೆಯಂತೆ.

ಒಟ್ಟಿನಲ್ಲಿ, ಕೃಷಿ ಮತ್ತು ಕಾರ್ಪೊರೇಟ್ ವಲಯಗಳ ಸಂರಚನಾ ಸಮಸ್ಯೆಗಳನ್ನು ಸಮಾನ ತುರ್ತಿನಿಂದ ನಿಭಾಯಿಸಬೇಕಾಗಿದೆ ಎನುವ ಈ ಇಬ್ಬರು ಅಧ್ಯಯನಕಾರರು, ಕಾರ್ಪೊರೇಟ್ ವಲಯದ 'ನೋವು'ಗಳ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುವುದು, ಅದೇ ವೇಳೆಗೆ ಕೃಷಿ ವಲಯದಲ್ಲಿ ದುಂದುಗಾರಿಕೆಯಿದೆ ಎಂದು ಹೀಗಳೆಯುವುದು ಸರಿಯಲ್ಲ ಎನ್ನುತ್ತಾರೆ.

ಆದರೆ ಇದೇ ಈ ಐದು ವರ್ಷಗಳ ಅಚ್ಛೇದಿನ್‌ಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಾಗಿ ಎದ್ದು ಕಂಡಿರುವ ಸಂಗತಿ.

# ಕೊನೆಗೂ ಸರಕಾರದ 'ರಕ್ಷಣೆ'ಗೆ ಧಾವಿಸಿದ ರಿಝರ್ವ್ ಬ್ಯಾಂಕ್ !

ಹಿಂದಿನ ಎರಡು ರಿಝರ್ವ್ ಬ್ಯಾಂಕ್(ಆರ್‌ಬಿಐ) ಗವರ್ನರುಗಳ ಜತೆ ತೆರೆಮರೆಯ ಕಿತ್ತಾಟ ಮತ್ತು ರಾಜೀನಾಮೆಗಳ ನಂತರ ಈಗ ತಾವು ನೇಮಿಸಿರುವ ಗವರ್ನರ್, ನಿರೀಕ್ಷಿಸಿದಂತೆ ಕೊನೆಗೂ ಸರಕಾರವನ್ನು ಕಾಪಾಡಲು ಧಾವಿಸಿದ್ದಾರೆ. ಆರ್‌ಬಿಐ ಸರಕಾರಕ್ಕೆ 28,000 ಕೋಟಿ ರೂ.ಗಳನ್ನು 'ಮಧ್ಯಂತರ ಲಾಭಾಂಶ'ವಾಗಿ ವರ್ಗಾವಣೆ ಮಾಡಲು ಆರ್‌ಬಿಐ ನಿರ್ಧರಿಸಿರುವುದಾಗಿ ವರದಿಯಾಗಿದೆ(ಫೆ.18).

ಇದರೊಂದಿಗೆ, ಅಚ್ಛೇ ದಿನ್ ಸರಕಾರ ಮತ್ತೊಂದು ದಾಖಲೆ ನಿರ್ಮಿಸಿದೆ! ಕಳೆದ ಐದು ವರ್ಷಗಳಲ್ಲಿ ಅದು ಆರ್‌ಬಿಐನಿಂದ 2.93 ಲಕ್ಷ ಕೋಟಿ ರೂ.ಗಳನ್ನು ಪಡೆದಿದೆ! ಹಿಂದಿನ ಯಾವ ಸರಕಾರಕ್ಕೂ ಇದು 'ಸಾಧ್ಯ'ವಾಗಿರಲಿಲ್ಲ. ನಿಜ, ಹಾಗೆಂದು ಪ್ರಧಾನಿಗಳೇನೂ ಹೇಳಿಕೊಂಡಿಲ್ಲ.


ಹಿಂದಿನ ಯುಪಿಎ-2 ಸರಕಾರ ಐದು ವರ್ಷಗಳಲ್ಲಿ ರಿಝರ್ವ್ ಬ್ಯಾಂಕಿನಿಂದ ತೆಗೆದುಕೊಂಡ ಲಾಭಾಂಶದ ಪಾಲು ಒಟ್ಟು ರೂ. 1.08 ಲಕ್ಷ ಕೋಟಿ ಮಾತ್ರ. ಹಿಂದಿನ ಸರಕಾರಗಳು ಆರ್‌ಬಿಐನ ಲಾಭಗಳಿಂದ ಅರ್ಧದಷ್ಟನ್ನು ಮಾತ್ರ ಕೇಳಿದ್ದವು. ಆದರೆ ಅಚ್ಛೇ ದಿನ್ ಸರಕಾರ ಆರ್‌ಬಿಐ ತನ್ನ ಲಾಭಗಳನ್ನೆಲ್ಲವನ್ನೂ ಸರಕಾರಕ್ಕೆ ವರ್ಗಾಯಿಸಬೇಕು ಎಂದು ಆಗ್ರಹಿಸುತ್ತಿತ್ತಂತೆ.

ಕಳೆದ 10 ವರ್ಷಗಳಲ್ಲಿ ಆರ್‌ಬಿಐ ಮಾಡಿದ ಲಾಭಾಂಶಗಳ ವರ್ಗಾವಣೆಯ ಮೊತ್ತಗಳು (ಸಾವಿರ ಕೋಟಿ ರೂ.ಗಳಲ್ಲಿ)


| ಯುಪಿಎ-2 ಸರಕಾರ | | ಅಚ್ಛೇ ದಿನ್ ಸರಕಾರ | |
|---|---|---|---|
| 2009-10 | 25.01 | 2014-15 | 52.68 |
| 2010-11 | 18.76 | 2015-16 | 65.90 |
| 2011-12 | 15.01 | 2016-17 | 65.88 |
| 2012-13 | 16.01 | 2017-18 | 40.66 |
| 2013-14 | 33.01 | 2018-19 | 68.00 |
| ಒಟ್ಟು | 107.8 | | 293.12 |

ಈ ಹಣವನ್ನು ಜನಸಾಮಾನ್ಯರ ಅಚ್ಛೇ ದಿನ್‌ಗಳಿಗಾಗಿ ಬಳಸಲು ಕೇಳಿದ್ದರೆ ಆ ಬಗ್ಗೆ ಆಕ್ಷೇಪವೇನೂ ಇರುತ್ತಿರಲಿಲ್ಲ. ಆದರೆ ಹಾಗಾಗಿಲ್ಲ ಎಂದು ಈ ಐದು ವರ್ಷಗಳ ಕೊನೆಯಲ್ಲಿ ಎಲ್ಲರಿಗೂ ಸ್ಪಷ್ಟವಾಗಿದೆ. ಕಾರ್ಪೊರೇಟ್‌ಗಳಿಗೆ ತೆರಿಗೆ ರಿಯಾಯ್ತಿ/ವಿನಾಯ್ತಿಗಳ ಬಕ್ಷೀಸುಗಳು, ಜಿಎಸ್‌ಟಿ ಜಾರಿಯಲ್ಲಿನ ವಿಫಲತೆಗಳು ಮತ್ತಿತರ ಸಂದರ್ಭಸಾಧಕ ಧೋರಣೆಗಳಿಂದಾಗಿ ಆಗಿರುವ ದುಂದುಗಾರಿಕೆಯನ್ನು ತುಂಬಲು ಆರ್‌ಬಿಐ ನ್ನು ಹಿಂಡಲಾಗುತ್ತಿದೆ ಎಂದು ಹಲವು ಪರಿಣಿತರು ಹೇಳುತ್ತಿದ್ದಾರೆ. ಈಗ ಚುನಾವಣೆಗಳ ಮೊದಲು, ಈ ಐದು ವರ್ಷಗಳಿಂದ ನಿರ್ಲಕ್ಷಿಸಿದ್ದ ವಿಭಾಗಗಳಿಗೆ ತೋರಿಸಿರುವ 'ಅಮಿಷ'ಗಳಿಗೂ ಅದಕ್ಕೆ ಹಣ ಬೇಕಾಗಿದೆ. ಉದಾಹರಣೆಗೆ, 'ಪ್ರಧಾನ ಮಂತ್ರಿ ಕೃಷಿ ಸಮ್ಮಾನ್ ನಿಧಿ'ಗೆ ತನ್ನ ಆಳ್ವಿಕೆಯಲ್ಲಿ ಉಳಿದಿರುವ ಎರಡು ತಿಂಗಳಲ್ಲೇ 20,000 ಕೋಟಿ ರೂ. ಹೆಚ್ಚುವರಿ ವೆಚ್ಚವನ್ನು ಮುಂದಿನ ಹಣಕಾಸು ವರ್ಷದ ಬಜೆಟಿನ 2018-19ರ ಪರಿಷ್ಕೃತ ಅಂದಾಜಿನಲ್ಲಿ ತೋರಿಸಿದೆ. ಆದರೆ ಇದಕ್ಕೆ ಆ ಬಜೆಟಿನಲ್ಲಿ ಹಣ ನೀಡಿರಲಿಲ್ಲ! ಅದನ್ನೀಗ ಆರ್‌ಬಿಐನ ಲಾಭಾಂಶದಿಂದ ಹಿಂಡಿಕೊಳ್ಳಲಾಗಿದೆ. ಇದರ ಸಂಕೇತ ಮಧ್ಯಂತರ ಬಜೆಟಿನಲ್ಲಿ ಇತ್ತು ಎನ್ನುತ್ತಾರೆ ಪರಿಣಿತರು. 2018-19ರ ಬಜೆಟಿನಲ್ಲಿ ಆರ್‌ಬಿಐ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳಿಂದ ಲಾಭಾಂಶಗಳ ಆದಾಯ 54,817 ಕೋಟಿ ರೂ. ಎಂದಿತ್ತು. ಮಧ್ಯಂತರ ಬಜೆಟಿನ 2018-19ರ ಪರಿಷ್ಕೃತ ಅಂದಾಜಿನಲ್ಲಿ ಅದು 74,140 ಕೋಟಿಗೇರಿದೆ.

ಮೋದಿ ಸರಕಾರದ 'ದುಂದುಗಾರಿಕೆ'ಗೆ ಆರ್‌ಬಿಐ ಭಾಗಶಃ ಸಬ್ಸಿಡಿ ನೀಡಿರುವಂತೆ ಕಾಣುತ್ತದೆ, ಆದರೆ ಈ ದುಂದುಗಾರಿಕೆ ಜನಸಾಮಾನ್ಯರ ಒಳಿತಿಗಾಗಿ ಅಲ್ಲ, ಮುಖ್ಯವಾಗಿ ಕಾರ್ಪೊರೇಟ್ ಜಗತ್ತಿಗಾಗಿ, ಜತೆಗೆ ಚುನಾವಣೆಗಳ ಮೊದಲು ಜನಗಳ ಮೂಗಿಗೆ ತುಪ್ಪ ಸವರಲಿಕ್ಕಾಗಿ ಎಂದಿದ್ದಾರೆ ಒಬ್ಬ ಪರಿಣಿತರು (ನ್ಯೂಸ್‌ಕ್ಲಿಕ್, ಫೆ.19).




ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್




# ನೋಟು ರದ್ದತಿಯ ನಂತರವೂ ಕಪ್ಪುಹಣದ್ದೇ ದರ್ಬಾರ್ ಪ್ರದರ್ಶಿಸಿದ "ಆಪರೇಷನ್ ಕರವೊಕೆ"

ಕುಟುಕು ಕಾರ್ಯಾಚರಣೆಗೆ ಹೆಸರಾಗಿರುವ ಕೋಬ್ರಾಪೋಸ್ಟ್ ಈ ವಾರ ಮತ್ತೊಂದು ಕುಟುಕು ಕಾರ್ಯಾಚರಣೆಯ ಫಲಿತಾಂಶವನ್ನು ಪ್ರಕಟಿಸಿದೆ.

ಒಂದು ಪಿಆರ್(ಸಾರ್ವಜನಿಕ ಸಂಬಂಧಗಳ) ಸಂಸ್ಥೆ ಎಂದು ಹೇಳಿಕೊಂಡು ಇವರು ಬಾಲಿವುಡ್ ಪ್ರತಿಷ್ಠಿತರನ್ನು ಅವರ ಏಜೆಂಟರುಗಳ ಮೂಲಕ ಸಂಪರ್ಕಿಸಿ ತಮ್ಮದು ಅಧಿಕೃತ ರಾಜಕೀಯ ಪ್ರಚಾರ ಅಲ್ಲ, ಹಿಂಬಾಗಿಲಿನ ನಿರ್ದಿಷ್ಟ ಅಜೆಂಡಾ-ಚಾಲಿತ ಚುನಾವಣಾ-ಪೂರ್ವ ತಂತ್ರ ಎಂದು ಹೇಳಿಕೊಂಡಿತು. ರಾಜಕೀಯ ಪಕ್ಷಗಳ ಪರವಾಗಿ ಅಭಿಪ್ರಾಯಗಳನ್ನು ತಮ್ಮ ಸ್ವಂತ ಅಭಿಪ್ರಾಯವೆಂಬಂತೆ ಟ್ವಿಟರ್, ಫೇಸ್‌ಬುಕ್, ಇನ್ಸ್‌ಟಗ್ರಾಂ ನಲ್ಲಿ ಪೋಸ್ಟ್ ಮಾಡಬೇಕು, ಅದಕ್ಕೆ ಪ್ರತಿಯಾಗಿ ಹಣ ಕೊಡಲಾಗುವುದು ಎಂದಾಗ 36 ಮಂದಿ ಪ್ರತಿಷ್ಠಿತರು ಅದಕ್ಕೆ ಸಿದ್ಧರಾದರು ಎಂದಿದೆ. ಕೆಲವರಂತೂ ಹಣ ಪಡೆಯುವ ಮೊದಲೇ ಟ್ವಿಟ್‌ಗಳನ್ನು ಮಾಡಿದರು. ಅವರು ಈಗಾಗಲೇ ಇಂತಹ ಕಸರತ್ತುಗಳಲ್ಲಿ ಭಾಗವಹಿಸಿದವರು.

ಮುಖ್ಯವಾಗಿ ಬಿಜೆಪಿ ಮತ್ತು ಎಎಪಿ, ಕೆಲವರು ಕಾಂಗ್ರೆಸಿಗೂ ಬೆಂಬಲವಾಗಿ ಟ್ವಿಟ್ ಇತ್ಯಾದಿ ಮಾಡಲು ಸಿದ್ಧರಾದರು. ಈ 36 ರಲ್ಲಿ ಬಿಜೆಪಿ ಅಭಿಮಾನಿಗಳ ಸಂಖ್ಯೆಯೇ ಹೆಚ್ಚಿದ್ದಂತೆ ಕಾಣುತ್ತದೆ. ಗಾಯಕ ಅಭಿಜಿತ್ ಭಟ್ಟಾಚಾರ್ಯ, ಕೈಲಾಶ್ ಖೇರ್ ಮತ್ತಿತರ ಹಲವರು ಇದ್ದಾರೆ.

ಪ್ರತಿಫಲದ ಮೊತ್ತ 2 ಲಕ್ಷದಿಂದ 50 ಲಕ್ಷ ರೂ, ವರೆಗೂ ಇತ್ತು. ಕೆಲವರು ಕೋಟಿ-ಕೋಟಿ ರೂ.ಗಳನ್ನೂ ಕೇಳಿದರು. ಇದರಲ್ಲಿ ಬಹುಪಾಲು 80%ದಷ್ಟು ನಗದು, ಅಂದರೆ ಕಪ್ಪು ಹಣ. ಕಪ್ಪುಹಣದ ಪ್ರತಿಫಲದಿಂದ ಬಿಜೆಪಿಯ ಅಭಿಮಾನಿಗಳೂ ಸೇರಿದಂತೆ ಈ ಮಂದಿಯಲ್ಲಿ ಯಾರಿಗೂ ಯಾವ ಮುಜುಗರವೂ ಆದಂತಿಲ್ಲ.

ಮನರಂಜನಾ ಉದ್ಯಮದಲ್ಲಿ ನೋಟುರದ್ಧತಿಯಿಂದ ಏನೂ ಪರಿಣಾಮವಾದಂತೆ ಕಾಣುತ್ತಿಲ್ಲ ಎಂಬುದನ್ನು ಆಪರೇಷನ್ ಕರವೊಕೆ ಮತ್ತೊಮ್ಮೆ ನೆನಪಿಸಿದೆ ಎಂದು ಕೋಬ್ರಾಪೋಸ್ಟ್ ಈ ಕುರಿತ ತನ್ನ ವರದಿಯಲ್ಲಿ ಹೇಳಿದೆ. ಹೆಚ್ಚಿನ ಪ್ರತಿಷ್ಠಿತರು ಬಹುಪಾಲು 'ಪ್ರತಿಫಲ'ವನ್ನು ಕಪ್ಪುಹಣದ ರೂಪದಲ್ಲೇ ಕೇಳಿದರು, ಕೆಲವರಂತೂ ಪೂರ್ಣವಾಗಿ ನಗದು ಕೊಡಿ ಎಂದರು.

ಸುದ್ದಿ-1, ನವಂಬರ್ 25, 2018: ರಿಲಯಂಸ್ ಗುಂಪಿನ ಅಧ್ಯಕ್ಷ, ಪ್ರಧಾನ ಮಂತ್ರಿಗಳಿಗೆ ಆಪ್ತರು ಎಂದೆನಿಸಿರುವ ಕೈಗಾರಿಕೋದ್ಯಮಿ ಮತ್ತು ರಫೆಲ್ ವ್ಯವಹಾರದಲ್ಲಿ ಹೆಚ್‌ಎಎಲ್ ಸ್ಥಾನದಲ್ಲಿ ಡಸ್ಸಾಲ್ಟ್ ಕಂಪನಿಯ ಭಾಗೀದಾರನಾಗಿ ಆಯ್ಕೆಯಾಗಿರುವ ಅನಿಲ್ ಅಂಬಾನಿ, ಮುಖ್ಯವಾಗಿ ಈ ಕುರಿತು ಮಾತನಾಡಿದವರ ವಿರುದ್ಧ ಸೇರಿದಂತೆ, ಜನವರಿ 2018ರಿಂದ ಒಟ್ಟು 28 ಮಾನನಷ್ಟ ಮೊಕದ್ದಮೆಗಳನ್ನು ಅಹಮದಾಬಾದ್‌ನ ಕೋರ್ಟುಗಳಲ್ಲಿ ಹಾಕಿದ್ದಾರೆ. ಈ ಮೊಕದ್ದಮೆಗಳ ಮೂಲಕ ಆತ ಕೇಳಿರುವ ಪರಿಹಾರದ ಒಟ್ಟು ಮೊತ್ತ 75,000 ಕೋಟಿ ರೂ.ಗಳಷ್ಟಾಗುತ್ತದೆ.

ಸುದ್ದಿ-2, ಫೆಬ್ರುವರಿ 20, 2019 ರಿಲೈಯನ್ಸ್ ಕಮ್ಯುನಿಕೇಶನ್ಸ್ ಕಂಪನಿಯ ಅಧ್ಯಕ್ಷ ಅನಿಲ್ ಅಂಬಾನಿ ನ್ಯಾಯಾಂಗ ನಿಂದನೆಯ ಅಪರಾಧ ಎಸಗಿದ್ದಾರೆ ಎಂದು ಸುಪ್ರಿಂ ಕೋರ್ಟ್ ಹೇಳಿದೆ. ಸ್ವೀಡನ್‌ನ ಟೆಲಿಕಾಂ ಕಂಪನಿ ಎರಿಕ್‌ಸನ್ ಕಂಪನಿಗೆ ನಾಲ್ಕು ವಾರಗಳಲ್ಲಿ 453 ಕೋಟಿ ರೂ. ಪಾವತಿ ಮಾಡದಿದ್ದರೆ, ಆತ ಮೂರು ತಿಂಗಳ ಜೈಲುವಾಸ ಅನುಭವಿಸಬೇಕಾಗುತ್ತದೆ ಎಂದು ಅದು ಹೇಳಿದೆ. ಆತನ ಕುಪ್ರತಿಷ್ಠೆಯ ನಿಲುವಿಗಾಗಿ ಆತನಿಗೆ ಮತ್ತು ಆತನ ಇಬ್ಬರು ನಿರ್ದೇಶಕರಿಗೆ ತಲಾ 1 ಕೋಟಿ ರೂ. ದಂಡ ವಿಧಿಸಲಾಗಿದೆ. ಸುಪ್ರಿಂ ಕೋರ್ಟಿಗೆ ಕೊಟ್ಟಿದ್ದ ವಚನವನ್ನು ಮುರಿದಿದ್ದಾರೆ, ಎರಿಕ್‌ಸನ್ ಕಂಪನಿಗೆ ಆ ಹಣ ತೆರಬೇಕೆಂಬ ಸುಪ್ರಿಂ ಕೋರ್ಟಿನ ಆದೇಶಕ್ಕೆ ಬೇಕೆಂದೇ ಅವಿಧೇಯತೆಯಿಂದ ನಡೆದು-ಕೊಂಡಿದ್ದಾರೆ ಎಂದು ನ್ಯಾಯಾಲಯ ಹೇಳಿದೆ.

ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫೈ.ಕಾಂ



# ಕಲ್ಯಾಣ ವೆಚ್ಚಗಳಿಗೆ ಸಂಪನ್ಮೂಲಗಳು ನಿಜವಾಗಿಯೂ ಇಲ್ಲವೇ?




ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ರಾಜಕೀಯ ಹಕ್ಕುಗಳಿಗೆ ಸರಿಸಮಾನವಾಗಿ, ನಾಗರಿಕರ ಈ ಆರ್ಥಿಕ ಹಕ್ಕುಗಳ ಪ್ರಶ್ನೆಯನ್ನು ಎತ್ತಿದಾಗಲೆಲ್ಲ ಸಾಮಾನ್ಯವಾಗಿ ಕೇಳುವ ಪ್ರಶ್ನೆ: ಇದಕ್ಕೆ ಸಂಪನ್ಮೂಲ ಎಲ್ಲಿದೆ? ಈ ಪ್ರಶ್ನೆ ಕೇಳುವವರ ಆಶಯ ಎಷ್ಟೇ ಅಪ್ರಾಮಾಣಿಕವಾಗಿರಲಿ, ಅದಕ್ಕೆ ಒಂದು ಸ್ಥೂಲ ಉತ್ತರವನ್ನು ಒದಗಿಸುವುದು ಒಳ್ಳೆಯದು.

ಭಾರತದ ಹಿಡಿಯಷ್ಟು ಬಿಲಿಯಾಧಿಪತಿಗಳ ಸಂಪತ್ತಿನ ಮೇಲೆ ಕೇವಲ ಒಂದು ಶೇಕಡಾ ತೆರಿಗೆ ಮತ್ತು ವಾರಸುದಾರಿಕೆಯ ಮೂಲಕ ಅವರ ಸಂಪತ್ತಿನ ವರ್ಗಾವಣೆಯ ಮೇಲೆ ಸಾಮಾನ್ಯ ಮೂರನೇ ಒಂದರಷ್ಟು ತೆರಿಗೆ ವಿಧಿಸುವದರಿಂದಲೇ ಭಾರತದಲ್ಲಿ ಪ್ರತಿ ನಾಗರಿಕರೂ ಒಂದಿಷ್ಟ ಆರ್ಥಿಕ ಹಕ್ಕುಗಳನ್ನು ಹೊಂದಿರುವ ಒಂದು ಕಲ್ಯಾಣ ರಾಷ್ಟ್ರವನ್ನು ನಿರ್ಮಿಸಲು ಸಾಲುವಷ್ಟು ಹಣಕಾಸು ದೊರೆಯುತ್ತದೆ. ಇದರಿಂದ ಸಂಪತ್ತಿನ ಅಸಮಾನತೆಯ ಸಮಸ್ಯೆಯನ್ನು ಮತ್ತು ಅದರಿಂದಾಗಿ ಪ್ರಜಾಪ್ರಭುತ್ವಕ್ಕೆ ಸಂಚಕಾರದ ಸಮಸ್ಯೆಯನ್ನೂ ನಿಭಾಯಿಸಬಹುದು

**ಪ್ರೊ. ಪ್ರಭಾತ್ ಪಟ್ನಾಯಕ್**

ಇಂದಿನ ದಿನಗಳಲ್ಲಿ 'ಮೂಲ ಆದಾಯ ಯೋಜನೆ'ಯ ಮಾತುಗಳು ಗಾಳಿಯಲ್ಲಿ ಬಹಳಷ್ಟು ತೇಲುತ್ತಿವೆ. ಪ್ರತಿಯೊಂದು ಕುಟುಂಬ ಒಂದು ನಗದು ಆದಾಯದ ಹೊಸ್ತಿಲನ್ನು ತಲುಪುವಂತೆ ಒಂದು ನಿರ್ದಿಷ್ಟ ಮೊತ್ತವನ್ನು ಅದಕ್ಕೆ ಕೊಡ ಮಾಡಬೇಕು ಎಂಬ ಈ ಯೋಜನೆ ಅತ್ಯಂತ ದೋಷಪೂರಿತವಾಗಿದೆ. ಪ್ರಭುತ್ವವು ತನ್ನ ನಾಗರಿಕರಿಗೆ ಮತ್ತು ಆಹಾರ, ಶಿಕ್ಷಣ ಮತ್ತು ಆರೋಗ್ಯ ಮುಂತಾದ ಅಗತ್ಯ ಸರಕುಗಳು ಸೇವೆಗಳನ್ನು ಒದಗಿಸಲು ಅದನ್ನು ಕರ್ತವ್ಯಬದ್ಧಗೊಳಿಸುವ ಬದಲು ಇದು ಒಂದಿಷ್ಟು ಹಣವನ್ನು ಕೊಟ್ಟು ಬಿಟ್ಟು ಅದು ತನ್ನ ಜವಾಬ್ದಾರಿಯಿಂದ ಕಳಚಿಕೊಳ್ಳುವಂತೆ ಮಾಡುತ್ತದೆ. ಅಲ್ಲದೆ ಹೀಗೆ ಕೊಡುವ ಮೊತ್ತ ಬೆಲೆಗಳ ಸೂಚ್ಯಂಕಕ್ಕೆ ಲಗತ್ತಾಗಿರುವುದಿಲ್ಲ, ಮತ್ತು ಇದರೊಂದಿಗೇ ಸಾಮಾನ್ಯವಾಗಿ ಈಗಿರುವ ಸಬ್ಸಿಡಿಗಳು ಮತ್ತು ಕಲ್ಯಾಣ ವೆಚ್ಚಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಾಗುತ್ತದೆ. ಈ ನಗದು ವರ್ಗಾವಣೆ ನಾಗರಿಕರಿಗೆ ಪ್ರಭುತ್ವದ ಉದಾರ ಬಕ್ಷೀಸು ಎಂಬ ಪರಿಕಲ್ಪನೆಯ ಮೇಲೆಯೇ ನಿಂತಿದೆ. ವಾಸ್ತವವಾಗಿ, ಭೌತಿಕ ಜೀವನದ ಒಂದು ಕನಿಷ್ಟ ಮಟ್ಟ ಎಂಬದು ಪ್ರತಿಯೊಬ್ಬ ನಾಗರಿಕನ ಹಕ್ಕು, ಇದನ್ನು ಒದಗಿಸುವುದು ಪ್ರಭುತ್ವದ ಕರ್ತವ್ಯ.

ನಾಗರಿಕರ ಈ ಆರ್ಥಿಕ ಹಕ್ಕುಗಳ ಪ್ರಶ್ನೆಯನ್ನು ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ರಾಜಕೀಯ ಹಕ್ಕುಗಳಿಗೆ ಸರಿಸಮಾನವಾಗಿ ಎತ್ತಿದಾಗಲೆಲ್ಲ ಸಾಮಾನ್ಯವಾಗಿ ಕೇಳುವ ಪ್ರಶ್ನೆ: **ಇದಕ್ಕೆ ಸಂಪನ್ಮೂಲ ಎಲ್ಲಿದೆ?**

ಇಂತಹ ಪ್ರಶ್ನೆಯನ್ನು ಬಜೆಟ್‌ಗಳು ಬಂಡವಾಳಿಗರಿಗೆ, ಅಪಾರ ಮೊತ್ತಗಳನ್ನು ರಿಯಾಯ್ತಿಗಳೆಂದು ಹಸ್ತಾಂತರಿಸುವಾಗ ಯಾರೂ ಕೇಳುವುದಿಲ್ಲ, ಅವು ಅವರಲ್ಲಿ ಅಡಗಿರುವ ಸವಾಲೆದುರಿಸುವ ಭಾವಗಳನ್ನು ಬಡಿದೆಬ್ಬಿಸಲು ಅಗತ್ಯವಂತೆ, ಆಮೂಲಕ ಅವರು ಹೆಚ್ಚೆಚ್ಚು ಹೂಡಿಕೆ ಮಾಡಿ ಬೆಳವಣಿಗೆ ದರ ಹೆಚ್ಚುವಂತಾಗುತ್ತದೆಯಂತೆ. ಆದರೆ ಜನಗಳ ಜೀವನ ಮಟ್ಟವನ್ನು ಎತ್ತರಿಸುವುದು ಹೇಗೆ ಎಂಬ ಚರ್ಚೆ ಬಂದಾಗಲೆಲ್ಲ ಈ ಪ್ರಶ್ನೆ ಎದ್ದು ಬರುತ್ತದೆ. ಆದ್ದರಿಂದ ಈ ಪ್ರಶ್ನೆ ಕೇಳುವವರ ಆಶಯ ಎಷ್ಟೇ ಅಪ್ರಾಮಾಣಿಕವಾಗಿರಲಿ, ಅದಕ್ಕೆ ಒಂದು ಸ್ಥೂಲ ಉತ್ತರವನ್ನು ಒದಗಿಸುವುದು ಒಳ್ಳೆಯದು.

**ನಾವು ಐದು ಮೂಲ ಸಾರ್ವತ್ರಿಕ ಮತ್ತು ನ್ಯಾಯಯೋಗ್ಯವಾದ ಆರ್ಥಿಕ ಹಕ್ಕುಗಳನ್ನು ನೋಡೋಣ:** ಆಹಾರದ ಹಕ್ಕು, ಒಂದು ರಾಷ್ಟ್ರೀಯ ಆರೋಗ್ಯ ಸೇವೆಯ ಮೂಲಕ ಸಾರ್ವಜನಿಕವಾಗಿ ಒದಗಿಸುವ ಗುಣಮಟ್ಟದ ಮುಕ್ತ ಆರೋಗ್ಯಪಾಲನೆಯ ಹಕ್ಕು, ಸಾರ್ವಜನಿಕವಾಗಿ ಒದಗಿಸುವ ಗುಣಮಟ್ಟದ ಮುಕ್ತ ಶಿಕ್ಷಣದ ಹಕ್ಕು, ಉದ್ಯೋಗದ ಹಕ್ಕು, ಮತ್ತು ಸಾಕಷ್ಟು ಪ್ರಮಾಣದಲ್ಲಿ ಮುದಿ ವಯಸ್ಸಿನ ಪೆನ್ಷನ್ ಮತ್ತು ವಿಕಲತೆಯ ಸೌಲಭ್ಯಗಳ ಹಕ್ಕು. ಈ ಹಕ್ಕುಗಳಿಗೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ನೋಡೋಣ. ಸದ್ಯಕ್ಕೆ ಇವುಗಳಲ್ಲಿ ಕೆಲವದರ ಮೇಲೆ ನಾವು ಈಗಾಗಲೇ ಮಾಡುತ್ತಿರುವ ವೆಚ್ಚಗಳಲ್ಲದೆ, ಹೆಚ್ಚಿನ ಮೊತ್ತಗಳನ್ನಷ್ಟೇ ಪರೀಕ್ಷಿಸೋಣ. ಅಂದರೆ ಇಂದಿನ ಒಂದು ಚಿತ್ರವನ್ನು ತೆಗೆದುಕೊಳ್ಳುವಂತೆ. ಈ ಅಂದಾಜುಗಳು ಹಲವಾರು ಸ್ವತಂತ್ರ ಸಂಶೋಧಕರುಗಳ ಕೃತಿಗಳನ್ನು ಆಧರಿಸಿವೆ. ಅವರ ಹೆಸರುಗಳನ್ನು ಇಲ್ಲಿ ಪ್ರಸ್ತಾಪಿಸುವುದಿಲ್ಲ.

**ಪ್ರತಿ ಕುಟುಂಬಕ್ಕೆ 100 ದಿನಗಳಂತೆ,** ಜನಸಂಖ್ಯೆ 10 ಲಕ್ಷಕ್ಕಿಂತ ಕಡಿಮೆ ಇರುವ ನಗರಗಳ 3.75 ಕೋಟಿ ಕುಟುಂಬಗಳಿಗೆ ಉದ್ಯೋಗ ಒದಗಿಸಲು ಒಟ್ಟು ವೆಚ್ಚ, ಸಂಬಳಗಳು ಮತ್ತು ಸಾಮಗ್ರಿಗಳಿಗೆ(50:50 ಅನುಪಾತದಲ್ಲಿ), ಕೌಶಲದ ಮಟ್ಟದ ಪ್ರಕಾರ ಅತಿ ಕೆಳಗಿನ 30%ಮಂದಿಗೆ ದಿನಕ್ಕೆ 300ರೂ., ನಂತರದ 30%ಕ್ಕೆ 500ರೂ., ಅದಕ್ಕೆ ಮೇಲಿನ 20% ಕ್ಕೆ 700ರೂ.(ಅತ್ಯಂತ ಮೇಲಿನ 20% ಇಂತಹ ಕೆಲಸ ಕೇಳುವದಿಲ್ಲೆಂದಿಟ್ಟುಕೊಂಡು) ವರ್ಷಕ್ಕೆ 2.8 ಲಕ್ಷ ಕೋಟಿ ರೂ.ಗಳು ಬೇಕು. ಗ್ರಾಮೀಣ ಪ್ರದೇಶದಲ್ಲಿ , ಮನರೇಗ ಪ್ರತಿಯೊಬ್ಬ ಉದ್ಯೋಗ ಕಾರ್ಡುದಾರನಿಗೆ ದಿನಕ್ಕೆ 200ರೂ. ಸಂಬಳದಲ್ಲಿ 100 ದಿನಗಳ ಕೆಲಸ ಒದಗಿಸುವಂತೆ ಮಾಡಲಾಗಿದೆ. ಇದಕ್ಕೆ ಒಟ್ಟು ವೆಚ್ಚ 2.3 ಲಕ್ಷ ಕೋಟಿ ರೂ. ಈ ಎರಡೂ ಯೋಜನೆಗಳನ್ನು ಸೇರಿಸಿದರೆ, ಒಟ್ಟು 5.1 ಲಕ್ಷ ಕೋಟಿ ರೂ.ಗಳು. ಪ್ರಸ್ತುತ ಮನರೇಗಕ್ಕೆ ಕೇಂದ್ರ ಬಜೆಟಿನಲ್ಲಿ 60,000 ಕೋಟಿ ರೂ. ಕೊಟ್ಟಿರುವುದರಿಂದ ಬೇಕಾಗುವ ಹೆಚ್ಚುವರಿ ಮೊತ್ತ 4.5ಲಕ್ಷ ಕೋಟಿ ರೂ.ಗಳು.

ನಾವಿಲ್ಲಿ ಕುಟುಂಬಕ್ಕೆ ತಲಾ 100 ದಿನಗಳ ಉದ್ಯೋಗ ಎಂದು ಇಟ್ಟುಕೊಂಡಿದ್ದೇವೆ, ಅದೂ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಕಾರ್ಡುದಾರರಿಗೆ ಮತ್ತು 10ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪಟ್ಟಣಗಳಲ್ಲಿ. ಇದು ನಮ್ಮ ಗುರಿಯಾದ ಪ್ರತಿಯೊಬ್ಬ ನಾಗರಿಕರಿಗೂ ಉದ್ಯೋಗ ಹಕ್ಕು ಲಭ್ಯಗೊಳಿಸುವಂತದ್ದೇನೂ ಅಲ್ಲ. ಆದರೆ ಪ್ರತಿ ಕುಟುಂಬದಲ್ಲಿ ಇಬ್ಬರಿಗಿಂತ ಹೆಚ್ಚು ಉದ್ಯೋಗಾರ್ಥಿಗಳು ಇರಲಿಕ್ಕಿಲ್ಲ(ಮಕ್ಕಳಂತೂ ಈ ಹೊಸ ಸನ್ನಿವೇಶದಲ್ಲಿ ಶಾಲೆಯಲ್ಲಿರುತ್ತಾರೆ), ಮತ್ತು ಈಗಿರುವ ಉದ್ಯೋಗಕ್ಕೆ ಹೆಚ್ಚುವರಿಯಾಗಿಯಾದ್ದರಿಂದ ಉದ್ಯೋಗಕ್ಕಾಗಿ ವಾಸ್ತವಿಕ ಸರಾಸರಿ ಬೇಡಿಕೆ ಬಹುಶಃ 100ದಿನಗಳಿಗಿಂತ ಕಡಿಮೆ ಇರಬಹುದು. ನಗರಪ್ರದೇಶಗಳಲ್ಲಂತೂ, 80% ಕುಟುಂಬಗಳಲ್ಲಿ ಇಬ್ಬರು ವ್ಯಕ್ತಿಗಳು ಉದ್ಯೋಗ ಕೇಳುವ ಸಾಧ್ಯತೆ ಇರಲಿಕ್ಕಿಲ್ಲ. ತದ್ವಿರುದ್ಧ ದಿಕ್ಕುಗಳಲ್ಲಿರುವ ಈ ಎಲ್ಲ **ಸಂಗತಿಗಳನ್ನು ಪರಿಶೀಲಿಸಿದ ನಂತರ, ಉದ್ಯೋಗದ ಹಕ್ಕನ್ನು ಸ್ಥಾಪಿಸಲು ಒದಗಿಸಬೇಕಾದ ಮೊತ್ತದ ಮೊದಲ ಅಂದಾಜು 4.5 ಲಕ್ಷ ಕೋಟಿ ರೂ. ಎಂದಿಟ್ಟುಕೊಳ್ಳಬಹುದು.**

ಇನ್ನು, **ಆಹಾರಕ್ಕೆ ಸಂಬಂಧಪಟ್ಟಂತೆ,** ಈಗಾಗಲೇ ಕೇಂದ್ರ ಮತ್ತು ರಾಜ್ಯಗಳ ಬಜೆಟುಗಳಲ್ಲಿ ಗಮನಾರ್ಹ ಪ್ರಮಾಣದಲ್ಲಿ ಆಹಾರ ಸಬ್ಸಿಡಿಗಳನ್ನು ಒದಗಿಸಲಾಗುತ್ತಿದೆ. ಆದ್ದರಿಂದ ಅಗ್ಗದ ಆಹಾರವಸ್ತುಗಳ ವಿತರಣೆಯನ್ನು ಸಾರ್ವತ್ರಿಕಗೊಳಿಸಲು ಹೆಚ್ಚುವರಿಯಾಗಿ **1ಲಕ್ಷ ಕೋಟಿ ರೂ. ಬೇಕಾದೀತು,** ಏಕೆಂದರೆ ಇಲ್ಲಿಯೂ ಕೆಲವು ಮಟ್ಟಿಗೆ ಇಂತಹ ಆಹಾರವಸ್ತುಗಳನ್ನು ಪಡೆಯಲಿಕ್ಕಿಲ್ಲ.

**ಪೆನ್ಶನ್‌ಗಳ ವಿಷಯದಲ್ಲಿ,** 60ವರ್ಷ ದಾಟಿರುವ 12.8 ಕೋಟಿ ಜನಗಳಿಗೆ ಅದನ್ನು ಒದಗಿಸಬೇಕಾದೀತು ಎಂದು ಅಂದಾಜು ಮಾಡಲಾಗಿದೆ. ಈ 12.8 ಕೋಟಿ ನಿವೃತ್ತಿದಾರರಿಂದ ಏನೇನೂ ವಂತಿಗೆ ವಸೂಲು ಮಾಡದೆ, ಅವರಿಗೆ ತಿಂಗಳಿಗೆ 2000ರೂ. ದರದಲ್ಲಿ ಪೆನ್ಶನ್ ನೀಡಲು, ಹೆಚ್ಚುವರಿಯಾಗಿ **ಸುಮಾರು 3ಲಕ್ಷ ರೂ. ವೆಚ್ಚ ತಗಲಬಹುದು.**

**ಶಿಕ್ಷಣ ಮತ್ತು ಆರೋಗ್ಯಕ್ಕೆ** ನಿರ್ದಿಷ್ಟ ಅಂದಾಜುಗಳನ್ನು ಮಾಡುವ ಬದಲು, ಶಿಕ್ಷಣಕ್ಕೆ, ಎಷ್ಟೋ ವರ್ಷಗಳು ಹಿಂದೆಯೇ ಕೊಠಾರಿ ಆಯೋಗ ಸೂಚಿಸಿದಂತೆ, ಪ್ರಭುತ್ವದ ಖಜಾನೆಯಿಂದ ಜಿಡಿಪಿಯ 6% ಮತ್ತು, ಆರೋಗ್ಯಕ್ಕೆ, ಹಲವರು ಸೂಚಿಸಿರುವಂತೆ, ಜಿಡಿಪಿಯ 3% ವೆಚ್ಚ ಎಂದು ಅಂದಾಜು ಮಾಡಬಹುದು. ಅಂದರೆ, ಶಿಕ್ಷಣಕ್ಕೆ ಮತ್ತು ಆರೋಗ್ಯಕ್ಕೆ ಈಗ ಮಾಡುತ್ತಿರುವ ವೆಚ್ಚದಲ್ಲಿ ತಲಾ ಜಿಡಿಪಿಯ 2%ದಷ್ಟು ಹೆಚ್ಚಳವನ್ನು ಮಾಡಬಹುದು. **ಇವೆರಡೂ ಸೇರಿ ಈ ಮೊತ್ತ 6.6ಲಕ್ಷ ಕೋಟಿ ರೂ. ಆಗುತ್ತದೆ.**

**ಇವೆಲ್ಲ ವೆಚ್ಚಗಳ ಒಟ್ಟು ಮೊತ್ತ 15.1ಲಕ್ಷ ಕೋಟಿ ರೂ.ಗಳು, ಅಂದರೆ ಸುಮಾರು ಜಿಡಿಪಿಯ 9% ದಷ್ಟಾಗುತ್ತದೆ.** ನಿಜ, ನಾವು ಹಲವು ವೆಚ್ಚದ ಬಾಬ್ತುಗಳನ್ನು ಬಿಟ್ಟಿದ್ದೇವೆ. ಆದರೆ, ಇನ್ನೊಂದೆಡೆಯಲ್ಲಿ, ಹೆಚ್ಚುವರಿ ವೆಚ್ಚ ಎಷ್ಟಾದೀತು ಎಂದಷ್ಟೇ ನಾವು ಪರಿಶೀಲಿಸು ತ್ತಿರುವುದರಿಂದ, ರಾಜ್ಯ ಸರಕಾರಗಳು ಈಗ ಮಾಡುತ್ತಿರುವ ವೆಚ್ಚಗಳನ್ನು ಪರಿಗಣಿಸಿಲ್ಲ. ಇದು ಈ ವಿವಿಧ ಬಾಬ್ತುಗಳಲ್ಲಿ ಸಾಕಷ್ಟಾಗುತ್ತದೆ. ಇದಲ್ಲದೆ, ಈ ಕೆಲವು ಬಾಬ್ತುಗಳಲ್ಲಿ, ತನ್ಮೂಲಕ ಇತರ ಗುರಿಗಳನ್ನೂ ಸಾಧಿಸಿದಂತಾಗುತ್ತದೆ: ಉದಾಹರಣೆಗೆ, ಒಂದು ನೈಜ ಶಿಕ್ಷಣದ ಹಕ್ಕನ್ನು ಸ್ಥಾಪಿಸ ಹೊರಟರೆ ದೊಡ್ಡ ಪ್ರಮಾಣದಲ್ಲಿ ಶಾಲಾ ಕಟ್ಟಡಗಳನ್ನು ನಿರ್ಮಿಸಬೇಕಾಗುತ್ತದೆ, ಇದು ಉದ್ಯೋಗಗಳನ್ನು ನಿರ್ಮಿಸುತ್ತದೆ, ತನ್ಮೂಲಕ ಉದ್ಯೋಗದ ಹಕ್ಕು ಈಡೇರುತ್ತದೆ. ಹೀಗೆ, ನಾವು ಮಾಡಿದ ಅಂದಾಜುಗಳ ಒಟ್ಟು ಮೊತ್ತ ಅತಿ–ಅಂದಾಜೂ ಆಗಬಹುದು. ಹೀಗೆ ಒಂದೆಡೆಯಲ್ಲಿ ಅತಿ–ಅಂದಾಜುಗಳು, ಇನ್ನೊಂದೆಡೆಯಲ್ಲಿ ಕಡಿಮೆ ಅಂದಾಜುಗಳು ಒಂದಕ್ಕೊಂದು ಸರಿಹೋಗುತ್ತವೆ. ಆದ್ದರಿಂದ, **ಈ ಐದು ಮೂಲ ಆರ್ಥಿಕ ಹಕ್ಕುಗಳನ್ನು ಈಡೇರಿಸಲು ಸದ್ಯಕ್ಕೆ 15 ಲಕ್ಷ ಕೋಟಿ ರೂ. ಹೆಚ್ಚುವರಿ ಹಣ ಬೇಕಾಗುತ್ತದೆ ಎಂಬ ಒಂದು ಅಂದಾಜಿಗೆ ಬರಬಹುದು. ಈ ಮೊತ್ತವನ್ನು ಎತ್ತುವುದು ಹೇಗೆ?**

ನಾವು ಇದನ್ನು ವಿತ್ತೀಯ ಕೊರತೆ(ಫಿಸ್ಕಲ್ ಡೆಫಿಸಿಟ್)ಯನ್ನು ಯಾವುದೇ ರೀತಿಯಲ್ಲಿ ಹೆಚ್ಚಿಸುವ ಮೂಲಕ ಸಂಗ್ರಹಿಸುವುದಿಲ್ಲ ಎಂದಿಟ್ಟುಕೊಳ್ಳೋಣ. ಇದು, ವಿತ್ತೀಯ ಕೊರತೆಯನ್ನು ಹೆಚ್ಚಿಸಿದರೆ ಹಣದುಬ್ಬರ ಉಂಟಾಗುತ್ತದೆ ಎಂಬ ಸಾಮಾನ್ಯವಾಗಿ ಅಂದುಕೊಂಡಿರುವ ಕಾರಣಕ್ಕೆ ಅಲ್ಲ. ಬದಲಿಗೆ, ಈ ರೀತಿಯ ವಿತ್ತೀಯ ಕೊರತೆಯನ್ನು ಹೆಚ್ಚಿಸಿದರೆ, ತೆರಿಗೆಯಿಂದ ವೆಚ್ಚವನ್ನು ಸಂಗ್ರಹಿಸುವ ಸನ್ನಿವೇಶಕ್ಕೆ ಹೋಲಿಸಿದರೆ, ಅದು ಸಂಪತ್ತಿನ ಅಸಮಾನತೆಗಳನ್ನು ಹೆಚ್ಚಿಸುತ್ತದೆ ಎಂಬ ಕಾರಣಕ್ಕಾಗಿ.

ಈ ಮೊತ್ತವನ್ನು ಸಂಪತ್ತಿನ ಮೇಲೆ ತೆರಿಗೆಯ ಮೂಲಕ ಸಂಗ್ರಹಿಸಲು ಪುಷ್ಕಳ ಅವಕಾಶಗಳಿವೆ. ಭಾರತದಲ್ಲಿ, ಸಂಪತ್ತು ತೆರಿಗೆ ಎಂದು ಹೇಳಬಹುದಾದ್ದು ಇಲ್ಲವೆಂದೇ ಹೇಳಬಹುದು, ಮತ್ತು ಸಂಪತ್ತಿನ ಅಸಮಾನತೆ ಭಾರೀ ಪ್ರಮಾಣದಲ್ಲಿ ಹೆಚ್ಚುತ್ತಲೇ ಇದೆ ಎಂಬುದು ನಿಜಕ್ಕೂ ಆಘಾತಕಾರಿ. 'ಕ್ರೆಡಿಟ್ ಸ್ಯುಯಿಸ್ಸೆ' ಮಾಹಿತಿಯ ಪ್ರಕಾರ, ನಮ್ಮ ದೇಶದಲ್ಲಿ ತುತ್ತ ತುದಿಯಲ್ಲಿರುವ ಒಂದು ಶೇಕಡಾ ಕುಟುಂಬಗಳು ಒಟ್ಟು ಖಾಸಗಿ ಸಂಪತ್ತಿನ 60%ದ ಮೇಲೆ ಒಡೆತನ ಹೊಂದಿವೆ. ಇದು ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗಿಂತಲೂ ಹೆಚ್ಚು. ಜಗತ್ತಿನ ಬಹಳಷ್ಟು "ಆಸ್ಥಾನ" ಅರ್ಥಶಾಸ್ತ್ರಜ್ಞರುಗಳು ಕೂಡ ನವ–ಉದಾರವಾದದ ಅಡಿಯಲ್ಲಿ ಹೆಚ್ಚುತ್ತಿರುವ ಅಸಮಾನತೆಗಳು ಪ್ರಜಾಪ್ರಭುತ್ವಕ್ಕೂ ಒಳ್ಳೆಯದಲ್ಲ ಎಂದು ಸರಿಯಾಗಿಯೇ ಭಾವಿಸುತ್ತಿದ್ದಾರೆ, ದಾವೋಸ್ ಶೃಂಗ ಕೂಡ ಸಂಪತ್ತಿನ ಅಸಮಾನತೆಗಳು ಹೆಚ್ಚುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ಆದ್ದರಿಂದ ಅವರುಗಳು ಕೂಡ ಈ ಅಸಮಾನತೆಗಳನ್ನು ಹೆಚ್ಚಿನ ಸಂಪತ್ತು ತೆರಿಗೆಗಳ ಮೂಲಕ ನಿವಾರಿಸಬೇಕು ಎಂದು ಈಗ ಹೇಳುತ್ತಿದ್ದಾರೆ. ಹೀಗೆ ಸಂಪತ್ತಿನ ಮೇಲೆ ತೆರಿಗೆ ವಿಧಿಸುವುದು ಕಲ್ಯಾಣ ವೆಚ್ಚಗಳನ್ನು ಭರಿಸಲಿಕ್ಕಾಗಿ ಮಾತ್ರವೇ ಅಲ್ಲ, ತಾನಾಗಿಯೇ ಕೂಡ ಅಪೇಕ್ಷಣೀಯವಾಗಿದೆ.

ಯಾವುದೇ ರೀತಿಯ ಸಂಪತ್ತು ತೆರಿಗೆ ವ್ಯವಸ್ಥೆ ಸಮಗ್ರವಾಗಿರಬೇಕು ಎಂಬುದೂ ಅಷ್ಟೇ ಮುಖ್ಯವಾಗಿದೆ. ಅಂದರೆ ಸಂಪತ್ತು ತೆರಿಗೆಗೆ ಪೂರಕವಾಗಿ, ಕೊಡುಗೆಗಳು ಮತ್ತು ವರ್ಗಾವಣೆಗಳ ಮೇಲೂ ತೆರಿಗೆಗಳು ಇದರ ಭಾಗವಾಗಿರಬೇಕು. ಇಲ್ಲವಾದರೆ, ಅವು ತೆರಿಗೆ ವಂಚನೆಯ ಮಾರ್ಗಗಳಾಗುತ್ತವೆ. ಇಂತಹ ತಪಾಸಣೆಗಳ ವ್ಯವಸ್ಥೆ ಇದೆ ಎಂದು ಇಟ್ಟುಕೊಂಡರೆ, ಸಂಪತ್ತು ತೆರಿಗೆ ಎಂಬುದು ಈಗ ಸುಮಾರಾಗಿ ಇಲ್ಲವೇ ಇಲ್ಲವಾದ್ದರಿಂದ, ಸಂಪನ್ಮೂಲ ಕ್ರೋಡೀಕರಣದ ಒಂದು ಸಶಕ್ತ ಸಾಧನ ಆಗಬಲ್ಲದು.

ಗ್ಲೋಬಲ್ ವೆಲ್ತ್ ಮೈಗ್ರೇಶನ್ ರಿವ್ಯೂ(ಜಾಗತಿಕ ಸಂಪತ್ತು ವಲಸೆ ಪರಾಮರ್ಶೆ), 2018ರ ಪ್ರಕಾರ ಭಾರತದ ಬಿಲಿಯಾಧಿಪತಿಗಳ ನಿವ್ವಳ ಸಂಪತ್ತೇ ಈಗ 557ಲಕ್ಷ ಕೋಟಿ ರೂ.ಗಳು. ಅಂದರೆ **ಈ ಬಿಲಿಯಾಧಿಪತಿಗಳ ಸಂಪತ್ತಿನ ಮೇಲಷ್ಟೇ ಒಂದು ಶೇಕಡಾ ತೆರಿಗೆ ವಿಧಿಸಿದರೆ, ಅದರಿಂದಲೇ ವಾರ್ಷಿಕ 5.6ಲಕ್ಷ ಕೋಟಿ ರೂ.ಗಳು ಸಿಗುತ್ತವೆ.**

ಸಂಪತ್ತು ತೆರಿಗೆಗೆ ಪೂರಕವಾಗಿ ವಾರಸುದಾರಿಕೆ ತೆರಿಗೆಯೂ ಇರಬೇಕಾಗುತ್ತದೆ. ನಿಜ ಹೇಳಬೇಕೆಂದರೆ, ಈ ತೆರಿಗೆ ಬಂಡವಾಳಶಾಹಿ ಸಿದ್ಧಾಂತಕ್ಕೂ ಅತ್ಯಂತ ಅನುಗುಣವಾಗಿಯೇ ಇದೆ. ಬಂಡವಾಳಶಾಹಿಗಳ ಸಂಪತ್ತು ಅವರು ಹೊಂದಿರುವ ಕೆಲವು ವಿಶೇಷ ಪ್ರತಿಭೆಯಿಂದಾಗಿ ಎಂದು ಈ ಸಿದ್ಧಾಂತ ಹೇಳುತ್ತದೆ. ಹಾಗಿರುವಾಗ, ಅವರ ಮಕ್ಕಳೂ ಅಂತಹ ಪ್ರತಿಭೆಗಳನ್ನು ಪ್ರದರ್ಶಿಸುವ ವರೆಗೆ, ಅವರು ಇಂತಹ ಸಂಪತ್ತನ್ನು ಏಕೆ ಹೊಂದಿರಬೇಕು ಎಂಬುದಕ್ಕೆ ಕಾರಣಗಳೇನೂ ಇರುವುದಿಲ್ಲವಲ್ಲ.

ಪ್ರತಿವರ್ಷ ಬಿಲಿಯಾಧಿಪತಿಗಳ ಒಟ್ಟು ಸಂಪತ್ತಿನ 5 ಶೇಕಡಾದಷ್ಟು ಅವರ ಮಕ್ಕಳಿಗೆ, ಅಥವ ಇತರ ವಾರಸುದಾರರಿಗೆ ವರ್ಗಾವಣೆಯಾಗುತ್ತಿರುತ್ತದೆ ಎಂದಿಟ್ಟುಕೊಂಡರೆ, ಇಂತಹ **ವಾರಸು ಸಂಪತ್ತಿನ ಮೇಲೆ ಮೂರನೇ ಒಂದರಷ್ಟು ಸಾಮಾನ್ಯ ತೆರಿಗೆ** ವಿಧಿಸಿದರೂ, **ಅದರಿಂದ 9.33ಲಕ್ಷ ಕೋಟಿ ರೂ.ಗಳು ಸಂಗ್ರಹವಾಗುತ್ತವೆ.**

**ಸಂಕ್ಷಿಪ್ತವಾಗಿ ಹೇಳುವುದಾದರೆ, ಕೇವಲ ಈ ಎರಡು ತೆರಿಗೆಗಳನ್ನು, ಅದು ಕೂಡ ಕೇವಲ ಬಿಲಿಯಾಧಿಪತಿಗಳ ಮೇಲೆ ವಿಧಿಸಿದರಷ್ಟೇ ಸಾಕು, ಭಾರತದಲ್ಲಿ ಪ್ರತಿ ನಾಗರಿಕರೂ ಒಂದಿಷ್ಟ ಆರ್ಥಿಕ ಹಕ್ಕುಗಳನ್ನು ಹೊಂದಿರುವ ಒಂದು ಕಲ್ಯಾಣ ರಾಷ್ಟ್ರವನ್ನು ನಿರ್ಮಿಸಲು ಸಾಲುವಷ್ಟು ಹಣಕಾಸು ದೊರೆಯುತ್ತದೆ.**

ನಿಜ, ನಾವಿಲ್ಲಿ ಹಣದ ಮೊತ್ತಗಳ ಬಗ್ಗೆಯಷ್ಟೇ ಮಾತಾಡುತ್ತಿದ್ದೇವೆ. ಒಂದು 'ದಾಸ್ತಾನಿ'ನ(ಸಂಪತ್ತಿನ) ಮೇಲೆ ತೆರಿಗೆಯನ್ನು ಒಂದು 'ಹರಿವಿನ' ವೆಚ್ಚಕ್ಕೆ ಸಂಪನ್ಮೂಲಗಳನ್ನು ಉಂಟುಮಾಡಲು ಬಳಸುತ್ತಿದ್ದೇವೆ. ಇದರಿಂದ ಏಳುವ ಇತರ ತಾರ್ಕಿಕ ಸಮಸ್ಯೆಗಳನ್ನೂ ಪರಿಶೀಲಿಸಬೇಕಾಗುತ್ತದೆ. ಆದರೆ, ಸಾಮಾನ್ಯವಾಗಿ ಹಣ ಎಲ್ಲಿಂದ ಬರುತ್ತದೆ ಎಂಬ ಪ್ರಶ್ನೆಯನ್ನೇ ಕೇಳಲಾಗುತ್ತಿರುವುದರಿಂದಾಗಿ, ನಾವು ಕೂಡ ಈ ಪ್ರಶ್ನೆಗಷ್ಟೇ ನಮ್ಮನ್ನು ಸೀಮಿತಗೊಳಿಸಿಕೊಂಡಿದ್ದೇವೆ. ಇಲ್ಲಿ, ಒಂದಿಷ್ಟು ಮೂಲ ಆರ್ಥಿಕ ಹಕ್ಕುಗಳನ್ನು ಲಭ್ಯಗೊಳಿಸಲು ಅಗತ್ಯವಾದ ವೆಚ್ಚಗಳನ್ನು ಸುಲಭವಾಗಿ ಎತ್ತಬಹುದು ಎಂಬುದೇ ಮುಖ್ಯ ಅಂಶ. ೦

### ಕುಂದಾಪುರ : ಉದ್ಯೋಗ ಖಾತ್ರಿ ಕೆಲಸಗಾರರ ತಡೆಹಿಡಿದ ವೇತನಕ್ಕೆ ಆಗ್ರಹಿಸಿ

# ಕೃಷಿ ಕೂಲಿಗಾರರಿಂದ ತಾಲೂಕು ಪಂಚಾಯತ್ ಕಛೇರಿ ಮುತ್ತಿಗೆ ಹೋರಾಟ

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಕ್ಕೆ ಸಂಯೋಜಿಸಲ್ಪಟ್ಟ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ತಾಲೂಕಿನಾದ್ಯಂತ ಉದ್ಯೋಗ ಖಾತ್ರಿ ಯೋಜನೆ ಕೆಲಸಗಾರರಿಗೆ ಕಳೆದ 3 ತಿಂಗಳಿಂದ ಮಾಡಿದ ಕೆಲಸಕ್ಕೆ ಕೂಲಿ ಹಣ ಪಾವತಿಯಾಗದೇ ಬಡ ಕೂಲಿಕಾರರು ಬೀದಿ ಪಾಲಾಗಿರುವುದನ್ನು ಪ್ರತಿಭಟಿಸಿ, ಈ ಕೂಡಲೇ ತಡೆಹಿಡಿದ ವೇತನ ಬಿಡುಗಡೆ ಮಾಡಲು ಒತ್ತಾಯಿಸಿ 20 ಫೆಬ್ರವರಿ 2019 ರಂದು ತಾಲೂಕು ಪಂಚಾಯತ್ ಕಛೇರಿ ಎದ್ರು ಸುಮಾರು 500 ಮಂದಿ ನರೇಗಾ ಕೂಲಿಕಾರರು ಧರಣಿ ಮುಷ್ಕರ ಪ್ರತಿಭಟನೆ ನಡೆಸಿದರು.

ಉದ್ಯೋಗ ಖಾತ್ರಿ ಕೆಲಸಗಾರರಿಗೆ ಬಾಕಿ ನಿಂತ ಕೂಲಿ ಹಣವನ್ನು ನಿಯಮಾನುಸಾರ ದಂಡನೆ ಸಹಿತ ಪಾವತಿಸಬೇಕು, 2019 ರ ಏಪ್ರಿಲ್ ಆರಂಭದಿಂದಲೇ ಕ್ರಿಯಾಯೋಜನೆ ಸಿದ್ಧಪಡಿಸಿ ಕೂಲಿ ಕೆಲಸ ಕೊಡಬೇಕು. ಉದ್ಯೋಗ ಖಾತ್ರಿ ಕೂಲಿಕಾರರಿಗೆ ದಿನವೊಂದಕ್ಕೆ ರೂ. 600/– ವೇತನ ಹಾಗೂ 250 ದಿನ ಕೆಲಸ ಕೊಡಬೇಕು ಎಂದು ಪ್ರತಿಭಟನಾ ಸಭೆಯಲ್ಲಿ ಘೋಷಣೆ ಕೂಗಿ ಅಧಿಕಾರಿಗಳಿಗೆ ಸಾಮೂಹಿಕ ಮನವಿ ಅರ್ಪಿಸಲಾಯಿತು.





ಇದಕ್ಕೆ ಮೊದಲು ಕಾರ್ಮಿಕ ಭವನದಲ್ಲಿ ನರೇಗಾ ಕೆಲಸಗಾರರ ಬೃಹತ್ ಸಮಾವೇಶ ನಡೆಸಿ ಬಳಿಕ ಮೆರವಣಿಗೆ ಮೂಲಕ ತಾಲೂಕು ಪಂಚಾಯತ್ ಕಛೇರಿ ಮುತ್ತಿಗೆ ಹಾಕಲಾಯಿತು.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಳಿಸುವುದಕ್ಕೆ ಆಗ್ರಹಿಸಿ 27, 28 ಫೆಬ್ರವರಿ 2019 ರಂದು ಬೆಂಗಳೂರು ವಿಧಾನ ಸೌಧ ಚಲೋ ಹೋರಾಟ ರಾಜ್ಯ ಮಟ್ಟದ ಉದ್ಯೋಗ ಖಾತ್ರಿ ಯೋಜನೆಯ ಕಾರ್ಯಾಗಾರ ನಡೆಯಲಿದ್ದು ಇದನ್ನು ಯಶಸ್ವಿಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಯು. ದಾಸಭಂಡಾರಿ, ರಾಜೀವ ಪಡುಕೋಣೆ, ನಾಗರತ್ನ ನಾಡ, ಯಶೋಧ ಹೊಯ್ಯಾಣ, ಸಂಜೀವ ಹೆಮ್ಮಾಡಿ, ಬಾಬಣ್ಣ ಗುಲ್ವಾಡಿ, ಕಮಲ ಶೆಟ್ಟಿಗಾರ ಬಸ್ರೂರು, ಸಿಂತಿಯಾ, ಬೇಬಿ, ಶ್ಯಾಮಲ, ಶೋಭಾ, ಶ್ರೀಮತಿ ನಾಗರತ್ನ ಮುಂತಾದವರು ನೇತೃತ್ವ ವಹಿಸಿದರು.

ಸಿಐಟಿಯು ಜಿಲ್ಲಾ ಮುಖಂಡರಾದ ಕೆ. ಶಂಕರ್, ಬಾಲಕೃಷ್ಣ ಶೆಟ್ಟಿ, ಎಚ್.ವಿಠಲ ಪೂಜಾರಿ, ಧರಣಿ ನಿರತರರಿಗೆ ಬೆಂಬಲಿಸಿ ಶುಭ ಹಾರೈಸಿದರು. ವೆಂಕಟೇಶ ಕೋಣಿ ಅಧ್ಯಕ್ಷತೆ ವಹಿಸಿದರು.

**ವರದಿ: ವೆಂಕಟೇಶ ಕೋಣಿ**

## ಬಗರ್ ಹುಕುಂ ಸಾಗುವಳಿ ಸಕ್ರಮಕ್ಕೆ ಒತ್ತಾಯಿಸಿ..... ಪುಟ 16 ರಿಂದ

ರೈತರು ಮತ್ತು ಕೃಷಿ ಕೂಲಿಕಾರರ ಫಾರಂ. ನಂ. 57 ಅರ್ಜಿಗಳನ್ನು ಯಾವುದೇ ಷರತ್ತುಗಳಿಲ್ಲದೆ ಸ್ವೀಕರಿಸಬೇಕೆಂದು ಸಂಬಂಧ ಪಟ್ಟವರಿಗೆ ನಿರ್ದೇಶನ ನೀಡಬೇಕೆಂದು ಕೋರುತ್ತೇವೆ ಮತ್ತು ಈ ಫೆಬ್ರವರಿ 2019 ರ ಕೊನೆಯೊಳಗೆ ಲೋಕಸಭಾ ಚುನಾವಣೆಗಳು ಘೋಷಣೆಯಾಗಬಹುದೆಂಬ ವರದಿಗಳ ಹಿನ್ನೆಲೆಯಲ್ಲಿ ಫಾರಂ ನಂ. 57 ನ್ನು ಸಲ್ಲಿಸಲು ನಿಗದಿಪಡಿಸಲಾಗಿರುವ ಕಾಲಮಿತಿಯನ್ನು ವಿಸ್ತರಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ ಒತ್ತಾಯಿಸಿದರು. ಅವರು ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

**ನಗರ ವ್ಯಾಪ್ತಿಯ, ಕೃಷಿಗೆ ಒಳಪಟ್ಟಿರುವ 'ಅರಣ್ಯ' ಎನ್ನಲಾಗುತ್ತಿರುವ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮ ಮಾಡಲು ಅಗತ್ಯವಿರುವ ಕಾನೂನು ತಿದ್ದುಪಡಿ ಕೋರಿ**

ಹಲವು ಕಾರಣಗಳಿಂದ ನಗರೀಕರಣ ಬಾರಿ ವ್ಯಾಪಕವಾಗಿ ಬೆಳೆಯುತ್ತಿದೆ. ಬೆಳೆಯುತ್ತಿರುವ ನಗರಗಳ ಅಭಿವೃದ್ಧಿ ಹಾಗೂ ಸಾರ್ವಜನಿಕ ಬಳಕೆಯ ಉದ್ದೇಶದ ಕಾರಣವನ್ನು ಹೇಳಿ, ನಗರ ವ್ಯಾಪ್ತಿಯ ಬಗರ್‌ಹುಕುಂ ಸಾಗುವಳಿಯ ಭೂಮಿಯನ್ನು ಸಕ್ರಮ ಮಾಡಬಾರದೆಂಬ ಕಾನೂನಿನ ಕಾರಣಗಳಿಂದ 30–40 ವರ್ಷಗಳಿಂದ ಉಳುಮೆ ಮಾಡುತ್ತಾ ಜೀವನ ಸಾಗಿಸುತ್ತಿರುವ ಬಡ ರೈತರು ಮತ್ತು ಕೃಷಿ ಕೂಲಿಕಾರರಿಗೆ ಸಾಗುವಳಿಯನ್ನು ಸಕ್ರಮ ಮಾಡಿ 'ಸಾಗುವಳಿ ಚೀಟಿ' ಗಳನ್ನು ನೀಡಲಾಗುತ್ತಿಲ್ಲ. ಇದರಿಂದ ಸಾವಿರಾರು ಕುಟುಂಬಗಳು ಆತಂಕದಲ್ಲಿ ಇವೆ. ಈ ಸಮಸ್ಯೆಯ ಪರಿಹಾರಕ್ಕೆ ಸಂಬಂಧಿಸಿ ಅನೇಕ ಹೋರಾಟಗಳು ನಡೆದು, ಸರ್ಕಾರದ ಮಟ್ಟದಲ್ಲಿ ಸಭೆಗಳು ನಡೆದರೂ ಈ ತನಕ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಈಗ ಒಟ್ಟಾರೆ ಪ್ರಶ್ನೆಯು ಅಂತಿಮ ಘಟ್ಟಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಈ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯಲೇಬೇಕಿದೆ. ಇದಕ್ಕೆ ಇರುವ ಪರಿಹಾರ ಮಾರ್ಗ ಮಾನವೀಯ ದೃಷ್ಟಿಯಿಂದ ಕಂದಾಯ ಕಾನೂನಿಗೆ ತಿದ್ದುಪಡಿ. ಈ ತಿದ್ದುಪಡಿಯ ಮೂಲಕ ಬಡ ರೈತರು ಮತ್ತು ಕೃಷಿ ಕೂಲಿಕಾರರ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮ ಮಾಡಬೇಕಿದೆ.

**"ಅರಣ್ಯ" ಎನ್ನಲಾಗುತ್ತಿರುವ ಭೂಮಿಯ ಸಮಸ್ಯೆ :**

ಇಂತಹದೇ ಇನ್ನೊಂದು ಪ್ರಮುಖ ಸಮಸ್ಯೆ. 30–40 ವರ್ಷಗಳಿಂದ ಕೃಷಿಗೆ ಒಳಪಟ್ಟು ರೈತರ ಸ್ವಾಧೀನದಲ್ಲಿ ಇದ್ದರೂ ಕಂದಾಯ ಇಲಾಖೆಯ ಪಹಣಿ ಇತ್ಯಾದಿಗಳಲ್ಲಿ ವಿವಿಧ ಹೆಸರಿನ 'ಅರಣ್ಯ ಭೂಮಿ'ಗಳು ಎಂದು ದಾಖಲಾಗಿರುವುದು. ಈ ಕಾರಣದಿಂದ ರೈತರಿಗೆ ಭೂಮಿಗಳನ್ನು ಸಕ್ರಮ ಮಾಡಲಾಗುತ್ತಿಲ್ಲ. ಈ ಬಗ್ಗೆ ಹಿಂದಿನ ಸರ್ಕಾರದ ಕಾಲಾವಧಿಯಲ್ಲಿ ಹಲವು ಸಭೆಗಳು ನಡೆದು, ಈ ಸಮಸ್ಯೆಗೆ ಪರಿಹಾರವಾಗಿ, ಈ ಹಿಂದೆ ಕಂದಾಯ ಇಲಾಖೆಯಿಂದ 'ಅರಣ್ಯ ಇಲಾಖೆ' ಗೆ ವರ್ಗಾವಣೆ ಮಾಡಿದ್ದ 'ಸಿ' ಮತ್ತು 'ಡಿ' ವರ್ಗದ ಭೂಮಿಗಳನ್ನು ವಾಪಾಸು ಪಡೆಯಲು ತೀರ್ಮಾನಿಸಿ, ಈ ಪ್ರಕ್ರಿಯೆಯನ್ನು ಆರಂಭಿಸಲಾಗಿತ್ತು. ಈಗ ಇದನ್ನು ಮುಂದುವರಿಸುವುದರ ಜೊತೆಗೆ ಇನ್ನಿತರೆ ಮಾರ್ಗಗಳನ್ನು ಬಳಸಿ ಬಡರೈತರು ಮತ್ತು ಕೃಷಿ ಕೂಲಿಕಾರರ ಸ್ವಾಧೀನದಲ್ಲಿರುವ ಬಗರ್‌ಹುಕುಂ ಸಾಗುವಳಿ ಭೂಮಿಗಳ ಸಕ್ರಮಕ್ಕೆ ತೀರ್ಮಾನಗಳನ್ನು ಮಾಡಬೇಕೆಂದು ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

**'ಅರಣ್ಯ ಕಾಯ್ದೆ – 2006' ರ ಪರಿಣಾಮಕಾರಿ ಜಾರಿಗಾಗಿ ಆಗ್ರಹಿಸಿ :**

ತೀರ ಸಂಕಷ್ಟದಲ್ಲಿ ಜೀವನ ಮಾಡುತ್ತಿರುವ ಆದಿವಾಸಿಗಳು ಹಾಗೂ ಇತರೆ ಅರಣ್ಯವಾಸಿಗಳಿಗೆ ಬದುಕನ್ನು ಕಟ್ಟಿಕೊಡುವ ಉದ್ದೇಶದಿಂದ ಹಿಂದಿನ ಯುಪಿಎ ಕೇಂದ್ರ ಸರ್ಕಾರ, ಆದಿವಾಸಿಗಳು ಹಾಗೂ ಇತರೆ ಅರಣ್ಯ ವಾಸಿಗಳು ವಾಸ ಮಾಡುತ್ತಿರುವ ಮನೆ ಮತ್ತು ಕೃಷಿಯಲ್ಲಿ ತೊಡಗಿರುವ ಅರಣ್ಯ ಭೂಮಿಗೆ ಮಾಲಿಕತ್ವವನ್ನು ಕೊಡುವ ಅರಣ್ಯ ಕಾಯ್ದೆ –2006 ನ್ನು ಜಾರಿಗೆ ತಂದಿತ್ತು. ರಾಜ್ಯದಲ್ಲಿ ಈ ಕಾಯ್ದೆಯ ಅನುಷ್ಠಾನ ತುಂಬಾ ಅಸಮರ್ಪಕವಾಗಿದ್ದು ಅನೇಕ ಹೋರಾಟಗಳನ್ನು ನಡೆಸಿದರೂ ಹೆಚ್ಚಿನ ಪ್ರಯೋಜನವಾಗಿಲ್ಲ. ಸಲ್ಲಿಸಿರುವ ಸುಮಾರು ಎರಡು ಲಕ್ಷ ಅರ್ಜಿಗಳಲ್ಲಿ ಕೇವಲ 8–10 ಸಾವಿರ ಅರ್ಜಿದಾರರಿಗೆ ಮಾತ್ರ ಭೂಮಿಯ ಹಕ್ಕನ್ನು ನೀಡಲಾಗಿದೆ. ಇನ್ನೂ ಉಳಿದಂತೆ ದೊಡ್ಡ ಸಂಖ್ಯೆಯ ಅರ್ಜಿಗಳನ್ನು ಕೇಂದ್ರ ಕಾನೂನಿನ ದೋಷ ಹಾಗೂ ಅನುಷ್ಠಾನದಲ್ಲಿರುವ ನಿರ್ಲಕ್ಷತೆಯ ಧೋರಣೆಯಿಂದ ವಜಾ ಮಾಡಲಾಗುತ್ತಿದೆ. ಇಲ್ಲವೇ ವಜಾಮಾಡಲಾಗುವ ಹಂತದಲ್ಲಿವೆ. ಈ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ, ಅರಣ್ಯ ಇಲಾಖೆ, ಹಾಗೂ ಕಂದಾಯ ಇಲಾಖೆಗಳ ಉನ್ನತ ಮಟ್ಟದ ಸಭೆಯೊಂದನ್ನು ಕರೆದು ಈ ಕಾಯ್ದೆಯ ಅನುಷ್ಠಾನದ ಬಗ್ಗೆ ವಿಶೇಷವಾಗಿ ಚರ್ಚಿಸಬೇಕೆಂದು ಸಂಘದ ಪ್ರಧಾನ ಕಾರ್ಯದರ್ಶಿ ಯು. ಬಸವರಾಜ ಹೇಳಿದರು.

**ಬೆಂಗಳೂರು ಸುತ್ತಮುತ್ತಲಿನ ಬಡವರ ಮನೆ ನಿವೇಶನದ ಸಮಸ್ಯೆಯ ಬಗ್ಗೆ**

ಬೆಂಗಳೂರು ಮಹಾನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಡವರು ಬದುಕುವುದೇ ಬಾರಿ ಕಷ್ಟವಾಗುತ್ತಿದೆ. ವರ್ಷದ 365 ದಿನ ದುಡಿದರೂ ಕನಿಷ್ಠ ಜೀವನ ಮಾಡಲು ಸಾಧ್ಯವಾಗುತ್ತಿಲ್ಲ. ಸಂಪಾದನೆಯ ಮುಖ್ಯ ಭಾಗ ಮನೆಯ ಬಾಡಿಗೆಗೆ ಹೋಗುತ್ತಿದೆ. ಶಿಕ್ಷಣ, ಆರೋಗ್ಯ ಇತ್ಯಾದಿಗಳೆಲ್ಲ ವಿಪರೀತ ದುಬಾರಿ. ಇದರಿಂದ ಜೀವಾವಧಿಯಲ್ಲಿ 'ಸ್ವಂತ ಮನೆ' ಮಾಡಬೇಕೆನ್ನುವ ಕನಸು ಕನಸಾಗಿಯೇ ಉಳಿಯುತ್ತಿದೆ. ನಿವೇಶನ ಇರುವ ಕೆಲವರಿಗೆ ಸರ್ಕಾರ ಮನೆಗಳನ್ನು ಕೊಡುವ ಕೆಲಸ ಮಾಡುತ್ತಿದೆ. ಆದರೆ 'ನಿವೇಶನ' ಇಲ್ಲದವರಿಗೆ, ಮನೆಯು ಇಲ್ಲ, ನಿವೇಶನವು ಇಲ್ಲ ಎನ್ನುವ ಕೆಟ್ಟ ಸ್ಥಿತಿಯಾಗಿದೆ. ಈ ಹಿನ್ನೆಲೆಯಲ್ಲಿ ಅನೇಕ ಹೋರಾಟಗಳು ನಡೆದು, ಭರವಸೆಗಳು ಸಿಕ್ಕಿವೆ. ಆದರೆ ಸಮಸ್ಯೆ ಪರಿಹಾರವಾಗುತ್ತಿಲ್ಲ. ತಮಗೆ 'ಮನೆ ನಿವೇಶನ, ಇಲ್ಲವೆ 'ಮನೆ' ನೀಡಬೇಕೆಂದು ಸುಮಾರು 2000 ಕ್ಕಿಂತ ಹೆಚ್ಚಿನ ಬಡವರೂ ಅರ್ಜಿಗಳನ್ನು ಬೆಂಗಳೂರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ಹಲವು ಸುತ್ತಿನ ಹೋರಾಟಗಳನ್ನು ನಡೆಸಲಾಗಿದೆ. ಇದೇ ಜನವರಿ 3, 2019 ರಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಸಾವಿರಾರು ನಿವೇಶನ ರಹಿತರ ಹೋರಾಟದ ಸ್ಥಳಕ್ಕೆ ಆಗಮಿಸಿದ್ದ ಮಾನ್ಯ ಕಾರ್ಯದರ್ಶಿಗಳು, ವಸತಿ ಇಲಾಖೆ, ಕರ್ನಾಟಕ ಸರ್ಕಾರ, ರವರು ಸಂಬಂಧ ಪಟ್ಟ ಮಂತ್ರಿಗಳು, ನಗರ ಜಿಲ್ಲಾಧಿಕಾರಿಗಳ ಜೊತೆ ಚರ್ಚಿಸಿ, ಸಮಸ್ಯೆಯನ್ನು ಪರಿಹಾರ ಮಾಡಲು ಪ್ರಯತ್ನಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಸಂಘದ ಉಪಾಧ್ಯಕ್ಷರಾದ ವೆಂಕಟಾಚಲ ಹೇಳಿದರು.




ಈ ಗಂಭೀರ ಸಮಸ್ಯೆಯ ಹಿನ್ನೆಲೆಯಲ್ಲಿ 'ಬಡವರಿಗೆ ವಸತಿ' ನೀಡುವ ವಿಚಾರದಲ್ಲಿ ಸರ್ಕಾರ ಆರಂಭದಲ್ಲೂ ವಿಶೇಷವಾದ ಆಸಕ್ತಿ ಹೊಂದಿದವರಾಗಿ, ಸಮಸ್ಯೆಯ ಪರಿಹಾರಕ್ಕೆ ಮುಂದಾಗಬೇಕೆಂದು ಒತ್ತಾಯಿಸಿದರು.

ಇದೇ ರೀತಿಯಲ್ಲಿ ನಿವೇಶನ ಇದ್ದ ಬಡವರಿಗೆ ಮನೆಗಳನ್ನು ಕಟ್ಟಿಕೊಡುವ ಕೆಲಸ ಉತ್ತಮವಾಗಿಯೇ ನಡೆದಿದೆ. ಆದರೆ ನಿವೇಶನವೇ ಇಲ್ಲದ ನಿರ್ಗತಿಕರಿಗೆ ವಸತಿ ಎಂಬುವುದು ಹಗಲು ಕನಸಾಗುತ್ತಿದೆ. ಬೆಂಗಳೂರು ಮತ್ತಿತ್ತರೇ ನಗರ ಪ್ರದೇಶಗಳಲ್ಲಿ ಬಡವರು ಸ್ವಂತ ವಸತಿಯನ್ನು ಹೊಂದುವುದು ಸಾಧ್ಯವೇ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ತಾವು ಘೋಷಣೆ ಮಾಡಿದಂತೆ ಬೆಂಗಳೂರು ಮಹಾನಗರಕ್ಕೆ ಸೀಮಿತವಾಗಿರುವ ಜಿ+14 ನಂತಹ ವಸತಿ ಯೋಜನೆಯನ್ನು ಇತರೇ ನಗರಗಳಿಗೂ ವಿಸ್ತರಿಸಬೇಕು ಹಾಗೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ನಿವೇಶನ ರಹಿತರ ಪಟ್ಟಿಯೊಂದನ್ನು ತಯಾರಿಸಿ, ಇವರಿಗೆ ಮನೆ ನಿವೇಶನಗಳನ್ನು ನೀಡಲು ವಿಶೇಷ ಯೋಜನೆಯೊಂದನ್ನು ಘೋಷಣೆ ಮಾಡಬೇಕೆಂದು ಕೋರುತ್ತೇವೆ. ಅಗತ್ಯವಿದ್ದಲ್ಲಿ ನಿವೇಶನಕ್ಕಾಗಿ ಬಿಡಿಎ ಮಾದರಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿಯೂ ಭೂ ಸ್ವಾಧೀನಕ್ಕೆ ಮುಂದಾಗಬೇಕೆಂದು ವಿನಂತಿಸಿದರು.

**ರೈತರ ಮೇಲಿನ ಮೊಕದ್ದಮೆಗಳನ್ನು ವಾಪಸ್ಸು ಪಡೆಯುವ ಕುರಿತು :**

ಭೂಮಿಯ ಹೋರಾಟಗಳು ಮತ್ತಿತ್ತರೇ ರೈತ ಪರ ಹೋರಾಟಗಳಲ್ಲಿ ಭಾಗವಹಿಸಿದ ರೈತ ಸಂಘದ ಕಾರ್ಯಕರ್ತರು ಮತ್ತು ರೈತರ ಮೇಲೆ ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆ ಹಲವಾರು ಕೇಸುಗಳನ್ನು ದಾಖಲು ಮಾಡಲಾಗಿದ್ದು ಈ ಮೊಕದ್ದಮೆಗಳನ್ನು ವಾಪಸು ಪಡೆಯಬೇಕೆಂದು ಸಹ ಒತ್ತಾಯಿಸಿದರು. ಮುಖಂಡರಾದ ಮಾರುತಿ ಮಾನ್ಪಡೆ, ಜಿ.ವಿ. ಶ್ರೀರಾಮರೆಡ್ಡಿ, ನಿತ್ಯಾನಂದಸ್ವಾಮಿ ಮಾತನಾಡಿದರು. ಕೊನೆಯಲ್ಲಿ ರಾಜ್ಯ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಯಿತು.

ಇದೊಂದು 2020 ರ ಅಧ್ಯಕ್ಷೀಯ ಚುನಾವಣೆಯಲ್ಲಿ ತನ್ನನ್ನು ಪುನರ್ ಆಯ್ಕೆ ಮಾಡಿಕೊಳ್ಳಲು ಹೆಣೆದಿರುವ, ಟೊಳ್ಳು ಹಾಗೂ ಗೊಡ್ಡು ಬೆದರಿಕೆಯೆಂದಿರುವ ಡೆಮೋಕ್ರಾಟರು, ಸೋಷಿಯಲಿಸ್ಟರು, ಮತ್ತು ಕಮ್ಯೂನಿಸ್ಟರು ಈ ಘೋಷಣೆ ಕಾನೂನು ಬಾಹಿರ ಹಾಗೂ ಅಸಂವಿಧಾನಿಕ ಕ್ರಮವೆಂದು ತಿರಸ್ಕರಿಸಿದ್ದಾರೆ. ಈ ಗೋಡೆಯ ನಿರ್ಮಾಣದ ಬಗ್ಗೆ ಮತ್ತು ಟ್ರಂಪ್ ಧೋರಣೆಯ ಬಗ್ಗೆ ತೀವ್ರ ವಿರೋಧ ವ್ಯಕ್ತ ಪಡಿಸಿದ್ದಾರೆ .. ..ಅಧ್ಯಕ್ಷರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು, ಸಂವಿಧಾನ ವಿರೋಧಿ ಮತ್ತು ಕಾನೂನು ಬಾಹಿರ ಕ್ರಮಗಳನ್ನು ಅನುಸರಿಸಿದರೆ, ಅವರ ವಿರುದ್ಧ ವಿಶೇಷ ಅಧಿಕಾರ ಬಳಸಲು ಸಂವಿಧಾನವು ಕಾಂಗ್ರೆಸಿಗೆ ಎಲ್ಲಾ ರೀತಿಯ ಸ್ಪಷ್ಟ ಹಕ್ಕುಗಳನ್ನು ನೀಡಿದೆ. ಆದ್ದರಿಂದ ಈ ಹಕ್ಕುಗಳನ್ನು ಈ ಕ್ಲಿಷ್ಟ ಸಮಯದಲ್ಲಿ ಬಳಸಲು ಹಿಂಜರಿಯುವುದಿಲ್ಲ ಎಂದು ಕಾಂಗ್ರೆಸಿನ ಸ್ಪೀಕರ್ ನ್ಯಾನ್ಸಿ ಹೇಳಿಕೆ ನೀಡಿ ಸ್ಪಷ್ಟ ಸಂದೇಶವನ್ನು ರವಾನಿಸಿದ್ದಾರೆ. ಟ್ರಂಪ್ ಘೋಷಣೆಯ ವಿರುದ್ಧ ಹಲವು ಆಯ್ಕೆಗಳಿವೆ. ಅದರಲ್ಲಿ ನ್ಯಾಯಾಲಯದ ಮೆಟ್ಟಲು ಏರುವುದು ಸೇರಿದೆ. ಅಧಿಕಾರಶಾಹಿಯ ಅಸಂವಿಧಾನಿಕ ನಿಲುವುಗಳನ್ನು ನ್ಯಾಯಾಲಯದ ಮುಂದಿಡಬೇಕಾಗಿದೆ ಎಂದಿದ್ದಾರೆ.


ಜಗದ ಸುತ್ತ

# ಟ್ರಂಪ್ 'ತುರ್ತು ಪರಿಸ್ಥಿತಿ' ಘೋಷಣೆ

ನಾಗರಾಜ ನಂಜುಂಡಯ್ಯ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಮೆರಿಕಾ–ಮೆಕ್ಸಿಕನ್ ಗಡಿಯಲ್ಲಿ ಗೋಡೆಯನ್ನು ನಿರ್ಮಿಸಲು 5.7 ಬಿಲಿಯನ್ ಡಾಲರಿನಷ್ಟು ಹಣವನ್ನು ಅಮೆರಿಕನ್ ಪಾರ್ಲಿಮೆಂಟಿನ ಬಜೆಟಿನಲ್ಲಿ ಒದಗಿಸಬೇಕೆಂದು ಆಗ್ರಹಿಸಿದ್ದರು. ಇದಕ್ಕೆ ಕಾಂಗ್ರೆಸ್ ನಲ್ಲಿ ಡೆಮಾಕ್ರಾಟರು ಸಂಪೂರ್ಣ ವಿರೋಧ ವ್ಯಕ್ತಪಡಿಸಿದ್ದರು. ಮಾತ್ರವಲ್ಲದೆ ಟ್ರಂಪ್ ನ ರಿಪಬ್ಲಿಕನ್ ಪಕ್ಷದ ಹಲವು ಸದಸ್ಯರು ಕೂಡ ವಿರೋಧಿಸಿದ್ದರು. ಮೆಕ್ಸಿಕನ್–ಅಮೆರಿಕ ಗಡಿ ಗೋಡೆಯನ್ನು ನಿರ್ಮಿಸುವ ತನ್ನ ಚುನಾವಣಾ ಭರವಸೆಗಳ ಈಡೇರಿಕೆಗೆ ಹಿನ್ನಡೆ ಉಂಟಾಗುವುದು ಖಂಡಿತವೆಂದು ಮನಗಂಡ ಟ್ರಂಪ್, ಮೆಕ್ಸಿಕನ್ ಗೋಡೆ ನಿರ್ಮಾಣಕ್ಕಾಗಿ ಕಳೆದ ಡಿಸೆಂಬರ್ 17 ರಿಂದ ಸುಮಾರು 35 ದಿನಗಳ ಕಾಲ ಅಮೆರಿಕಾದ ಸರ್ಕಾರವನ್ನು "ಶಟ್ ಡೌನ್" ಮಾಡಿದ್ದರ ಕುರಿತು ಇದೇ ಕಾಲಂ ನಲ್ಲಿ ಈ ಹಿಂದೆ ಸಾಕಷ್ಟು ಬರೆಯಲಾಗಿದೆ.

ಇದೀಗ ಅಮೆರಿಕದ ಪಾರ್ಲಿಮೆಂಟ್ ತನ್ನ ಬಜೆಟಿನಲ್ಲಿ 333 ಶತಕೋಟಿ ಡಾಲರ್ ನ 'ಹಣದ ಮಸೂದೆ'ಯನ್ನು ಅಂಗೀಕರಿಸಿದೆ. ಇದರಲ್ಲಿ 'ಗಡಿ




ಭದ್ರತೆ' ಗೆ ಕೇವಲ 1.3 ಶತಕೋಟಿ ಡಾಲರ್ ನಷ್ಟು ಮಾತ್ರ ಒದಗಿಸಲಾಗಿದೆ. ಇದು ಟ್ರಂಪ್ ನ 2000 ಮೈಲುಗಳ ಯುಎಸ್–ಮೆಕ್ಸಿಕೋ ಗಡಿಯ ಉದ್ದಕ್ಕೂ ದೊಡ್ಡ ಎತ್ತರದ ಕಾಂಕ್ರೀಟ್ ಗೋಡೆ ನಿರ್ಮಿಸಲು ಸಾಕಾಗುವುದಿಲ್ಲ. ಆದ್ದರಿಂದ ಟ್ರಂಪ್ ಅಮೆರಕಾದ ಕಾಂಗ್ರೆಸನ್ನು ಬದಿಗೊತ್ತಿ, "ರಾಷ್ಟ್ರೀಯ ತುರ್ತು ಪರಿಸ್ಥಿತಿ" ಘೋಷಿಸುವುದಾಗಿ ಬೆದರಿಕೆ ಒಡ್ಡಿದ್ದಾರೆ. ಆದರೆ ಇದು ಟ್ರಂಪ್ ನ ನಿಜವಾದ ಘೋಷಣೆ ಯಾಗಿರದೆ, ಇದೊಂದು 2020 ರ ಅಧ್ಯಕ್ಷೀಯ ಚುನಾವಣೆಯಲ್ಲಿ ತನ್ನನ್ನು ಪುನರ್ ಆಯ್ಕೆ ಮಾಡಿಕೊಳ್ಳಲು ಹೆಣೆದಿರುವ, ಟೊಳ್ಳು ಹಾಗೂ ಗೊಡ್ಡು ಬೆದರಿಕೆಯೆಂದಿರುವ ಡೆಮೋಕ್ರಾಟರು, ಸೋಷಿಯಲಿಸ್ಟರು, ಮತ್ತು ಕಮ್ಯೂನಿಸ್ಟರು ಈ ಘೋಷಣೆ ಕಾನೂನು ಬಾಹಿರ ಹಾಗೂ ಅಸಂವಿಧಾನಿಕ ಕ್ರಮವೆಂದು ತಿರಸ್ಕರಿಸಿದ್ದಾರೆ. ಈ ಗೋಡೆಯ ನಿರ್ಮಾಣದ ಬಗ್ಗೆ ಮತ್ತು ಟ್ರಂಪ್ ಧೋರಣೆಯ ಬಗ್ಗೆ ತೀವ್ರ ವಿರೋಧ ವ್ಯಕ್ತ ಪಡಿಸಿದ್ದಾರೆ.




ಅವರಲ್ಲಿ, ಪ್ರಮುಖರು, ಕ್ಯಾಲಿಫೋರ್ನಿಯಾದ ಅಟಾರ್ನಿ ಜನರಲ್ ಮತ್ತು ಸೆನೆಟರ್ ಕಮಲಾ ಹ್ಯಾರಿಸ್ ಮತ್ತು ಬರ್ನೀ ಸ್ಯಾಂಡರ್ಸ್ ರವರು ಹಾಗೂ ಲ್ಯಾಟಿನೋ ದ ಹಲವಾರು ಗುಂಪುಗಳು. ರಿಪಬ್ಲಿಕನ್ ಸೆನೆಟ್ ರಾದ ಸೆನ್ಸ್ ರಾಡ್ ಪಾಲ್ ಮತ್ತು ಸುಸಾನ್ ಕಾಲಿನ್ಸ್ ರೂ ಕೂಡಾ, ಟ್ರಂಪ್ ರ ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಘೋಷಣೆ ಅಸಂವಿಧಾನಿಕ ಎಂಬ ಪ್ರತಿಭಟನೆಗೆ ಸೇರಿಕೊಂಡಿದ್ದಾರೆ. ಇದು ಟ್ರಂಪ್ ನನ್ನು ಮತ್ತಷ್ಟು ಪೇಚಿಗೆ ಸಿಕ್ಕಿ ಹಾಕಿಸಿದೆ ಎನ್ನಲಾಗಿದೆ.

ಟ್ರಂಪ್ ನಿಜವಾಗಿಯೂ ಗೋಡೆ ನಿರ್ಮಾಣವನ್ನು ಎಷ್ಟು ಗಂಭೀರವಾಗಿ ಪರಿಗಣಿಸಿದ್ದಾರೆ ಎಂಬುದರ ಕುರಿತಾಗಿ ಚರ್ಚೆಗಳು ನಡೆಯುತ್ತಿವೆ. ಫೆಡರಲ್ ಸರ್ಕಾರದ ಎರಡೂ ಸದನಗಳು ಕಳೆದ ಎರಡು ವರ್ಷಗಳಿಂದ ಇವರ ನಿಯಂತ್ರಣ ದಲ್ಲಿಯೇ ಇರುವಾಗ, ಗೋಡೆಯ ನಿರ್ಮಾಣದ ಬಗ್ಗೆ ಯಾವುದೇ ರೀತಿಯ ಗಂಭೀರ ಕ್ರಮವಿರಲಿಲ್ಲವೇಕೆ?. ಒಂದು ವರ್ಷದ ಹಿಂದೆ 25 ಶತಕೋಟಿ ಡಾಲರ್ ನೀಡಿದಾಗ ಅದನ್ನು ಟ್ರಂಪ್ ತಿರಸ್ಕರಿಸಿದ್ದು ಏಕೆ? ಎಂಬ ಪ್ರಶ್ನೆಗಳಿಗೆ ಟ್ರಂಪ್ ಬಳಿ ಉತ್ತರವಿಲ್ಲ. ಏಕೆಂದರೆ, ಬಿಳಿ ಮತದಾರರು ವಲಸೆಗಾರರನ್ನು ಮತ್ತು ಇತರ ಜನಾಂಗೀಯರನ್ನು ತೀವ್ರವಾಗಿ ವಿರೋಧಿಸುತ್ತಾರೆ. ಹಾಗಾಗಿ ಈ ಬಿಳಿ ಮತದಾರರಲ್ಲಿ ವರ್ಣಭೇದ ಮತ್ತು ಭಯವನ್ನು ಹುಟ್ಟು ಹಾಕಲು ಸಮಸ್ಯೆಯನ್ನು ಜೀವಂತವಾಗಿ ಇಟ್ಟುಕೊಂಡು ತನ್ನ ಮುಂದಿನ ಚುನಾವಣಾ ಸಂದರ್ಭಕ್ಕಾಗಿ ಬಳಸುವ ನಿಟ್ಟಿನಲ್ಲಿ ಅಧ್ಯಕ್ಷ ಟ್ರಂಪ್ರ್ ರೂಪಿಸಿ ಕೊಂಡಿರುವ ಹುನ್ನಾರವಾಗಿದೆ ಎಂಬುದು ವಿರೋಧಿ ಗುಂಪುಗಳ ಆರೋಪವಾಗಿದೆ. ಇದನ್ನು ಅಲ್ಲಗೆಳೆಯಲು ಸಾಧ್ಯವಿಲ್ಲವೆನ್ನುತ್ತಾರೆ ರಾಜಕೀಯ ಪಂಡಿತರು. ಸಾಮಾನ್ಯವಾಗಿ, ಬಿಳಿ ಮತದಾರರು ಟ್ರಂಪ್ ನ ಆಧಾರವಾಗಿದ್ದಾರೆ. ಏಕೆಂದರೆ, ವಲಸೆಗಾರರನ್ನು ಮತ್ತು ಕಪ್ಪು ಜನಾಂಗೀಯರನ್ನು ಈ ಬಿಳಿಯರು ಶತ್ರುಗಳೆಂದು ಪರಿಗಣಿಸಿದ್ದಾರೆ. ಜೊತೆಗೆ ಡೆಮಾಕ್ರಾಟರು, ಸೋಷಿಯಲಿಸ್ಟರು ಮತ್ತು ಕಮ್ಯೂನಿಸ್ಟರು ಟ್ರಂಪ್ ನ ವಲಸೆ ನೀತಿಯನ್ನು ವಿರೋಧಿಸುತ್ತಿದ್ದಾರೆ. ಇವೆಲ್ಲಾ ಸಮಸ್ಯೆಗಳು ಮುಂದಿನ 2020 ರ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ನ್ನು ಕಾಡುತ್ತಿರುವ ನಿಜವಾದ ಸಂಗತಿಗಳಾಗಿವೆ. ಈ ಹಿನ್ನೆಲೆಯಲ್ಲಿ, ಈ ಜನಾಂಗೀಯ ಕಾರ್ಯತಂತ್ರಕ್ಕೆ ಅಡಿಪಾಯ ಹಾಕುವ ನಿಟ್ಟಿನಲ್ಲಿ 'ಈ ಪೊಳ್ಳು ರಾಷ್ಟ್ರೀಯ ತುರ್ತು ಪರಿಸ್ಥಿತಿ' ಯನ್ನು ಹೇರುವ ಉನ್ಮಾದ ದಲ್ಲಿ ರಿಪಬ್ಲಿಕನ್ ಪಕ್ಷ ಮತ್ತು ಟ್ರಂಪ್ ನಿರತನಾಗಿದ್ದಾರೆ ಎಂಬುದು ರಾಜಕೀಯ ವಲಯದಲ್ಲಿ ಬಿಸಿ ಬಿಸಿ ಚರ್ಚಾ ವಿಷಯಗಳಾಗಿವೆ.

ಈಗಾಗಲೇ, ಮೆಕ್ಸಿಕೊ ಗೋಡೆ ನಿರ್ಮಾಣಕ್ಕೆ ಹಾಗೂ ಇತರೆ ಪ್ರದೇಶಗಳಿಗೆ ಅಮೆರಿಕಾದ ಕಾಂಗ್ರೆಸ್ ಹಣವನ್ನು ಹಂಚಿಕೆ ಮಾಡಿದೆ. ಲಭ್ಯವಿರುವ ಹಣವನ್ನು ರಕ್ಷಣಾ ಇಲಾಖೆ ಮತ್ತು ಪ್ರಕೃತಿ ವಿಪತ್ತು ಪರಿಹಾರ ನಿಧಿಗಳಿಗೂ ಸಾಕಷ್ಟು ಹಂಚಲಾಗಿದೆ. ಆದಾಗ್ಯೂ, ಟ್ರಂಪ್ ನ ರಾಷ್ಟ್ರೀಯ ತುರ್ತು ಪರಿಸ್ಥಿತಿ ಘೋಷಣೆಗೆ ಸಂಬಂದಿಸಿದಂತೆ, ಡೆಮಾಕ್ರಾಟ್ ಮುಖಂಡರು, ಅದರಲ್ಲೂ ಪ್ರಮುಖವಾಗಿ ಪ್ರತಿನಿಧಿ ಸಭೆಯ ಸ್ಪೀಕರ್ ನ್ಯಾನ್ಸಿ ಪೆಲೋಸಿ, ಹಾಗೂ ಡಿ.ಕ್ಯಾಲಿಫನ್ 'ಇದು ರಾಷ್ಟ್ರೀಯ ತುರ್ತು ಪರಿಸ್ಥಿತಿಯಲ್ಲ.. ಇದೊಂದು ಬುದ್ಧಿಮತ್ತೆಯಿಂದ ಕೂಡಿದ ಮೂರ್ಖತನದ ಪರಮಾವಧಿ ಘೋಷಣೆ ಮತ್ತು ಅತ್ಯಂತ ಕೆಟ್ಟ ಹಾಗೂ ನಕಲಿ ಘೋಷಣೆ' ಎಂದು ಅತ್ಯುಗ್ರವಾದ ಪದಗಳಿಂದ ಪ್ರತಿಕ್ರಿಯಿಸಿದ್ದಾರೆ.

ಜನರನ್ನುಭಯಭೀತಗೊಳಿಸುವ ತಂತ್ರ ಫಲಿಸುವುದಿಲ್ಲ ಎಂದು ಸೆನೆಟ್ ನ ಅಲ್ಪಸಂಖ್ಯಾತ ನಾಯಕ ಚಾರ್ಲ್ಸ್ ಸ್ಕ್ಯೂಮರ್ ತಮ್ಮ ಹೇಳಿಕೆಯಲ್ಲಿ ಈ ರೀತಿ ಪ್ರತಿಕ್ರಿಯಿಸಿದ್ದಾರೆ. ಟ್ರಂಪ್ ನ ರಾಷ್ಟ್ರೀಯ ತುರ್ತು ಪರಿಸ್ಥಿತಿ ಘೋಷಣೆ ಸಂವಿಧಾನ ಬಾಹಿರ ಕ್ರಿಯೆಯಾಗಿದೆ. ಅಧ್ಯಕ್ಷೀಯ ಅಧಿಕಾರವನ್ನು ತಮ್ಮ ಹಿತಾಸಕ್ತಿಗಾಗಿ ಸಮಗ್ರವಾಗಿ ದುರ್ಬಳಕೆ ಮಾಡಿಕೊಳ್ಳುವುದು ಕಾನೂನನ್ನು ನಗ್ನಗೊಳಿಸಲಾಗುವ ಕ್ರಮವಾಗಿದೆ" ಎಂದು ಕಠೋರ ಪದಗಳಿಂದ ತುರ್ತುಪರಿಸ್ಥಿತಿ ಯನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ.

ಅಧ್ಯಕ್ಷರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು, ಸಂವಿಧಾನ ವಿರೋಧ ಮತ್ತು ಕಾನೂನು ಬಾಹಿರ ಕ್ರಮಗಳನ್ನು ಅನುಸರಿಸಿದರೆ, ಅವರ ವಿರುದ್ಧ ವಿಶೇಷ ಅಧಿಕಾರ ಬಳಸಲು ಸಂವಿಧಾನವು ಕಾಂಗ್ರೆಸಿಗೆ ಎಲ್ಲಾ ರೀತಿಯ ಸ್ಪಷ್ಟ ಹಕ್ಕುಗಳನ್ನು ನೀಡಿದೆ. ಆದ್ದರಿಂದ ಈ ಹಕ್ಕುಗಳನ್ನು ಈ ಕ್ಲಿಷ್ಟ ಸಮಯದಲ್ಲಿ ಬಳಸಲು ಹಿಂಜರಿಯುವುದಿಲ್ಲ ಎಂದು ಸ್ಪೀಕರ್ ನ್ಯಾನ್ಸಿ ಹೇಳಿಕೆ ನೀಡಿ ಸ್ಪಷ್ಟ ಸಂದೇಶವನ್ನು ರವಾನಿಸಿದ್ದಾರೆ. ಟ್ರಂಪ್ ಘೋಷಣೆಯ ವಿರುದ್ಧ ಹಲವು ಆಯ್ಕೆಗಳಿವೆ. ಅದರಲ್ಲಿ ನ್ಯಾಯಾಲಯದ ಮೆಟ್ಟಲು ಏರುವುದು ಸೇರಿದೆ. ಇದು ಅಧಿಕಾರಶಾಹಿಯ ಅಸಂವಿಧಾನಿಕ ನಿಲುವುಗಳನ್ನು ನ್ಯಾಯಾಲಯದ ಮುಂದಿಡುವ ಕಾರ್ಯವಾಗಿದೆ ಎಂದಿದ್ದಾರೆ.

ವಾಸ್ತವದಲ್ಲಿ ಕಾಂಗ್ರೆಸ್ ಅಧ್ಯಕ್ಷರ ಮನವೊಲಿಕೆಯನ್ನು ಮಾಡಬೇಕಾಗುತ್ತದೆ. ಆದರೆ, ಈ ದಿನಗಳಲ್ಲಿ ರಾಜಕೀಯ ಪರಿಸ್ಥಿತಿ ಹದಗೆಟ್ಟು ಎಲ್ಲೆ ಮೀರಿದೆ. ಆದ್ದರಿಂದ ಇದೀಗ ಕಾಂಗ್ರೇಸ್ ತುರ್ತುಪರಿಸ್ಥಿತಿಯ ಘೋಷಣೆ ಯನ್ನು "ಶೂನ್ಯಗೊಳಿಸುವ" ನಿರ್ಧಾರ ತೆಗೆದುಕೊಳ್ಳಬಹುದು. ಅನಂತರ ಅಧ್ಯಕ್ಷರಿಗೆ "ಶೂನ್ಯೀಕರಣಗೊಳಿಸಿವಿಕೆ' ಯ ಸಲುವಾಗಿ ಅವರ ಸಹಿ ಗೆ ಕಳುಹಿಸಲಾಗುತ್ತದೆ. ಅದಕ್ಕೆ ಅವರು ಸಹಿ ಮಾಡುವುದನ್ನು ನಿರಾಕರಿಸಿದರೆ, ಕಾಂಗ್ರೆಸ್ ನ ನಿರ್ಣಯದಂತೆ, "ತುರ್ತು ಪರಿಸ್ಥಿತಿ" ಯ ಯಾವುದೇ ಘೋಷಣೆ ಶೂನ್ಯಗೊಂಡು "ಸ್ವಯಂಚಾಲಿತ" ವಾಗಿ ರದ್ದುಗೊಳ್ಳುತ್ತದೆ. ಆಗ ಅಧ್ಯಕ್ಷರು ಅದನ್ನು "ನಿಷೇಧಿಸಿದರೆ" ಕಾಂಗ್ರೆಸ್ ಮೂರನೇ ಎರಡರಷ್ಟು (2/3) ಮತದಿಂದ ಸೋಲಿಸಬೇಕಾಗುತ್ತದೆ. ಆಗ, ಅಧ್ಯಕ್ಷರ ಯಾವುದೇ ಘೋಷಣೆ ರದ್ದಾಗುತ್ತದೆ.

ಶ್ವೇತ ಭವನದ ರೋಸ್ ಗಾರ್ಡನ್ ನಲ್ಲಿ ಟ್ರಂಪ್ ಮಾತನಾಡುತ್ತಾ, "1976 ರ ರಾಷ್ಟ್ರೀಯ ಎಮರ್ಜೆನ್ಸಿ ಕಾಯಿದೆ'ಯ ಅನ್ವಯ, ಅಧ್ಯಕ್ಷರಿಗೆ ತುರ್ತುಪರಿಸ್ಥಿತಿ ಘೋಷಿಸಿಲು ಅವಕಾಶವಿದೆ. ಈ ಹಿಂದೆ ಬಿಲ್ ಕ್ಲಿಂಟನ್ 17 ಬಾರಿ, ಜಾರ್ಜ್ ಡಬ್ಲೂ ಬುಷ್ 13 ಬಾರಿ, ಹಾಗೂ ಬರಾಕ್ ಒಬಾಮಾ 12 ಬಾರಿ ರಾಷ್ಟ್ರೀಯ ತುರ್ತುಪರಿಸ್ಥಿತಿ ಯನ್ನು ಹೇರಿದ್ದಾರೆ. ಅವಾಗಲೂ, ಪರಿಸ್ಥಿತಿ ಅಷ್ಟೇನೂ ಕೆಟ್ಟದಾಗಿ ಇರಲಿಲ್ಲ. ಬುಷ್ ನ ಆಡಳಿತವಿದ್ದಾಗ, ಒಮ್ಮೆ ಮಾತ್ರ 9/11 ಸಂಕಷ್ಟದ ಪರಿಸ್ಥಿತಿ ಉದ್ಭವಗೊಂಡಿತ್ತು ಎಂದು ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲು ಟ್ರಂಪ್ ಪ್ರಯತ್ತಿಸಿದ್ದಾನೆ. ಆದರೆ, ವಿರೋಧ ಪಕ್ಷಗಳು ಇದನ್ನು ಸಾರಾಸಗಟಾಗಿ ತಿರಸ್ಕರಿಸಿ, 2020 ರ ಚುನಾವಣಾ ಗಿಮಿಕ್ಸ್ ಎಂದು ಲೇವಡಿ ಮಾಡಿದ್ದಾರೆ. ●



JANASHAKTHI KANNADA VARA PATRIKE FEBRUARY 25 - MARCH 3, 2019 Price: Rs. 10/- Date of Publication: 22 FEBRUARY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

# ಬಗರ್ ಹುಕುಂ ಸಾಗುವಳಿ ಸಕ್ರಮಕ್ಕೆ ಒತ್ತಾಯಿಸಿ ಧರಣಿ

**ಬಗರ್ ಹುಕುಂ ಸಾಗುವಳಿಯ ಸಕ್ರಮಕ್ಕಾಗಿ ಬಿಡುಗಡೆ ಮಾಡಿರುವ ಫಾರಂ ನಂ. 57 ಸ್ವೀಕಾರಕ್ಕೆ ಸಂಬಂಧ ಪಟ್ಟ ಗೊಂದಲ ನಿವಾರಣೆ, ನಗರ ವ್ಯಾಪ್ತಿ, ಗೋಮಾಳ ಭೂಮಿ ಮತ್ತು ಕೃಷಿಗೆ ಒಳಪಟ್ಟಿರುವ 'ಅರಣ್ಯ ಭೂಮಿ' ಎನ್ನಲಾಗುತ್ತಿರುವ ಬಗರ್ ಹುಕುಂ ಸಾಗುವಳಿಯ ಸಕ್ರಮಕ್ಕೆ ಹಾಗೂ ವಸತಿ ಮತ್ತಿತ್ತರೇ ಪ್ರಶ್ನೆಗಳ ಇತ್ಯಾರ್ಥವನ್ನು ಆಗ್ರಹಿಸಿ ಫೆಬ್ರವರಿ 19 ರಂದು ರೈತರು ಮತ್ತು ಕೃಷಿ ಕೂಲಿಕಾರರು ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಧರಣಿ ನಡೆಸಿದರು.**




ಕರ್ನಾಟಕ ಪ್ರಾಂತ ರೈತ ಸಂಘದ ನಾಯಕತ್ವದಲ್ಲಿ ರೈತರು, ಕೃಷಿಕೂಲಿಕಾರರು ಸುಮಾರು 15 ವರ್ಷಗಳಿಂದ ನಡೆಸಿದ ಹೋರಾಟ ಮತ್ತು ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರ ಮುತುವರ್ಜಿಯಿಂದ ಗೋಮಾಳ ಭೂಮಿಯನ್ನು ಉಳುಮೆ ಮಾಡುತ್ತಿದ್ದ ಬಗರ್ ಹುಕ್ಕುಂ ಸಾಗುವಳಿ ರೈತರಿಗೆ ಸಕ್ರಮ ಮಾಡಲು ಅಗತ್ಯವಿದ್ದ ಕಂದಾಯ ಕಾನೂನಿಗೆ ತಿದ್ದುಪಡಿ ಹಾಗೂ ವಿಶೇಷವಾಗಿ ಬಗರ್‌ಹುಕುಂ ಸಾಗುವಳಿಯ ಸಕ್ರಮಕ್ಕಾಗಿ ಹೊಸದಾಗಿ ಅರ್ಜಿ ಹಾಕಿಕೊಳ್ಳಲು ಅವಕಾಶ ನೀಡುವ ಮತ್ತೊಂದು ತಿದ್ದುಪಡಿಯನ್ನು ಹಿಂದಿನ ಸರ್ಕಾರದ ಕಾಲಾವಧಿಯಲ್ಲಿ ಮಾಡಲಾಯಿತು. ಇದರಿಂದ ಲಕ್ಷಾಂತರ ಬಡ ರೈತರು, ಕೃಷಿ ಕೂಲಿಕಾರರು ಮತ್ತು ದಲಿತರಿಗೆ ಒಂದಿಷ್ಟು ಭೂಮಿ ಸಿಗುವ ಅವಕಾಶಗಳು ಉಂಟಾಗಿವೆ.

ರಾಜ್ಯ ಸರ್ಕಾರದ ತೀರ್ಮಾನದ ಭಾಗವಾಗಿ ಈಗ ಸದ್ಯ ಫಾರಂ. ನಂ. 57 ನ್ನು ಬಿಡುಗಡೆ ಮಾಡಿ 16 ಮಾರ್ಚ್ 2019 ರೊಳಗೆ ಅರ್ಜಿಯನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ. ಫಾರಂ. ನಂ. 57 ನ್ನು ವಿತರಣೆ ಮಾಡುವ ಹಾಗೂ ಅವುಗಳನ್ನು ಸ್ವೀಕರಿಸುವ ಸಂಬಂಧ ಪಟ್ಟ ಅನೇಕ ಗೊಂದಲಗಳು ಉಂಟಾಗಿವೆ. ಕೋಲಾರ ಜಿಲ್ಲೆಯಲ್ಲಿ ಹಲವು ಪ್ರತಿಭಟನೆಗಳ ನಂತರ ಇತ್ತೀಚೆಗಷ್ಟೇ ಅರ್ಜಿಗಳನ್ನು ಸ್ವೀಕರಿಸುತ್ತಿದ್ದಾರೆ. ತುಮಕೂರು ಜಿಲ್ಲೆಯ ಗುಬ್ಬಿ, ಶಿರಾ ಇತ್ಯಾದಿ ತಾಲೂಕಗಳಲ್ಲಿ ತಾಲೂಕಾ ಆಫೀಸ್‌ನಲ್ಲಿ ದಿನಕ್ಕೆ ಕಛೇರಿ ಸೀಲ್‌ನೊಂದಿಗೆ ನಿಗದಿತ ಸಂಖ್ಯೆಯಲ್ಲಿ ವಿತರಿಸಲಾಗುತ್ತಿರುವ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುತ್ತಿದೆ. ಇನ್ನೂ ಕೆಲವು ತಾಲೂಕಗಳಲ್ಲಿ ಅರ್ಜಿಗಳನ್ನು ಅಂಗಡಿಗಳಲ್ಲಿ ಖರೀದಿ ಮಾಡಿ ತಾಲ್ಲೂಕ ಕಛೇರಿಗೆ ಸಲ್ಲಿಸಲಾಗುತ್ತಿದೆ. ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ತಾಲೂಕುಗಳೂ, ಇಡೀಯಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಡಿಯಿಂದ 18 ಕಿ.ಮೀ. ವ್ಯಾಪ್ತಿಯೊಳಗೆ ಬರುವುದರಿಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲವೆಂದು ಹೇಳುತ್ತಿದ್ದರು. ಜನವರಿ 3, 2019 ರ ರೈತರ ಹೋರಾಟದ ಫಲವಾಗಿ ಅರ್ಜಿಗಳನ್ನು ಸ್ವೀಕರಿಸಲು ಸೂಚನೆ ನೀಡಿದ್ದಾರೆ. ತುಮಕೂರು ಜಿಲ್ಲೆಯು ಒಳಗೊಂಡು ಅನೇಕ ತಾಲೂಕಗಳಲ್ಲಿ ಅರ್ಜಿಯ ಜೊತೆಗೆ ಆಧಾರ್ ಕಾರ್ಡ್ ಮತ್ತು ಉಳುಮೆ ಮಾಡುತ್ತಿರುವ ಕೃಷಿ ಭೂಮಿಯ ಪಹಣಿ ಪ್ರತಿಯನ್ನು ರೈತರು ಸಲ್ಲಿಸಿದ್ದು. 20–30 ವರ್ಷಗಳಿಂದ ಉಳುಮೆ ಮಾಡುತ್ತಿರುವ ಭೂಮಿಯು 'ಅರಣ್ಯ'ಕ್ಕೆ ಸೇರಿದೆಯೆಂದು 'ಪಹಣಿ'ಯಲ್ಲಿ ನಮೂದು ಆಗಿರುವ ಕಾರಣ ಅರ್ಜಿಯನ್ನೇ ಸ್ವೀಕರಿಸುವುದಿಲ್ಲವೆಂದು ಅಧಿಕಾರಿಗಳು ರೈತರನ್ನು ವಾಪಾಸು ಕಳುಹಿಸುತ್ತಿದ್ದರು. ಮೈಸೂರು ಜಿಲ್ಲೆಯಲ್ಲಿ ಈಗಲೂ ಸಹ ಗೋಮಾಳ ಭೂಮಿ ಮತ್ತು ಮಹಾನಗರ ಪಾಲಿಕೆಗಳ ಗಡಿಗಳಿಂದ 10 ಕಿ.ಮೀ. ನಗರ ಸಭೆಯ ಗಡಿಗಳಿಂದ 5 ಕಿ.ಮೀ. ಹಾಗೂ ಪುರಸಭೆ ಗಡಿಗಳಿಂದ 3 ಕಿ.ಮೀ. ವ್ಯಾಪ್ತಿಯೊಳಗೆ ನಿಮ್ಮ ಭೂಮಿ ಬರುವುದರಿಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲವೆಂದು ರೈತರನ್ನ ವಾಪಾಸು ಕಳುಹಿಸುತ್ತಿದ್ದಾರೆ.



ಆದರೆ ಅಂತಹ ಯಾವುದೇ ಸೂಚನೆ ಅಥವ ಸುತ್ತೋಲೆಗಳನ್ನು ತಾವು ಕಳುಹಿಸಿಲ್ಲವೆಂದು ಕಂದಾಯ ಇಲಾಖೆಯ ಉನ್ನತ ಅಧಿಕಾರಿಗಳು ಹೇಳುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ತಾವುಗಳು ಮಧ್ಯೆ ಪ್ರವೇಶ ಮಾಡಿ, 25–30 ವರ್ಷಗಳಿಂದ ಉಳುಮೆ ಮಾಡಿಕೊಂಡು ಜೀವನ ನಡೆಸುತ್ತಿರುವ ಬಡ

ಪುಟ 14 ಕ್ಕೆ

# ರಾಜ್ಯ ಗ್ರಾಮ ಪಂಚಾಯತ್ ನೌಕರರ ಧರಣಿ

ಅಂದಿನ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ದಿನಾಂಕ 19–7–2017 ರಂದು ನಡೆದ ಸಭೆಯಲ್ಲಿ ಚರ್ಚಿಸಿ ತಿರ್ಮಾನಿಸಿದಂತೆ ರಾಜ್ಯದ ಗ್ರಾಮಪಂಚಾಯತಿ ಸಿಬ್ಬಂದಿಗಳಿಗೆ ವೇತನ ಭದ್ರತೆ ನೀಡಿ ಹಣಕಾಸು ಬಿಡುಗಡೆ ಮಾಡಲಾಗಿದೆ.

1994 ರಲ್ಲಿ ಆರ್ಥಿಕ ಇಲಾಖೆ ಒಪ್ಪಿಗೆ ಪಡೆದು ಪ್ರತಿಯೊಂದು ಗ್ರಾಮಪಂಚಾಯಿತಿಗೆ ಒಂದು ಬಿಲ್ ಕಲೆಕ್ಟರ್, ಒಂದು ಕ್ಲರ್ಕ್ ಕಂ ಟೈಪಿಸ್ಟ್, ಒಂದು ಪಂಪ್ ಆಪರೇಟರ್, ಒಂದು ಜವಾನ, ಒಂದು ಸ್ವೀಪರ್ ಹುದ್ದೆಗಳನ್ನು ಸೃಷ್ಟಿಸಲಾಗಿದೆ. 2008 ರಲ್ಲಿ ಮತ್ತೊಮ್ಮೆ ಸೇವಾ ನಿಯಮಾವಳಿ ರಚಿಸುವಾಗ ಕುಡಿಯುವ ನೀರು ಸ್ಥಾವರಕ್ಕೆ ಒಂದು ಪಂಪ್ ಆಪರೇಟರ್ ಹುದ್ದೆ ಸೃಷ್ಟಿಸಲು ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದೆ. 2014 ರಲ್ಲಿ ಕರ್ಕ್ ಕಂ ಟೈಪಿಸ್ಟ್ ಹುದ್ದೆಯನ್ನು ಕ್ಲರ್ಕ್ ಕಂ ಡಾಟಾ ಎಂಟ್ರೀ ಆಪರೇಟರ್ ಎಂದು ಮರುನಾಮಕರಣ ಮಾಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಂಡಿಸಿದ ಪ್ರಸ್ತಾವನೆಗೆ ಹಣಕಾಸು ಇಲಾಖೆ ಒಪ್ಪಿಗೆ ನೀಡಿದೆ.

ಅಪರ ಕಾರ್ಯದರ್ಶಿ ಶ್ರೀ ಎಮ್.ಎಸ್.ಸ್ವಾಮಿ ವರದಿಯಂತೆ ಪಂಚಾಯಿತಿಯಲ್ಲಿ ಬಿಲ್‌ಕಲೆಕ್ಟರ್, ಕುಡಿಯುವ ನೀರು ಸ್ಥಾವರಕ್ಕೆ ಒಬ್ಬ ಪಂಪ್ ಆಪರೇಟರ್, ಜವಾನ, ಐ.ಪಿ.ಡಿ ಸಾಲಪ್ಪ ರವರ ವರದಿಯಂತೆ 700 ಜನಸಂಖ್ಯೆಗೆ ಒಬ್ಬ ಕಸಗುಡಿಸುವ ಹುದ್ದೆಗಳನ್ನು ಆರ್ಥಿಕ ಇಲಾಖೆ ಒಪ್ಪಿಗೆ ಪಡೆದು ಹುದ್ದೆ ಸೃಷ್ಟಿಸಬೇಕು.

ಜೊತೆಗೆ ಹಣಕಾಸು ಇಲಾಖೆ ಒಪ್ಪಿಗೆ ಪಡೆದು ಕೆಲಸ ನಿರ್ವಹಿಸುತ್ತಿರುವ ಈ ಗ್ರಾಮಪಂಚಾಯತ್ ಸಿಬ್ಬಂದಿಗಳಿಗೂ ಕೂಡ ವೇತನ ಶ್ರೇಣಿಯನ್ನು ನಿಗದಿ ಪಡೆಸಬೇಕೆಂದು ಮತ್ತು ಬಜೆಟ್‌ನಲ್ಲಿ ಅಗತ್ಯ ಹಣಕಾಸು ಒದಗಿಸಲು ನೌಕರರು ಒತ್ತಾಯಿಸಿದರು.






ಕರ್ನಾಟಕ ರಾಜ್ಯ ಗ್ರಾಮಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳಾದ ವಾಟರ್‌ಮ್ಯಾನ್/ಪಂಪ್ ಆಪರೇಟರ್, ಜವಾನ ಕಸಗುಡಿಸುವವ, ಬಿಲ್‌ಕಲೆಕ್ಟರ್, ಕ್ಲರ್ಕ್ ಕಂ ಕಂಪ್ಯೂಟರ್ ಆಪರೇಟರ್ ಇತ್ಯಾದಿ ಸಿಬ್ಬಂದಿಗಳಿಗೆ ದಿನಾಂಕ 31–10–2017 ರವರೆಗೆ ನೇಮಕವಾಗಿರುವ ಈ ಮೇಲ್ಕಂಡ ಎಲ್ಲಾ ಸಿಬ್ಬಂದಿಗಳಿಗೆ ಇ.ಎಫ್,ಎಮ್. ಎಸ್.ನಲ್ಲಿ ಸೇರಿಸಿ. ಎಲ್ಲಾ ಸಿಬ್ಬಂದಿಗಳಿಗೆ ದಿನಾಂಕ 2–3–2017 ರಿಂದ ಸರಕಾರದಿಂದ ನೇರವೇತನ ಕೊಡಬೇಕೆಂದು ಆದೇಶ ಮಾಡಿದ್ದರು. ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮಪಂಚಾಯಿತಿ ಸಿಬ್ಬಂದಿಗಳ ಮಾಹಿತಿಗಳನ್ನು ಪಂಚತಂತ್ರದಲ್ಲಿ 43 ಸಾವಿರ ಸಿಬ್ಬಂದಿಗಳನ್ನು ಮಾತ್ರ ಸೇರಿಸಿ. ಉಳಿದ 18 ಸಾವಿರ ಸಿಬ್ಬಂದಿಗಳನ್ನು ಪಂಚತಂತ್ರದಲ್ಲಿ ಸೇರಿಸಲು ದಿನಾಂಕ 10–5–2018ರ ಒಳಗೆ ಸೇರಿಸಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆಯಿಂದ ಸುತ್ತೋಲೆ ಕಳುಹಿಸಿದ್ದರು. ಈವರಂಗೂ ಸೇರಿಸಿರುವುದಿಲ್ಲ.



ವೇತನ ಶ್ರೇಣಿ, ಸೇವಾ ನಿಯಮಾವಳಿ, ಪೆನ್ಷನ್, ವೈದ್ಯಕೀಯ ವೆಚ್ಚ, 1252 ಗ್ರಾಮಪಂಚಾಯತ್‌ಗಳನ್ನು ಮೇಲ್ದರ್ಜೆಗೆ ಏರಿಸುವುದು, ಎಮ್.ಎಸ್.ಸ್ವಾಮಿರವರ ವರದಿಯ ಶಿಫಾರಸ್ಸಿನಂತೆ ಜನಸಂಖ್ಯೆಗೆ ಅನುಗುಣವಾಗಿ ಗ್ರಾಮಪಂಚಾಯಿತಿಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ವಿವಿಧ ಹುದ್ದೆಗಳನ್ನು ಸೃಷ್ಟಿಸಬೇಕು. ನಿವೃತ್ತಿ ಹೊಂದಿದ ಸಿಬ್ಬಂದಿಗಳಿಗೆ ಗ್ರಾಜ್ಯುಟಿ ಕೊಡಲು ಮಧ್ಯಪ್ರವೇಶ ಮಾಡಬೇಕು.ಇತ್ಯಾದಿ ಬೇಡಿಕೆಗಳ ಬಗ್ಗೆ ದಿನಾಂಕ 28–8–2018 ರಂದು ರಾಜ್ಯದಲ್ಲಿ ಹೋರಾಟ ನಡೆಸಿದಾಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಇಲಾಖೆಯ ಮುಖ್ಯಸ್ಥರು ಸಂಘದ ಮುಖಂಡರ ಜೊತೆ ಮಾತುಕತೆ ನಡೆದು ಬೇಡಿಕೆ ಬಗೆಹರಿಸುವುದಾಗಿ ತಿಳಿಸಲಾಗಿತ್ತು. ನಂತರ ಕೆಲವು ಸುತ್ತಿನ ಮಾತುಕತೆ ನಡೆದಿದ್ದರು, ಒಂದು ವರ್ಷದಿಂದ ಇ.ಎಫ್.ಎಮ್.ಎಸ್ ಗೆ ಒಳಪಡದ 18 ಸಾವಿರ ಸಿಬ್ಬಂದಿಗೆ ವೇತನ ನೀಡಿಲ್ಲ. ಉಳಿದ 43 ಸಾವಿರ ಸಿಬ್ಬಂದಿಗೆ ತಿಂಗಳು–ತಿಂಗಳು ನಿಗದಿ ಮಾಡಿದ ಕನಿಷ್ಠ ವೇತನ ವೇತನ ಸಿಗುತ್ತಿಲ್ಲ. ದಿನಾಂಕ 21–2–2019ರಂದು ಅನಿರ್ದಿಷ್ಟ ಕಾಲ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿತ್ತು. ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಮತ್ತು ಪ್ರಧಾನ ಕಾರ್ಯದರ್ಶಿ ಜಿ. ರಾಮಕೃಷ್ಣ ಹೋರಾಟದ ನೇತೃತ್ವ ವಹಿಸಿದ್ದರು. ಎಲ್.ಕೆ. ಅತೀಕ್ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕೆಂಪೇಗೌಡ ನಿರ್ದೇಶಕರು ಮನವಿ ಸ್ವೀಕರಿಸಿ ಮಾತನಾಡಿದರು.



**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**